UNIVERSAL LIBRARY
OU_198397
UNIVERSAL LIBRARY

ಮೊದಲನೆ ಮುತ್ತು

# ತಿಂಮನ ತಲೆ

ಬೀಚಿ

ಮುದ್ರಕರು :
ಶೇ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ, ಧಾರವಾಡ

ಎರಡೂವರೆ ರೂಪಾಯಿ

ಪ್ರಕಾಶಕರು :
ತಿಂಮ ಸಾಹಿತ್ಯಮಾಲಾ
ಬಳ್ಳಾರಿ

# ಸಂಪಾದಕರ ಮಾತು

"ಮಾತಿನಿಂದ ಮೂಳೆ ಮುರಿದೀತೆ?" ಎಂಬುದನ್ನು ಬಹು ಜನರ ಬಾಯಿಂದ ನಾನು ಕೇಳಿದ್ದುಂಟು. ಆದರೆ ಅನೇಕ ಗಾದೆ ಮಾತುಗಳಂತೆ ಇದೂ ಸುಳ್ಳು! ಬರೀ ಮಾತಿನಿಂದಲೇ ಬರೆ ಕೊಡುವವರಿದ್ದಾರೆ. ಈ ಹರಿತವಿರುವದು ಹಾಸ್ಯದ ಇರಿತದಲ್ಲಿ. ಇದರ ಶಕ್ತಿಯು ಹೈಡ್ರೋಜನ್ ಬಾಂಬಿನಷ್ಟು, ಇದರ ಪರಿಣಾಮವು ಗುಡ್ಡದಷ್ಟು. ಇಚ್ಛೆಯು ಮಾತ್ರ ಒಳ್ಳೆಯದಿರಬೇಕು. ಇಲ್ಲದಿದ್ದಲ್ಲಿ ಎಲ್ಲವೂ ನಿರರ್ಥಕ. ಸಾಹಿತ್ಯ ದೇವತೆಯ ಗುಡಿಯಲ್ಲಿ ಇದರದೂ ಒಂದು ನಂದದ ದೀಪ ಉರಿಯುತ್ತಿದೆ, ಕಿರುನಗುವಿನ ಪ್ರಕಾಶವನ್ನು ಚೆಲ್ಲಿದೆ.

ಕನ್ನಡ ಸಾಹಿತ್ಯದಲ್ಲಿ ಹಾಸ್ಯದ ಅಭಾವವು ಹೇಳಿಕೊಳ್ಳುವಷ್ಟಿದೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಮುಖ್ಯವಾಗಿ ಇದರ ಸಾಧನೆಯೇ ಅಷ್ಟು ಸುಲಭವಲ್ಲ. ನಾಲ್ಕು ವರ್ಷ ಓದಿ ಬಿ. ಎ ಮಾಡಿದಷ್ಟು ಸುಲಲಿತವಲ್ಲ. ಬಾಯಿಪಾಠಕ್ಕೆ ಬಗ್ಗಲು ವ್ಯಾಕರಣವಲ್ಲ. ಪಳಗಿಸಿ ಬೆಳಗಿಸುವುದು ಮುಂದಿನ ಕಾರ್ಯ; ಮೊದಲು ದೇವದತ್ತವಾಗಿ ಹುಟ್ಟಿನೊಂದಿಗೆ ಇದು ಲಭಿಸಿರಬೇಕು. ಅಂತಹರೆಲ್ಲಿಯೋ ಲಕ್ಷಕ್ಕೊಬ್ಬರು? ವಿಡಂಬನ ಸಾಹಿತ್ಯವು ಆಂಗ್ಲ ಭಾಷೆಯಲ್ಲಿ ಸಾಕಷ್ಟು ಬೆಳೆದಿದೆ. ಹಲವಾರು ಪುಸ್ತಕ ಪತ್ರಿಕೆಗಳಂತೂ ಹಾಸ್ಯಕ್ಕೇ ಮೀಸಲಾಗಿವೆ. ಪ್ರಪಂಚಕ್ಕೆ ಆಂಗ್ಲ ಸಾಹಿತ್ಯವು 'ಪಂಚ್'ನ್ನು ಕೊಟ್ಟಿದೆ; ಇನ್ನೇನು ಬೇಕು? ಕನ್ನಡದಲ್ಲಿ ಮಾತ್ರ ಇಲ್ಲವೇ ಇಲ್ಲ ಎನ್ನುವಷ್ಟು ಕೊಂಚವೇ ಇದೆ. ಅಂದ ಮಾತ್ರಕ್ಕೆ ಈ ಕ್ಷೇತ್ರವು ಬೀಳಾಗಿಯೇ ಬಿದ್ದಿದೆ ಎಂಬ ಅಭಿಪ್ರಾಯವಲ್ಲ. ಆಧುನಿಕ ಸಾಹಿತ್ಯದಲ್ಲಿಯೂ ಕೊಂಚ ಕೆಲಸವು ಆಗಿದೆ. ಕನ್ನಡಕ್ಕೊಬ್ಬರೇ ಆಗಿದ್ದ ಕೈಲಾಸಂರವರು ಉತ್ತಮ ಸೇವೆ ಸಲ್ಲಿಸಿದ್ದಾರೆ. ಕಸ್ತೂರಿ, ಬೇಂದ್ರೆ, ಶ್ರೀರಂಗ, ಶಿವರಾಮ ಕಾರಂತರು ಮುಂತಾದ ಹಿರಿಯ ಸಾಹಿತಿಗಳು ಓದುಗರಿಗೆ ನಗುವಿನ ಜೇನನ್ನು ಉಣಿಸಿದ್ದಾರೆ, ಉಣಿಸುತ್ತಲಿದ್ದಾರೆ. ಡಾ. ಶಿವರಾಮರು ಕನ್ನಡಮ್ಮನ ಮುಂದೆ ಕೊರವಂಜಿಯನ್ನು ಕುಣಿಸುತ್ತಿದ್ದಾರೆ. ಇತ್ತೀಚಿಗೆ ಬೀಚಿಯವರಂತೂ

ಜನರ ಮನಕ್ಕೆ ಮೆಚ್ಚು ಮದ್ದು ಮಾಡುತ್ತಿದ್ದಾರೆ, ತಮ್ಮ 'ತಿಂಮ' ನಿಂದ. ಉತ್ತರ ಕರ್ನಾಟಕದ— ಸುಪ್ರಸಿದ್ಧ ಪತ್ರಿಕೆಗಳಾದ ವಿಶಾಲ ಕರ್ನಾಟಕ, ಜಯಂತಿ, ಮಹಾವೀರ, ದಕ್ಷಿಣ ಕನ್ನಡದ ಯುಗಪುರುಷ, ಮೈಸೂರ ಶಕ್ತಿ, ನಗುವನಂದ ಮುಂತಾದ ಪತ್ರಿಕೆಗಳಲ್ಲಿ ವಿಡಂಬನಾತ್ಮಕ ಲೇಖನಗಳನ್ನು ಬರೆದು ಎಲ್ಲರಿಗೂ ಚಿರಪರಿಚಿತರಾದ ಬೀಚಿಯವರು ಕರ್ನಾಟಕದಲ್ಲೊಂದು ಹುಚ್ಚುನಗುವಿನ ಹೊಳೆಯನ್ನೇ ಹರಿಸುತ್ತಿದ್ದಾರೆ.

ಇಂತೆಲ್ಲ ನಿಸರ್ಗಸಂಪತ್ತನ್ನು ಕಾಡಬೆಳದಿಂಗಳಂತೆ ಕಳೆದುಕೊಳ್ಳ ಕೂಡದೆಂಬ ಕಕ್ಕುಲತೆ ಪ್ರಬಲವಾಯಿತು ನನ್ನಲ್ಲಿ. ಐದೇ ರೂಪಾಯಿಗಳಿಗೆ ವರ್ಷದಲ್ಲಿ ಮೂರೂ ಪುಸ್ತಕಗಳನ್ನು ಸಲ್ಲಿಸುವ ಆಶೆ ಇದೆ. ಪುಟಗಳ ಗ್ಯಾರಂಟಿ ಬೇಡತಾನೆ ? ಹೊಣೆ ಹೊತ್ತಿದ್ದೇನೆ, ಹಗುರು ಮಾಡಿಕೊಡುವಿರೆಂದು ಕೋರುತ್ತೇನೆ.

# ಮುನ್ನುಡಿ

ಪದ್ಯಕ್ಕೆ ಪರಿಚಯದ ಅಗತ್ಯವಿದ್ದೀತು. ಆದರೆ ಹಾಸ್ಯಕ್ಕೆ ಪರಿಚಯ ವೆಂದರೇನು? ನಗೆಯ ಮಾತಿಗೆ ಮಲ್ಲಿನಾಥಿ ಏಕೆ? ಕೋಳಿ ಕೂಗದಿದ್ದರೂ ಬೆಳಗಾಗುವುದು ಬೇರೆ ನಿಲ್ಲುವುದಿಲ್ಲ. ಆದರೂ ಸೃಷ್ಟಿಕ್ರಮ ನಡೆಯಬೇಕು.

ನಗೆ, ವಿನೋದ, ಹಾಸ್ಯ—ಇವೆಲ್ಲವುಗಳಿಗೂ ತವರುಮನೆ ತಿಂಮ. ಆತನ ಸಂಗ್ರಹಕ್ಕೆ 'ಇದು ಎಲ್ಲೆ' ಎಂಬುದಿಲ್ಲ. ನಕ್ಷತ್ರಗಳನ್ನು ಎಣಿಸ ಬಲ್ಲವರಾರು? ಪಾಂಡವರ ಪರೋಕ್ಷದಲ್ಲಿ ಅವರ ಅಕ್ಷಯ ಪಾತ್ರೆ ತಿಂಮನ ಪಕ್ಷಕ್ಕೆ ಬಂದಿರಬೇಕು. ಇಲ್ಲವಾದರೆ ಈ ವಿಪುಲತೆಗೆ ಬೇರೆ ಸಮರ್ಥನೆ ಇಲ್ಲ.

'ಹಣವಿಲ್ಲದವನ ಬಾಳು ಹೆಣಕ್ಕಿಂತ ಕಡೆ' ಎನ್ನುವ ವಾಡಿಕೆಯ ಮಾತನ್ನು ನಾವು ಕೇಳುತ್ತಲೇ ಇದ್ದೇವೆ. ಆದರೆ ಅದು ಹಣವೆಂದಾಗದೆ ಹಾಸ್ಯವೆಂದಾಗಿದ್ದರೆ ಹೆಚ್ಚು ಸೂಚ್ಯವೆನಿಸಬಹುದಾಗಿತ್ತು. ಜೀವನದ ರಥಕ್ಕೆ ಹಾಸ್ಯವು ಕೀಲದೆಣ್ಣೆ ಇದ್ದಂತೆ. ವಿನೋದವಿರುವಲ್ಲಿ ವಿರಸವಿಲ್ಲ. ನಗೆಯಿಲ್ಲ. ಬದುಕಿನ ಮೇಲೆ ಬೆಳಕು ಬೀಳುವುದಕ್ಕೆ ಹಾಸ್ಯ, ವಿನೋದ, ನಗೆ ಎಲ್ಲವೂ ಬೇಕು. ಉಪ್ಪು ಕಾರಗಳಿಲ್ಲದೆ ಅಡಿಗೆಯಾಗಲಾರದು. ಅವೆಲ್ಲ, ಕಲೆ ಯನ್ನು ಬಲ್ಲ ಕುಶಲಿಯ ಕೈಯಲ್ಲಿ ಸಿಕ್ಕಿ ಇಲ್ಲಿ ರಸಪಾಕವಾಗಿದೆ.

"ಉಲ್ಲಾಸವೇ ಐಶ್ವರ್ಯ" ಎನ್ನುವ ರಶಿಯದ ಗಾದೆಯ ಮಾತು ಶ್ರೀ. "ಬೀಚಿ" ಯವರಿಗೆ ಅಕ್ಷರಶಃ ಅನ್ವಯಿಸುತ್ತದೆ. ಅವರಿಗೆ ಇರುವುದು ಅದೊಂದೇ ಸಂಪತ್ತು! ಹೊನ್ನಿನ ಹಾಸಿಗೆಯ ಮೇಲೆ ಹೊರಳಾಡುತ್ತಿರು ವವರು ಸದಾ ನರಳುವುದನ್ನೇ ಪಡೆದು ಬಂದಿದ್ದರೆ ಶ್ರೀ. ಬೀಚಿ 'ಯಾವತ್ತೂ' ನಗುತ್ತಲೇ ಇರುತ್ತಾರೆ. ಅವರ ಉಲ್ಲಾಸದ ಪರಿಪೂರ್ಣತೆ ತಿಂಮನ ಅವ ತಾರದಲ್ಲಿ ವ್ಯೈವೆತ್ತು ಬಂದಿದೆ. ಅವರ ಮಾನಸಪುತ್ರನು ಅವರನ್ನೇ ಮೀರಿ ಸಿದ್ದಾನೆ. ಕವಿಗಿಂತ ಕವಿಯ ಕೃತಿ ಎಂದಿಗೂ ದೊಡ್ಡದಲ್ಲವೇ?

ಹಾಸ್ಯ ಬಲ್ಲವನ ಸಹವಾಸವೆಂದರೆ ಹಾಲು ಜೇನು ಸವಿದಂತೆ. ಹಾಸ್ಯ ವನ್ನು ಇತರರಿಗೆ ಕೊಡುವುದರಲ್ಲಿಯೇ ಶ್ರೀ. ಬೀಚಿಯವರ ಶ್ರೇಷ್ಠತೆಯಷ್ಟೇ ಅಲ್ಲ ಇತರರೊಂದಿಗೆ ಅದನ್ನು ಅವರಷ್ಟೇ ತನ್ಮಯತೆಯಿಂದ ಸವಿಯುವುದ ರಲ್ಲಿಯೂ ಅವರು ತಮ್ಮ ಶ್ರೇಷ್ಠತೆಯನ್ನು ವ್ಯಕ್ತಪಡಿಸುತ್ತಾರೆ. ನಗುವುದೂ

ನಗಿಸುವುದೂ ಎರಡೂ ದೊಡ್ಡ ಗುಣಗಳು. ಅವೆರಡನ್ನೂ ಅಂಗೈಯಲ್ಲಿ ಹಿಡಿದವನಿಗೆ ಅಮರತ್ವ ಅಂಗಾಲಿನ ಅಡಿಯಲ್ಲಿ. ಡಿಕನ್ಸ್, ಕಾರ್ಲ್ಲಾಯಿಲ ಮೊದಲಾದವರು ನಗೆಯ ಶ್ರೇಷ್ಠ ಸಾಹಿತ್ಯವನ್ನು ಕೊಟ್ಟರು. ಆದರೆ ನಗೆ ಅವರ ಜೀವನದ ಅನ್ನವಾಗಿರಲಿಲ್ಲ.

ವಿನೋದದೃಷ್ಟಿ ಷೇಕ್ಸ್ಪಿಯರನಲ್ಲಿ ವಿಶೇಷವಾಗಿತ್ತು. "ವಿನೋದದ ವೈಭವವು ಆಡುವವನ ನಾಲಗೆಯಲ್ಲಿ ವ್ಯಕ್ತವಾಗದೆ, ಕೇಳುವವನ ಕಿವಿಯಲ್ಲಿ ಪ್ರಕಟವಾಗುತ್ತದೆ" ಎಂದು ಆತನು "ಪ್ರಣಯದ ನಿರರ್ಥಕ ಪರಿಶ್ರಮ" (Loves Labour Lost) ಎನ್ನುವ ತನ್ನ ನಾಟಕದಲ್ಲಿ ಬರೆದಿರುವುದೇ ಆ ಮಾತಿಗೆ ಸಾಕ್ಷಿ.

ಹಾಸ್ಯ ಪ್ರವೃತ್ತಿಗೆ "ಬೀಚಿ" ಕೊಟ್ಟಿರುವ ಇನ್ನೊಂದು ಹೆಸರು "ತಿಂಮತನ."

"ತಿಂಮ" "ತಿಂಮ" ಎಂದರೆ,—ಇದು ಯಾರವಾದರೂ ವಿಡಂಬನವೇ ? ಆ ಪ್ರಶ್ನೆ ಕೇಳಿದವರು ಅನೇಕರಿದ್ದಾರೆ. ಹಾಸ್ಯಪ್ರವೃತ್ತಿ ಮನುಷ್ಯ ಜೀವನದೊಂದಿಗೇ ಬೆಳೆದು ಬಂದಿದೆಯಾದುದರಿಂದ, ಆ ಪ್ರಥಮ ಸ್ತ್ರೀ–ಪುರುಷರೊಂದಿಗೇ ತಿಂಮನೂ ಅವತರಿಸಿ ಬಂದಿದ್ದಾನೆ. ಆತನೇ ಅವತರಿಸದೆ ಆತನ ಪರಂಪರೆ ಆರಂಭಗೊಳ್ಳುವುದಾದರೂ ಹೇಗೆ? ತಿಂಮನಿಗೆ ಯಾವ ಹೋಲಿಕೆಯೂ ಇಲ್ಲ. ಅದು, ಇದು ಎಂದು ಆತನನ್ನು ಯಾರಾದರೂ ಅದಕ್ಕೆ ಇದಕ್ಕೆ ಹೋಲಿಸುವ ಪ್ರಯತ್ನ ಮಾಡಿದರೆ, ಅವರ ಪ್ರಯತ್ನ ಕರಿಯ ನಾಯಿಯನ್ನು ಬಿಳಿಯದನ್ನಾಗಿ ಮಾಡಬೇಕೆನ್ನುವ ಸಾಹಸದಷ್ಟೇ ಜಾಣತನವಾಗಬಹುದು.

"ತಿಂಮತನ"ದ ಸಂಶೋಧನೆ ನಮ್ಮ ಆಳವಿಗೆ ನಿಲುಕದು. ಆದರೆ "ಬೀಚಿ" ಯವರ ತಿಂಮ ಮಾತ್ರ ನಮಗೆ ತೀರ ಸಮೀಪದವನು. ಆತನು ಅವತರಿಸಿ ಆಗಲೇ ಹದಿನೈದು ವರುಷಗಳ ಹಳೆಯ ಮಾತು. ಜನತೆಯ ಎದುರಿನಲ್ಲಿ ಪ್ರಕಟವಾದುದು ಮಾತ್ರ ತೀರ ಈಚಿಗೆ. ನಾನು "ವಿಶಾಲ ಕರ್ನಾಟಕ" ದಿನಪತ್ರಿಕೆಯನ್ನು ನಡಸುತ್ತಿದ್ದಾಗ, ಹೊಸ ಬೆಳಕನ್ನು ಗುರುತಿಸಿ ಜನತೆಗೆ ಕೊಡಬೇಕೆನ್ನುವ ನನ್ನ ಪ್ರಯತ್ನದಲ್ಲಿ, ಬೀಚಿ ನನಗೆ ಎದುರಾದರು. ಅದರ ಫಲ, ಜನಾಂಗದ ಹಸ್ತು ಮುಖಗಳ ಪ್ರತಿನಿಧಿಯಾಗಿ ತಿಂಮ, ದಿನದ ಬೆಳಕಿನೊಂದಿಗೆ ಮೂಡಿ ಬಂದ.

ಆತನ ವ್ಯಕ್ತಿತ್ವದಲ್ಲಿ ಮಾನವ ಗುಣಗಳೆಲ್ಲವೂ ಅಭಿವ್ಯಕ್ತಗೊಂಡಿವೆ. ತಪ್ಪು ಒಪ್ಪು, ನಗೆ ಹೊಗೆ, ಗಾಂಭೀರ್ಯ ಸರಳತೆ, ಕೋಪ ಕಾರುಣ್ಯ— ಆತನಲ್ಲಿ ಯಾವುದಿಲ್ಲ? ಆತನು ಮುಖ್ಯ ಮಂತ್ರಿ, ಶಾಸನ ಸಭೆಯ ಸದಸ್ಯ. ಸರಕಾರದ ಆಡಳಿತಗಾರ, ಪತ್ರಿಕೆಯ ಸಂಪಾದಕ, ವಕೀಲ, ವೈದ್ಯ, ಶಾಲಾ ಶಿಕ್ಷಕ. ಅವನು ಸೆರೆಮನೆಯನ್ನು ಕಂಡು ಬಂದ ದೇಶಭಕ್ತನೂ ಅಹುದು. ಆತನ ಗರುಡ ದೃಷ್ಟಿಯಿಂದ ಪಾರು ಆಗಬಲ್ಲದು ಯಾವುದೂ ಇಲ್ಲ. ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದ ಮಾತ್ರಕ್ಕೆ ತಿಂಮನ ಕಣ್ಣಿಗೆ ಕಾಣದೇ ಹೋದೀತೇ? ಸಮಾಜದ ಕಪ್ಪು ಕಲೆಗಳ ಮೇಲೆಲ್ಲ ಆತನು "ಕ್ಷ" ಕಿರಣ ಹಿಡಿದು ನಿಂತಿದ್ದಾನೆ. ಆತನ ಹಾಸ್ಯಕ್ಕೆ ನಮ್ಮೊಳಗಿನ ಅನೇಕರೇ ವಸ್ತು ವಾಗಿದ್ದರೂ, ನಮಗರಿಯದಂತೆ ಆತನೊಂದಿಗೆ ನಕ್ಕು ನಮ್ಮನ್ನೇ ನಾವು ನಗೆಯಾಡಿಕೊಳ್ಳುತ್ತೇವೆ. ಆ ಹಾಸ್ಯದಲ್ಲಿ ಸಮಾಜವನ್ನು ಸರ್ವಾಂಗ ಸುಂದರಗೊಳಿಸಬೇಕೆನ್ನುವ ಕಳಕಳಿ ಉದ್ದಕ್ಕೂ ಹೆಣೆದುಕೊಂಡಿದೆ. "ನಕ್ಕು ನಗಿಸುವಾ ನಗೆ ಲೇಸು" ಎನ್ನುವ ಸರ್ವಜ್ಞನ ಉಕ್ತಿಯ ಮಧುರ ಪರಿಪಾಕ ವನ್ನು ನಾವು ಇಲ್ಲಿ ಕಾಣುತ್ತೇವೆ.

ನಗೆಯಿಲ್ಲದ ಜೀವನ ನಂಜಾಗುತ್ತದೆ. ಬದುಕು ಅನೇಕರಿಗೆ ನಗುವಷ್ಟು ಲಘುವಾಗಿಲ್ಲವಾದರೂ ನಗೆ, ಇನ್ನೊಬ್ಬರು ಕೊಡಬೇಕಾದ ದಾನವಲ್ಲ. ನಗೆಯನ್ನು ಹಿಡಿದುಕೊಂಡೇ ಹೆಣಗಿದರೆ ಸಾಧನೆಯ ಶ್ರಮ ಸುಲಭವಾಗು ತ್ತದೆ. "ನಾನು ನಗುವುದಿಲ್ಲ" ವೆಂದರೆ ಜಗತ್ತು "ಬಿಡು" ಎನ್ನುತ್ತದೆ. ನಾವು ನಕ್ಕರೆ ನಮ್ಮೊಂದಿಗೆ ಜಗತ್ತು ನಗುತ್ತದೆ. ಜಗತ್ತನ್ನು ಜೀವನದ ಒಂದು ಭಾಗವನ್ನಾಗಿ ತೆಗೆದುಕೊಳ್ಳಿರೆಂದು ಬೀಚಿ ಹೇಳುತ್ತಾರೆ. ಅದು ದೊಡ್ಡ ಸತ್ಯ. ತಮ್ಮ ನಡುವೆ ಇರುವ ಈ ಹಾಸ್ಯದ ಈ ಅನುಪಮ ನಿಧಿ ಯನ್ನು ಕನ್ನಡಿಗರು ಅರಿತುಕೊಳ್ಳಬೇಕು. ಬಳಸಿಕೊಳ್ಳಬೇಕು.

ಲಾಸ್ ಏಂಜಲಿಸ್<br>ಯು. ಎಸ್. ಎ.<br>೨೦–೯–೬೦

—ಪಾಟೀಲ ಪುಟ್ಟಪ್ಪ

# ತಿಂಮ ದರ್ಶನ

'ನನ್ನ ರಾಜ್ಯದಲ್ಲಿ ಯಾರೂ ಹಾಡ ಕೂಡದು' ಎಂದೊಬ್ಬ ರಾಜನು ಕಟ್ಟಾಜ್ಞೆ ಮಾಡಿದ್ದನಂತೆ. ಅಂತಹದೊಂದು ರಾಜಾಜ್ಞೆ ಇಂದಿಲ್ಲವಾದರೂ ಯಾರೂ ನಗಕೂಡದು ಎಂದಂತಾಗಿದೆ ಇಂದಿನ ಬಾಳು. ಮೀಸೆಗಿದ್ದ ಬೆಲೆ ಮೊದುಳಿಗಿಲ್ಲದಾಗ, ತೊಪ್ಪಿಗೆಗಿದ್ದ ಬೆಲೆ ತಲೆಗಿಲ್ಲದಾಗ, ಬಾಲವೇ ನಾಯಿಯನ್ನು ಆಡಿಸುತ್ತದೆ. ಜೀವನದಲ್ಲಿಯ ನಗು ಕಮರಿಹೋದಲ್ಲಿ ಏನಾಶ್ಚರ್ಯ? ಇಂತೆಲ್ಲಕ್ಕೂ ಅತೀತನಾಗಿ ನಕ್ಕು ನಗಿಸಬಲ್ಲ ತಿಂಮ. ನಗು ಏಕೆ ಬೇಕು ಎಂದೊಬ್ಬರು ಕೇಳಿದಾಗಂತೂ ತಿಂಮ ಗಹಗಹಿಸಿ ನಕ್ಕು, ನಕ್ಕು ನಕ್ಕು ಬಿದ್ದನಂತೆ.

ಅದೆಲ್ಲವೂ ಆಯಿತು, ತಿಂಮ ಯಾರು ಎಂಬುದು ಯಾರೂ ಕೇಳುವ ಪ್ರಶ್ನೆ. ಯಾವೊಬ್ಬ ತಿರುಮಲರಾಯನನ್ನಾಗಲಿ ತಿಂಮಪ್ಪನನ್ನಾಗಲಿ ಮುಂದಿಟ್ಟುಗೊಂಡು ಇದನ್ನು ಬರೆದಿಲ್ಲ; ತಾನೇ ಈ ತಿಂಮನೆಂದು ಯಾರೂ ಆತ್ಮಸ್ತುತಿ ಮಾಡಿಕೊಳ್ಳುವದು ಬೇಡ. ಆದರೆ ಗ್ರಂಥಕರ್ತನ ಸೃಷ್ಟಿಯ ಬೊಂಬೆಯಂತೂ ಸರ್ವಥಾ ಅಲ್ಲ. ತಿಂಮ ತಿಂಮತನದ ಅವತಾರ ಎಂದು ಹೇಳಿಬಿಟ್ಟರೆ ಆಯಿತೆ? ಜನಪದ ಸಾಹಿತ್ಯದಂತೆ, ಶ್ರುತಿ ಸ್ಮೃತಿಗಳಂತೆ ಇನ್ನಿ– ಬಹುಕಾಲ ಬರೆವಣಿಗೆಯಲ್ಲಿ ಬಾರದೆ ಬರೀ ಬಾಯಿ ಕಿವಿಗಳ ಬಳಿಕೆಯಲ್ಲಿಯೇ ಉಳಿದ ಅನೇಕ ನಗು–ಚೇಷ್ಟೆಗಳನ್ನು ಇಲ್ಲಿ ಸಂಗ್ರಹಿಸಿದ್ದೇನೆ. ಮಕ್ಕಳ ಆಟದಲ್ಲಿ, ಗೆಳೆಯರ ಕೂಟದಲ್ಲಿ, ಹಿರಿ–ಕಿರಿಯರ ಕಿರಿ–ಹಿರಿತನಗಳಲ್ಲಿ, ಚತುರರ ಹೆಡ್ಡತನದಲ್ಲಿ ದಡ್ಡರ ದೊಡ್ಡತನದಲ್ಲಿ ಕಂಡು ಕೇಳಿದ ಚೇಷ್ಟೆಗಳಿಗೆಲ್ಲಾ—ಪಾಪ! ತಿಂಮನನ್ನೇ ನಾಯಕನನ್ನಾಗಿ ಒಡ್ಡಿದ್ದೇನೆ. ಕಂಣು ಮನಸುಗಳಿಂದ ನಾನು ಕಂಡ, ಇಡೀ ವಿಶ್ವದಿಂದಲೇ ಬಳಿಸಿಕೊಂಡ ನಗುವಿನ ಭಾಗ್ಯಕ್ಕೆ ಬಂಡವಾಳಕ್ಕೆ ನಾನು ಯಾರಿಗೆ ಋಣಿ ಯಾರಿಗೆ ಅಲ್ಲ? ತಿಂಮನಿಗಂತೂ ತಪ್ಪದೇ ಋಣಿ; ಒಪ್ಪಲೇ ಬೇಕು. ತಿಂಮನ ನಗು ದೇಹವಾದರೆ ಆ ನಗುವಿನ ಹಿಂದೆ ಹುದುಗಿಕೊಂಡಿರುವ ನೋವೇ ಜೀವ. ಇದನ್ನು ಗುರುತಿಸದಿದ್ದರೆ ದೊರೆವುದು ತಿಂಮನ ಹೆಣ ಮಾತ್ರ. ನಾಟಕದಲ್ಲಿಯ ಮಲ್ಲಮಲ್ಲಿಯರಂತೆ, ದೊಡ್ಡಾಟದ ಸಾರಥಿಯಂತೆ, ಸರ್ಕಸ್ಸಿನ ಗಿಡ್ಡೂನಂತೆ ಹಲ್ಲುಕಿರಿಸಿ ಮನೆಗೆ ಕಳಿಸುವದು ತಿಂಮನ ಕಸುಬಲ್ಲ. ನಗುವಿನ ಆಳದಲ್ಲಿ ಇಳಿದರೆ ಅಲ್ಲಿ ಅಳುವಿದೆ. ನಗುವ ಮುಖದ ಹಿಂದೆ ನೊಂದ ಹೃದಯವಿದೆ.

ತಿಂಮ ಕಿಡಿಗೇಡಿಯಂತೆ ಕಂಡಾಗ ಅವನ ಸಹೃದಯತೆಯ ಕಡೆ ನೋಡ
ಬೇಕು. ಅಧಿಕಪ್ರಸಂಗಿಯಂತೆ ಕಂಡಾಗ ಅವನ ಮಾತಿನ ಸತ್ಯತೆಗಾಗಿ
ಮೆಚ್ಚಬೇಕು. ಆದರೆ ಒಂದು ಮಾತು. ತಿಂಮನು ಅಂದುದೇ ಸತ್ಯ,
ಅವನು ತುಳಿದುದೇ ಹಾದಿ, ಅದನ್ನೆಲ್ಲರೂ ಒಪ್ಪಲೇ ಬೇಕು ಎಂಬ ಹಟ
ತಿಂಮನಿಗೆಳ್ಳಷ್ಟೂ ಇಲ್ಲ. ಅವನೊಬ್ಬ ಅರಸಿಕ ಗೊಡ್ಡು ರಾಜಕಾರಣಿಯೂ
ಅಲ್ಲ. ಜುಟ್ಟಿನಲ್ಲಿ ಜೀವ ಹಿಡಿಯುವ ನೀರಸ ದಡ್ಡನೂ ಅಲ್ಲ. ವೈವಿಧ್ಯ
ತೆಯು ಸೃಷ್ಟಿಯಲ್ಲಿಯ ನಿಯಮ; ಅದರ ಸಹನೆ ಮಾನವ ಧರ್ಮ.

ಓದುಗರಿಗಾಗಿ ಒಂದು ಮಾತನ್ನಂತೂ ಇಲ್ಲಿ ಸ್ಪಷ್ಟವಾಗಿ ಹೇಳುವದ
ತ್ಯವಶ್ಯ. ಚೇಷ್ಟೆಗಳು ಚೆನ್ನಾಗಿವೆ ಎಂದು ಎಲ್ಲವನ್ನೂ ಒಂದೇ ಬಾರಿ
ಗುಳುಗುಳು ನುಂಗಿ ಮಾತ್ರ ಕೂಡಬೇಡಿ ದಯವಿಟ್ಟು. ಅಜೀರ್ಣವಾಗಿ
ತಲೆಗೆ ಹೊಟ್ಟೆ ನೋವು ಬರಲೂ ಸಾಕು. ಅದೂ ಅಲ್ಲದೆ ಈ ಚೇಷ್ಟೆಗಳ
ಸ್ವಾದವನ್ನೂ ಪೂರ್ತಿ ಸವಿದಂತಾಗಲಿಕ್ಕಿಲ್ಲ. ಕೊಂಚವನ್ನೇ ತಿಂದು ಹೆಚ್ಚು
ಹೆಚ್ಚಾಗಿ ಅಗಿಯುವದು ಹಿತ ಎಂಬುದು ಹೊಟ್ಟೆಗೆ ಅನ್ವಯಿಸಿದಷ್ಟು ತಲೆಗೂ
ಅನ್ವಯಿಸುವ ಮಾತಲ್ಲವೆ? ಆಗಿಷ್ಟು ಈಗಿಷ್ಟು ಓದಿ ಉಕ್ಕಿ ಬಂದಷ್ಟು ನಕ್ಕು
ಹೊರದೃಷ್ಟಿಯನ್ನು ಒಳಗಡೆ ಹೊರಳಿಸಿ ಸತ್ಯತೆಗಾಗಿ ಹುಡುಕಾಡುವದು
ಅನುಪಾನದ ಕ್ರಮ. ತಿಂಮನ ತಲೆ ತೋರಿಸುವ ಜಂಬ ಕೊಚ್ಚಿ ಗುಡ್ಡ
ದಂತಹ ಸಾಹಸ ಮಾಡಿದ್ದೇನೆ; ಸಧ್ಯ ತಿಂಮನ ಜುಟ್ಟಾದರೂ ನಿಮಗೆ ಕಂಡರೆ
ನನ್ನ ಪ್ರಯತ್ನವು ವ್ಯರ್ಥವಲ್ಲ. ಕಂಣು ಕುಕ್ಕುವ ನಡುಹಗಲಲ್ಲಿ ಅರುಂಧತಿ
ಯನ್ನು ಕಂಡೆನೆಂಬ ಮುಲಾಜಿಗೆ ಮಾತ್ರ ಯಾರೂ ಹೋಗಬೇಕಿಲ್ಲ.

ನಾನು ಇನ್ನಾರಾರಿಗೆ ಋಣಿ! ಮನದ ಕಂಣಿನಿಂದ ನಾ ಕಂಡ ತಿಂಮ
ನನ್ನು ಕುಂಚಿಯ ಕೈಯಿಂದ ಚಿತ್ರಿಸಿ ಓದುಗರ ಕಂಣ ಮುಂದೆ ತಂದಿರುವ
ನನ್ನ ಕಿರಿ ಗೆಳೆಯ ನರಸಿಂಹನಿಗೆ ನನ್ನ ಅಭಿವಂದನೆಗಳು ಎಂದಿಷ್ಟೇ ಹೇಳಿದರೆ
ತೀರಿತೆ? ತಿಂಮನನ್ನೇ ಚಿತ್ರಿಸಿದ ಸಿಂಹನ ಕುಂಚಿಗೆ ಬೊಮ್ಮನ ಭಯವೂ ಇಲ್ಲ,
ಎಂದದಾರೋ ಅದರಂತೆ. ಇನ್ನು ಪ್ರಕಾಶಕರ ಬಗ್ಗೆ– ಕನ್ನಡ ಸಾಹಿತ್ಯದಲ್ಲಿ
ಈ ಮಾದರಿಯ ಗ್ರಂಥಗಳಲ್ಲಿ ಇದೇ ಮೊದಲನೆಯದು ಎಂದು ಇದ್ದುದನ್ನು
ಇದ್ದಂತೆ ಹೇಳಿಕೊಂಡರೆ ತಿಂಮನ ತಲೆ ತಿರುಗಿದೆ ಎಂದಾರೂ ಅನ್ನಲಿಕ್ಕಿಲ್ಲ
ವಷ್ಟೇ? ಅವಶ್ಯವಿದ್ದ ಕಾರಣ ಹೇಳಿಕೊಳ್ಳಲೇಬೇಕಾಗಿದೆ. ಹೊಸತೆಂದ

ಕೂಡಲೆ ಅಯ್ಯೋ ಎಂದು ಅಂಜುವವರೇ ಹೆಚ್ಚು ಜನರಿರುವಾಗ ಹಿಂಜರಿಯದೆ ಆದರದ ಕೈಚಾಚಿ ತಿಂಮನನ್ನು ಬರಮಾಡಿಕೊಂಡ "ತಿಂಮ ಸಾಹಿತ್ಯ ಮಾಲೆ" ಯ ಮಾಲಕರಿಗೆ ತಿಂಮನು ಆಶೀರ್ವದಿಸಿ ಭಲಾ ಎಂದು ಬೆನ್ನು ಚಪ್ಪರಿಸಿದ್ದಾನೆ. ಓಡುವ ತಿಂಮನನ್ನು ಹಿಡಿದು ಆಡಿಸಿದ ಕೀರ್ತಿಯು ಮೊಟ್ಟ ಮೊದಲು ಹುಬ್ಬಳ್ಳಿಯ ದಿನ ಪತ್ರಿಕೆಯಾದ "ವಿಶಾಲ ಕರ್ನಾಟಕ"ಕ್ಕೆ ಸಲ್ಲುತ್ತದೆ. ರಸಿಕ ಓದುಗರಿಗೆ ಅದೆಷ್ಟೋ ದಿನಗಳಿಂದ ತಿಂಮನನ್ನು ತೋರುತ್ತ ಮಹದುಪಕಾರವನ್ನು ಮಾಡಿದೆ. ಈ ಪತ್ರಿಕೆಯಲ್ಲಿ ಈಗಾಗಲೇ ಪ್ರಕಟವಾಗಿರುವ ರಸ ಚೇಷ್ಟೆಗಳಲ್ಲಿ ಹಲವನ್ನು ಮಾತ್ರ ಹೆಕ್ಕಿಕೊಂಡು ಈ ಗ್ರಂಥದಲ್ಲಿ ಸೇರಿಸಲಾಗಿದೆ. ತಿಂಮನ ಲಾಲನೆ ಪಾಲನೆಗಳ ಹೊಣೆಹೊತ್ತ ರಸಿಕ ಓದುಗರಿಗಂತೂ ನಾನು ಸದಾ ಋಣಿ. ಕೇಳಿದೊಡನೆಯೇ ಕರೆಗೆ ಓ ಕೊಟ್ಟು 'ಆಗ ಬಾ, ಈಗ ಬಾ, ಹೋಗಿ ಬಾ,' ಎನ್ನದೆ ಕೂಡಲೆ ಅಮೆರಿಕೆಯಿಂದ ಮುನ್ನುಡಿಯನ್ನು ಬರೆದು ಕಳುಹಿ ತಿಂಮನ ತಲೆಗೆ ಕಿರೀಟವನ್ನಿಟ್ಟ ಶ್ರೀ ಪಾಟೀಲ ಪುಟ್ಟಪ್ಪನವರಿಗೆ ನಾನು ಆಭಾರಿಯೆಂದರೆ ಅದೊಂದು ಬರೀ ನಾಟಕದ ಮಾತು ಆದೀತು. ತಿಂಮನ ಪೋಷಣೆಯಲ್ಲಿ ನನ್ನ ಪಾತ್ರವು ಅವರ ಪಾತ್ರಕ್ಕಿಂತಲೂ ಎಷ್ಟು ಹೆಚ್ಚಿಲ್ಲ. ತಿಂಮನಲ್ಲಿಯ ತಿಂಮತನವನ್ನು ಮೊದಲು ಗುರುತಿಸಿ ತಿಂಮನ ಸರ್ವತೋಮುಖದ ಬೆಳವಣಿಗೆಗೆ 'ರೈತ' ಪತ್ರಿಕೆಯ ಶ್ರೀ ಕೋ. ಚೆನ್ನಬಸಪ್ಪನವರು ಕಾರಣರಿದ್ದಾರೆ.

ಇಷ್ಟೆಲ್ಲ ತಿಂಮನ ತಲೆಯ ಇತಿಹಾಸವಾದರೂ ಅದನ್ನು ಸಾರ್ವಜನಿಕರೆದುರು ಮಂಡಿಸುವಂತೆ ಸರ್ವಾಂಗ ಸುಂದರವಾಗುವಂತೆ ಅಚ್ಚು ಮಾಡಿಕೊಟ್ಟ ಸಾಧನ ಪ್ರೆಸ್ಸಿನ ಶ್ರೀ. ಕುಲಕರ್ಣಿ ಶೇಷಗಿರಿರಾಯರಿಗೆ ನನ್ನ ಕೃತಜ್ಞತೆಗಳು.

ಕಡೆಯ ಮಾತನ್ನೊಂದು ಹೇಳಿ ಮುಗಿಸೋಣ. ಜೀವನವನ್ನೊಂದು ಸ್ಮಶಾನಯಾತ್ರೆಯೆಂದು ತಿಳಿದು ನಕ್ಕರೆ ಹಲ್ಲು ಕಂಡಾವು ಎಂದು ಉಸಿರು ಬಿಗಿಹಿಡಿದು ಕುಳಿತ ಅಳುಬುರುಕ ಮಡಿವಂತರ ಗೊಡವೆ ತಿಂಮನಿಗಿಲ್ಲ. ನಗಬಲ್ಲವರೆಲ್ಲರೂ ತಿಂಮನ ತಲೆಯ ಮೇಲೆ ತಪ್ಪದೇ ಕೈಯಾಡಿಸಬೇಕು. ಹೊಟ್ಟೆ ತುಂಬ ನಕ್ಕರೆ, ಬಾಯಿತುಂಬ ಸಕ್ಕರೆ, ಅಗೋ ನೋಡಿ, ತಿಂಮನ ತಲೆ!

ನಿಮ್ಮ ತಿಂಮನ ಗೆಳೆಯ

**ಬೀಚಿ**

# ಅರ್ಪಣೆ

ಕೊಂಡು ಓದುವ

ಕನ್ನಡಿಗರಿಗೆ

# ತಲೆಯಲ್ಲೇನೇನಿದೆ ?


## ಗುರುಕುಲ

ನಾನು—ನಮ್ಮಪ್ಪ
ಅಪ್ಪನ ನೆನಪು
ತಿಂಮನ ಸ್ಕೂಲು
ಕಿವಿ ಇಲ್ಲದ ಕುರುಡ
ವಯಸ್ಸು ಕಾರಣ
ಹಲ್ಲು ಕಂಡಾವು
ತಿಂಮನ ಮರಣ
ನಪಾಸಾದ ಮಾಸ್ತರರು
ತಿಂಮನ ಬೆಳ್ಳು
ಸರಸ್ವತಿ ಪ್ರಸಾದ
ಪ್ರಶ್ನೆ ಪತ್ರಿಕೆ
ಪಠ್ಯ ಪುಸ್ತಕ
ಚರ್ಚಿಲ್ ತಿಂಮ
ಹೊಸ ದೃಷ್ಟಿ
ಇನ್ನೊಂದು ಕಾಗದ !
ಸದ್ಯಕ್ಕೆ ಸಾಕು
ತಿರುಮಂತ್ರ
ಆಣೆಗೊಂದು ಆನೆ
ತಿಂಮನ ಕ್ಲಾಸು
ನಂಗನಿಸಿದ್ದು

## ಭಾಷಣ ಭೂಷರು

ಉಳಿಪವರಾರು ?
ತಿಳಿತಿಲ್ಲೊ ?
ನನ್ನ ಭಾಷಣ
ಸ್ವಂತ ಡಬ್ಬಿ
ಉತ್ತಮ ಉಪಯೋಗ
ನಾನೂ ನಿಮ್ಮಂತೆ
ಮಾನಸ ಶಾಸ್ತ್ರ
ನಾಡಹಬ್ಬದ ಭಾಷಣ
ಯಾರು ಮೊದಲು ?

## ವೃತ್ತಿಗಳ ಒಳಗುಟ್ಟು

ಯಾವುದಕ್ಕೆ ಲಾಯಿಖು ?
ನಮ್ಮ ಡಾಕ್ಟರು
ಜಾಣ ಡಾಕ್ಟರು
ಸರ್ಟಿಫಿಕೇಟುಗಳು
ಹೃದಯ ರೋಗ
ಎರಡು ಗುಣಗಳ ವಕೀಲ
ತಕ್ಕ ಪಾರ್ಟಿ
ಆತ್ಮಹತ್ಯೆ
ಸುಪ್ರಸಿದ್ಧ ಡಾಕ್ಟರರು
ಸರಿಯಾದ ಸಂಶಯ ?
ವೃತ್ತಿ ಏನು ?
ಪಶು ಚಿಕಿತ್ಸೆ
ಅಭ್ಯಾಸ ಕಾರಣ
ಪ್ರಾಮಾಣಿಕ ವಕೀಲ
ಅವಸರದ ಪರಿಹಾರ

## ಕಲೆ–ಕೊಲೆ

ಏನು ಗತಿ
ಸಂಗೀತಕ್ಕೆ ಸಿದ್ಧತೆ
ಕಾಟು ಹಾಕುವ ಸ್ಫೂರ್ತಿ
ಸಂಗೀತಕ್ಕೆ ಔಷಧಿ
ಕಲಾಮಂದಿರ
ಹೃದಯದ್ರಾವಕ

## ಸಂಸಾರಿಗ ತಿಂಮ


ಅಯ್ಯೋ ! ಸೀಮೆ ಎಣ್ಣೆ !!
ತಿಂಮನ ಜುಟ್ಟು
ಜೀವದಾಸೆ
ಏಕತಂತ್ರ ಜಗತ್ತು
ಮಕ್ಕಳೆಷ್ಟು ?
ತಿಂಮನ ಹೆಂಡತಿ
ಅಹಿಂಸಾ ವಾದಿ
ಅವರನ್ನೇ ಕರಿಯಿರಿ
ತಕ್ಕಗುರು
ಹೊಸ ಆಭರಣ
ಈಗ ತಿಳಿಯಿತು
ತಿಂಮನ ತಪಸ್ಸು
ವೀರಪುರುಷ ತಿಂಮ
ಹೆಡ್ಡತಿ ಕಾಗದ
ಡಾರ್ವಿನ್ ವಾದ
ತಿಂಮನ ಕನಸು
ಲೈಫ್ ಇನ್ಶೂರ್
ನೆರಳಿನ ಆಕಾಶ


## (ಅ) ರಾಜಕೀಯ



ನಮ್ಮ ಮಾತೇ
ಅನುಪಾನ ಕ್ರಮ
ವೀರ ರಮಣಿಯರು
ಅಮೇರಿಕೆಯ ಗುಟ್ಟು
ಧೂಮಕೇತು
ಏಕೀಕರಣ?
ಇಂದಿನ ಗಣಪತಿ
ಪ್ರಶ್ನೋತ್ತರ
ಸ್ವಚ್ಛತೆ
ಗೌತಮ ಬುದ್ಧ
ನಾಟಕದ ಉಪದೇಶ
ಎಚ್ಚರವಾಯಿತು
ಮುಖ್ಯ ಪಾರ್ಟಿ
ಶಾಸನ ಸಭೆ
ಪರಿಹಾರ
ತ್ರೈರಾಶಿಕ
'ಜೈ'ರೋಗ
ನನ್ನ ಕಸುಬು
ಪಟಾಕ್ಷಿ
ಅವಳೇ ಹೇಳಿದ್ದಳು
ವ್ಯವಹಾರಜ್ಞಾನಿ ತಿಂಮ
ತಿಂಮನ ಸ್ಮಾರಕ
ಮುಂದುವರಿದ ವೀರ
ಕೊರತೆಗೆ ಮದ್ದು


## ಉಳಿದೆಲ್ಲ


ತಿಂಮನ ಕಳವು
ತಿಳಾಪ
ಕತ್ತಲಲ್ಲಿತ್ತು
ಪ್ರೇಮ ಚಿಕಿತ್ಸೆ
ಬೆಲ್ಲ
ಭಾವೀಭಾವ
ಅವರ ಮೂಗು
ಅಧ್ಯಕ್ಷರ ನಡತೆ
ಪುನಃ ಮದುವೆ
ಸೆರೆ ಕುಡಿದರೆ
ಅಡದೆ ಮಾಡುವನು
ಕರ್ನಾಟಕದ ಹುಲಿಗಳು
ಪಿಟೀಲು ಕೇಳಿದ
ಇದೇನು ಮಹಾ ?


ಮಹಾತ್ಮ
ಶ್ರೀಖಂಡ
ಅಶ್ಲೀಲ ಸಾಹಿತ್ಯ
ಕೊಂಚ ಅವಸರವಿದೆ
ತಿಂಮನಿಗನಿಸಿದ್ದು
ಯಾವುದಾದರೂ ಸರಿಯೇ
ಅಡವಿಯ ದೆವ್ವ
ಕಡೇ ಮಾತು
ಸಾಹಿತಿ ತಿಂಮ
ಆಕಳಲ್ಲ
ಕರ್ಪೂರ
ಭಿಕ್ಷೆ
ಉಡುಗೊರೆ
ಕುಟುಂಬ ಸಹಿತ
ಸೆರೆಕುಡುಕ ತಿಂಮ
ಇದು ನಿಜವೇ ?
ಬೀಗ ಮುರಿಯುವವರು
ದಂಪತ್ವೈರಿ ದೇವರು
ಜಾತೀಯ ತಳಹದಿ
ಅನುಭವ
ಯಾವುದು ಅನ್ಯಾಯ?
ಐದನೇ ನಂಬರ ಸೌಜನ್ಯ
ಹೆಸರು ಹಾಳು ಮಾಡುವ ಖಾತೆ
ಮಂಣು
ಕಂಣ ಪರೀಕ್ಷೆ
ಬರೆಹಗಾರರ ಸ್ವಾತಂತ್ರ್ಯ
ಸರ್ವಾಸ್ಪತ್ರೆಗಳು
ಅಲ್ಲಿಯ ಅಭ್ಯಾಸ
ಅತಿ ಸುಲಭ ಮಾರ್ಗ ?
ತುಪ್ಪದ ವಾಸನೆ ?
ಪತ್ರ ಬಂದಾಗ
ಪರಸ್ಥಳ
ಹುಚ್ಚಾಸ್ಪತ್ರೆಯಲ್ಲಿ
ಕ್ಷಮಾಪಣೆ
ಪ್ರಾಣಿದಯೆ
ಗಡಿಬಿಡಿ
ಬರೀಬೋರ್ಡು
ಉತ್ಸಾಹ ಸಾಲದು
ಈಗೇನು ಮಾಡಬೇಕು?
ಕಡಲೆ ಗುಗ್ಗರಿ
ಗಂಡ— ಹೆಂಡತಿ
ಹುಚ್ಚಾಸ್ಪತ್ರೆಯ ಹಿಂಬದಿಯಲ್ಲಿ
ಕಾಲು ಜಾಡಿಸುವ ಗುರುಗಳು
ಎದುರು ಮನೆ ತಿಂಮ
ತಿಂಮನ ಬಾಲ


.........................



ನಗುವು ಸಹಜದ ಧರ್ಮ; ನಗಿಸುವುದು ಪರಧರ್ಮ ।
ನಗುವ ಕೇಳುತ ನಗುವದತಿಶಯದ ಧರ್ಮ ॥
ನಗುವ ನಗಿಸುವ ನಗಿಸಿ ನಗುತ ಬಾಳುವ ವರವ ।
ಮಿಗೆ ನೀನು ಬೇಡಿಕೊಳೊ — ಮಂಕುತಿಮ್ಮ ॥

—ಮಂಕುತಿಮ್ಮನ ಕಗ್ಗ



## ನಾನು—ನಮ್ಮಪ್ಪ

ಶಾಲೆಯನ್ನು ತಪ್ಪಿಸಬೇಕಾಗಿತ್ತು ತಿಂಮ ಒಂದು ದಿನ. ಹೊಸ ಉಪಾಯವನ್ನು ಹೂಡಿದ. ಟೆಲಿಫೋನಿನ ಅಂಕೆಯ ತೂಬಿನಲ್ಲಿ ಬೆರಳಿಟ್ಟು ತಿರಿವಿ ಶಾಲೆಯ ಮುಖ್ಯೋಪಾಧ್ಯಾಯರನ್ನು ಕರೆದ ಗಂಭೀರ ದನಿಯಲ್ಲಿ.

"ಯಾರು....ಹುಂ....ಸರ್....ಇಲ್ಲಿ ನೋಡಿ ನನ್ನ ಮಗ....ನನ್ನ.... ಮಗ....ತಿಂಮನಿಗೆ ಕೊಂಚ ಮೈಯಲ್ಲಿ ಅಸ್ವಸ್ಥ, ಅಹುದು, ಅಹುದು.... ತಿಳಿಯಿತೇ? ಕಾಹಿಲೆ....ಇವತ್ತು ಅವನು ಶಾಲೆಗೆ ಬರುವಂತಿಲ್ಲ ತಿಳಿಯಿತೇ!"

"ತಾವು ಯಾರು ಮಾತನಾಡೋದು?" ಎಂದು ಮರು ಪ್ರಶ್ನೆ ಬಂದಿತು.

ಗಾಬರಿಯಿಂದ ತಿಂಮ "ನಾನು ಸಾರ್, ತಿಂಮ-ಅಲ್ಲ ಸಾರ್.... ನಾನು ನಮ್ಮಪ್ಪ ಮಾತನಾಡುತ್ತಿದ್ದೇನೆ."

○ ○ ○

## ಅಪ್ಪನ ನೆನಪು

ಪರೀಕ್ಷೆಯು ಸಮೀಪ ಬಂದಿತೆಂದು ತಿಂಮನಿಗೆ ಪ್ರಾಯ್ವೇಟ ಟ್ಯೂಷನ್ ಆರಂಭ ಮಾಡಿಸಿದರು ಅವನಪ್ಪ. ಹೊಸ ಗುರುಗಳು ಮನೆಗೆ ಬಂದು ದೀಪದ ಮುಂದೆ ಕುಳಿತರು. ಹಲಿಗೆ ಹಿಡಿದು ತಿಂಮನೂ ಕುಳಿತ. ತಿಂಮನ ತಂದೆ ನೋಡುತ್ತಾ ನಿಂತರು. ಅರ್ಧ ಗಂಟೆ ಗುರುಗಳು ಗಣಿತವನ್ನು ಹೇಳಿದ ಮೇಲೆ ತಿಂಮ ಮೆಲ್ಲಗೆ ನುಡಿದ "ನೀವು ಹೇಳುವಾಗ ನನಗೆ ನಮ್ಮ ಅಪ್ಪನ ನೆನಪಾಗುತ್ತೆ ಸಾರ್"

"ಯಾಕೋ ತಿಂಮ" ಎಂದರು ಗುರುಗಳು.

"ಅಪ್ಪನಿಗೂ ಗಣಿತ ಬರುವದಿಲ್ಲ" ಎಂದ ತಿಂಮ.



## ತಿಂಮನ ಸ್ಕೂಲು

ಚೋರಿ ಕೇಸಿನ ವಿಚಾರಣೆಯಾಗಿ ಮುದ್ದಾಯಿಗೆ ಮೂರು ವರುಷ ಕಠಿಣ ಶಿಕ್ಷೆಯಾಯಿತು. ಪೋಲೀಸರು ಕೈಕಾಲಿಗೆ ಸರಪಣಿಗಳನ್ನು ತಗಲಿಸಿ ಅವನನ್ನು ಜೈಲಿಗೆ ಒಯ್ಯುತ್ತಿದ್ದರು. ಕೈದಿಯು ಅಳುವದನ್ನೂ ಕರೆಯುವು ದನ್ನೂ ಮಾಡಿ ರಸ್ತೆಯಲ್ಲಿ ಹೊರಳಾಡಿದ. ಪೋಲೀಸರು ಅವನನ್ನು ದರಪರ ಎಳೆದರು. ರಸ್ತೆಯಲ್ಲಿ ಗೌಜಾಗಿ ಜನರ ಗುಂಪು ಸೇರಿತು. ಎಲ್ಲಿಂದಲೋ ಬಂದವನೇ ತಿಂಮ ನೇರವಾಗಿ ಪೋಲೀಸರ ಬಳಿ ನಡೆದು ಪ್ರಶ್ನೆ ಮಾಡಿದ.

''ಎಲ್ಲಿಗೆ ಸ್ವಾಮಿ ಇವನನ್ನು ಒಯ್ಯೋದು?''

''ಜೇಲಿಗೆ''

''ಜೇಲಿಗೇನಾ ಈ ರಂಪು. ಸ್ಕೂಲಿಗೆ ಒಯ್ಯುತ್ತಾರೇನೋ ಎಂದು ನೆನಸಿದ್ದೆ''

O O O

## ಕಿವಿ ಇಲ್ಲದ ಕುರುಡ

ಅವಯುವಗಳು ಮತ್ತು ಅವುಗಳ ಉಪಯೋಗವನ್ನು ಅರ್ಧ ಗಂಟೆ ವಿವರಿಸಿ ಗುರುಗಳು ಪ್ರಶ್ನೆ ಕೇಳಿದರು ತಿಂಮನನ್ನು.

''ಕಿವಿ ಇಲ್ಲದಿದ್ದರೆ ಏನಾಗುತ್ತದೆ ?''

''ಕಣ್ಣು ಕಾಣುವದಿಲ್ಲ ಸಾರ್''

''ಅಲ್ಲವೋ, ಕಿವಿ ನಾನು ಹೇಳಿದ್ದು ಕಿವಿ.''

''ಅಹುದು ಸಾರ್, ಕಿವಿ ಇಲ್ಲದಾಗ ಟೊಪ್ಪಿಗೆ ಕಣ್ಣು ಮುಚ್ಚುವ ದಿಲ್ಲವೇ ?''

## ವಯಸ್ಸು ಕಾರಣ

ತಿಂಮ ಮಾಡಿದ ಲೆಕ್ಕ ತಪ್ಪೆಂದು ಅವನ ಮಾಸ್ತರು ತಲೆ ಕುಕ್ಕಿ ಬೈದರು.

"೧೫ ವರ್ಷದ ಕತ್ತೆ ಆಗಿ ಇನ್ನೂ ನಾಲ್ಕನೇ ತರಗತಿಯಲ್ಲಿಯೇ ಕುಳಿತಿದ್ದಿ, ನಾಚಿಕೆ ಇಲ್ಲವೇ ? ನಿನ್ನ ವಯಸ್ಸಿಗೆ ಪಂಡಿತ ನೆಹರೂರವರು ಓದಲು ವಿದೇಶಕ್ಕೆ ಹೋಗಿದ್ದರು ಆಗಲೆ"

"ನಿಮ್ಮ ವಯಸ್ಸಿಗೆ ಅವರು ಹಿಂದೀ ಒಕ್ಕೂಟದ ಪ್ರಧಾನ ಮಂತ್ರಿಗಳು ಆಗಿದ್ದರು ನೋಡಿ ಸಾರ್" ಎಂದು ತಿಂಮ ಗುರುಗಳ ಮುಖ ನೋಡಿದ.

o o o

## ಹಲ್ಲು ಕಂಡಾವು

ತೂಕಡಿಸುತ್ತಿದ್ದ ತಿಂಮನ ಮೇಷ್ಟ್ರು 'ಕಾಪಿ ಬರೆದುಕೊಳ್ಳಿ' ಎಂದು ಹುಡುಗರಿಗೆ ಹೇಳಿ ಕುರ್ಚಿಯ ಮೇಲೆಯೇ ಕಣ್ಣು ಮುಚ್ಚಿದರು. ಬಾಯಿ ತಾನಾಗಿಯೇ ತೆರೆಯಿತು.

ಎಲ್ಲರೂ ಕಾಪಿ ಬರೆದಿಟ್ಟು ಗುರುಗಳಿಗೆ ಎಚ್ಚರವಾದ ಮೇಲೆ ಒಬ್ಬೊಬ್ಬರೆ ತಂದು ತೋರಿಸಿದರು. ಕಲ್ಲಿನಂತೆ ಕುಳಿತಿದ್ದ ತಿಂಮನನ್ನು 'ನೀನೇಕೋ ಬರೆಯಲಿಲ್ಲ?' ಎಂದು ಗದರಿಸಿದರು.

"ಈ ಪುಸ್ತಕದಲ್ಲಿ ಸುಳ್ಳಿದೆ ಸಾರ್" ಎಂದು ಪುಸ್ತಕವನ್ನು ಮುಂದೆ ಚಾಚಿದ.

"ನಕ್ಕವರ ಹಲ್ಲು ಕಂಡಾವು" ಎಂಬುದನ್ನು ನೋಡಿದ ಮೇಷ್ಟ್ರು ಮರುದಿನವೇ ಹಲ್ಲುಕಟ್ಟಿಸಿಕೊಂಡು ಬಂದರು.

## ತಿಂಮನ ಮರಣ

ತಿಂಮನಿಗೊಮ್ಮೆ ಕಾಯಿಲೆಯಾಗಿ ಹಾಸಿಗೆ ಹಿಡಿದ. ಎಲ್ಲರೂ ಆಸೆ ಬಿಟ್ಟರು. ತಿಂಮನ ಇತಿಶ್ರೀಯಾಯಿತೆಂದು ಸಿದಿಗೆ ಬಿಗಿದು ನಾಲ್ವರು ಭುಜ ಕೊಟ್ಟು ನಡೆದೇ ಬಿಟ್ಟರು.

ತಿಂಮನ ಹೆಣ ಊರ ಹೊರಗೆ ಬಂದು ಶಾಲೆಯ ಮುಂದೆ ಸಾಗಿತ್ತು. ಹುಡುಗರು ಕಿಟಕಿಯಿಂದ ನೋಡಿದರು. ತಿಂಮನ ಮೇಷ್ಟ್ರು ಹೊರಗೆ ಬಂದು ನೋಡಿ ದುಃಖವನ್ನು ತಡೆಯಲಾರದೆ "ತಿಂಮಾ ಹೋಗ್ಬಿಟ್ಯಾ" ಎಂದು ಗಟ್ಟಿಯಾಗಿ ನುಡಿದರು.

'ಅಯ್ಯಯ್ಯೋ, ಮೇಷ್ಟ್ರು' ಎಂದವನೆ ತಿಂಮ ಸಿದಿಗೆಯಿಂದ ಜಿಗಿದು ಹಾರಿ ಮನೆಗೇ ಓಡಿದ.

## ಸಪಾಸಾದ ಮಾಸ್ತರರು

ಬೇಸಿಗೆ ರಜ ಮುಗಿಯಿತು. ಶಾಲೆಯ ಬಾಗಿಲಿಗೆ ವಿದ್ಯಾರ್ಥಿಗಳು ಮುತ್ತಿಗೆ ಹಾಕಿದರು. ಪರೀಕ್ಷೆಯ ಫಲಿತಾಂಶ ಕೇಳಲು ಬಾಯಿ ತೆರೆದು ನಿಂತರು. ಪುಣ್ಯಾತ್ಮ ತಿಂಮ, ಆತನ ಅಕ್ಕನ ಗಂಡನೇ ಶಾಲೆಯಲ್ಲಿ ಹೆಡ್ಡ ಮಾಸ್ತರ! ಮಂತ್ರಿ ಮನೋವೃತ್ತಿಯ ಹೆಡ್ಡಮಾಸ್ತರರು ತಿಂಮನನ್ನು ಎತ್ತಿ ಮೇಲಿನ ತರಗತಿಯಲ್ಲಿ ಹಾಕಿದರು. ಹಲ್ಲು ಕಿರಿಯುತ್ತ ತಿಂಮ ಹೊರಟಾಗ ಹಳೆಯ ಮಾಸ್ತರರೊಬ್ಬರು ಮಾತನಾಡಿಸಿದರು.

"ಏನೋ ತಿಂಮಾ, ಪಾಸು ಆದಿಯೇನೋ?"

"ಓಹೋ."

"ಈಗ ಯಾವ ತರಗತಿಗೋ ಬಂದಿ?"

"ಐದರಿಂದ ಆರನೆಯ ತರಗತಿಗೆ ಬಂದೆ ಸರ್. ನೀವೇನು ಸಾರ್ ಇಲ್ಲಿಯೇ ಕುಳಿತಿದ್ದೀರಿ? ಆಗಲೂ ಅದೇ ತರಗತಿ ಈಗಲೂ ಅದೇ ತರಗತಿ!"



# ತಿಂಮನ ಬೆಳ್ಟ್

ಶಾಲೆಗೆ ಹೊತ್ತಾಯಿತು. ಅವಸರದಿಂದ ತಿಂಮನ ತಾಯಿ ಊಟ ನೀಡಿದಳು. ಗಡಿಬಿಡಿಯಲ್ಲಿ ಊಟ ಮುಗಿಸಿ ತಿಂಮ ಬಟ್ಟೆಬರೆ ಹುಡುಕಾಡಿದ. ಅಂಗಿ ಚಲ್ಲಣ ತಂದು ತಾಯಿ ತೊಡಿಸಿ ಬೆಳ್ಟಿಗಾಗಿ ಮನೆಯೆಲ್ಲ ಹುಡು ಕಾಡಿದಳು. ಎಲ್ಲಿಯೂ ಸಿಗಲಿಲ್ಲ. " ಇಲ್ಲದಿದ್ದರಿಲ್ಲ ಹಾಗೆಯೇ ಹೋಗೋ ಸಾಕು " ಎಂದು ತಾಯಿ ತ್ವರೆ ಮಾಡಿದಳು.

" ಬೆಳ್ಟ್ ಇಲ್ಲದೆ ಹೇಗಮ್ಮಾ ಹೋಗೋದು" ಚಲ್ಲಣ ನಿಲ್ಲು ತ್ತೆಯೇ ? " ತಿಂಮ ತಕರಾರು ಹೂಡಿದ.

" ಇಲ್ಲವಲ್ಲ ಬೆಳ್ಟ್; ಈಗೇನು ಮಾಡಬೇಕು ಮತ್ತೆ ? " ಎಂದು ತಾಯಿ ಕೇಳಿದಳು.

" ಬೆಳ್ಟ್ ಇಲ್ಲದಲೇ ಚಲ್ಲಣ ನಿಲ್ಲುವದಕ್ಕೊಂದು ಉಪಾಯವಿದೆ- ಯಮ್ಮಾ"

" ಏನೋ ತಿಂಮಾ ಅದು ? "

" ಇನ್ನೊಂದು ಬಾರಿ ಉಂಡುಬಿಡುತ್ತೇನೆ " ಎಂದ ತಿಂಮ

## ಸರಸ್ವತಿ ಪ್ರಸಾದ

"ತಿಂಮಾ"

''ಏನಪ್ಪಾ ?"

''ಹಿಡಿಯೋ ಪ್ರಸಾದವನ್ನು."

"ಏನು ಪ್ರಸಾದವಪ್ಪಾ ಇದು ?''

"ಸರಸ್ವತಿ ಪ್ರಸಾದವೋ ತಿಂಮಾ; ಇದನ್ನು ಮುಖ್ಯವಾಗಿ ಹುಡುಗರು ತಿನ್ನಬೇಕು''

''ಏಕಪ್ಪಾ ಇದನ್ನು ತಿನ್ನಬೇಕು?"

"ಇದನ್ನು ತಿಂದರೆ ಬುದ್ಧಿ ಬರುತ್ತೆಯೋ ತಿಂಮ''

"ಕೊಂಚ ಕಾಗದದಲ್ಲಿ ಕಟ್ಟಿಕೊಡಪ್ಪಾ."

"ಕಾಗದದಲ್ಲಿ·ಏತಕ್ಕೊ? ಯಾರಿಗೆ ಕೊಡುತ್ತೀದಿ?''

''ನಮ್ಮ ಮಾಸ್ತರರಿಗಪ್ಪಾ.''

## ಪ್ರಶ್ನೆ ಪತ್ರಿಕೆ

ತಿಂಮ ಪರೀಕ್ಷೆಗೆ ಕುಳಿತಾಗ ಪ್ರಶ್ನೆ ಪತ್ರವು ಇಂತಿದ್ದಿತು:

(೧) ವಲಯಗಳೆಷ್ಟು?

(೨) ಮೂರು ವಲಯಗಳಾವಾವು?

(೩) ಉಷ್ಣ ವಲಯ, ಶೀತ ವಲಯ, ಸಮಶೀತೋಷ್ಣ ವಲಯ ಇವುಗಳಲ್ಲಿ ಇರುವ ಭೇದವೇನು?"

ಅದಕ್ಕೆ ತಿಂಮನ ಉತ್ತರಗಳು ಹೀಗಿದ್ದವು:

(೧) ಎರಡನೇ ಪ್ರಶ್ನೆಯನ್ನು ನೋಡಿರಿ.

(೨) ಮೂರನೇ ಪ್ರಶ್ನೆಯನ್ನು ನೋಡಿರಿ.

(೩) ................"

ಮೂರು ಪ್ರಶ್ನೆಗಳಲ್ಲಿ ಎರಡನ್ನು ಉತ್ತರಿಸಿದ್ದಕಾಗಿ ತಿಂಮ ಉತ್ತಮ ಮಾರ್ಕುಗಳಿಂದ ತೇರ್ಗಡೆಯಾದ

## ಪಠ್ಯ ಪುಸ್ತಕ

" ಅಪ್ಪಾ "

" ಏನೋ ತಿಂಮಾ "


" ಜಾತೀಯ ಮತ್ತು ರಾಜಕಾರಣದ ಪುಸ್ತಕಗಳನ್ನು ವಿದ್ಯಾರ್ಥಿಗಳು ಓದಕೂಡದಂತಪ್ಪಾ "

" ಅಹುದೋ ತಿಂಮಾ "


" ಇವನ್ನು ಪುಸ್ತಕ ಭಂಡಾರಗಳಲ್ಲಿಡಕೂಡದೆಂದು ಸರ್ಕಾರವು ಆಜ್ಞೆ ಮಾಡಿದೆಯಂತಪ್ಪಾ "

" ಅಹದೋ ತಿಂಮಾ "

" ಪಠ್ಯ ಪುಸ್ತಕವಾಗಿ ಹಚ್ಚಿದರೆ ಸಾಕಿತ್ತಲ್ಲಪ್ಪಾ ? "



ನಾನು ಸುಮ್ಮನೆ ಹಿಡಿದಿದ್ದೇನೆ. ನೀನೇ ಜಗ್ಗಿ ಅದೇಕೆ ಗುರ್ ಎನ್ನುತ್ತೀ ?



## ಚರ್ಚಿಲ್ ತಿಂಮ

ಹಣೆಯ ಮೇಲೆ ದೊಡ್ಡದಾಗಿ "ಪಾ" ಎಂದು ಬರೆದುಕೊಂಡು ತಿಂಮ ಶಾಲೆಗೆ ಬಂದ. ಜೊತೆ ಹುಡುಗರೆಲ್ಲ ನಗೆಯಾಡಿ ಮೇಷ್ಟ್ರಿಗೆ ಹೇಳಿದರು.

"ಇದೇನೋ ತಿಂಮ ವಿಕಾರ?"

"ವಿಕಾರವಲ್ಲ ಸಾರ್, ಇದು ಪಕಾರ"

"ಏತಕ್ಕೋ ಇದು"

"ಪಾಸಾಗಲಿಕ್ಕೆ ಸಾರ್"

"'ಪಾ' ಎಂದು ಬರೆದುಕೊಂಡರೆ ಪಾಸು ಆಗುತ್ತಿಯೇನೋ!"

"'ವಿ' ಎಂದು ಬರೆದ ಕೂಡಲೇ ವಿಜಯ ದೊರೆಯಲಿಲ್ಲವೇನು ಸಾರ್?"

O O O

## ಹೊಸ ದೃಷ್ಟಿ

ವಿಜ್ಞಾನದ ಪಾಠ ಹೇಳುವಾಗ ಮಾಸ್ತರರೊಬ್ಬರು ಕೇಳಿದರು.

"ನನ್ನ ಕೈಯಲ್ಲಿರುವ ಈ ಕಾಲಾಣೆಯನ್ನು ಈ ಗಾಜಿನಲ್ಲಿರುವ ಆಸಿಡ್‌ನಲ್ಲಿ ಹಾಕುತ್ತೇನೆ, ಈ ಕಾಲಾಣೆ ಕರಗುತ್ತದೋ ಇಲ್ಲವೋ?"

"ಇಲ್ಲ" ಎಂದು ಧ್ವನಿ ಬಂದಿತು.

"ಏಕೆ?" ಎಂದರು ಮಾಸ್ತರರು.

"ಕಾಲಾಣೆಯನ್ನು ಕಳೆದುಕೊಳ್ಳಲು ನಿಮಗೇನು ಬುದ್ಧಿ ಇಲ್ಲವೇನು ಸಾರ್" ಎಂದ ತಿಂಮ.

## ಇನ್ನೊಂದು ಕಾಗದ!

ತಿಂಮನ ಮನೇಲಿ ಸಂತರ್ಪಣೆ. ಗುಂಪು ಗುಂಪು ಜನರು ಊಟ ಮುಗಿಸಿ ಮನೆಗೆ ಹೊರಟರು.

"ತಿಂಮಾ" ಎಂದು ಕೂಗಿದರು ಅವನಪ್ಪ.

"ಬಂದೆ" ಎಂದವನೇ ಮುಂದೆ ಹೋಗಿ ನಿಂತ.

"ಈ ಪಾತ್ರೆ ಸಾಮಾನುಗಳನ್ನು ತೊಳೆಯಲಿಕ್ಕೆ ಕೊಡುತ್ತೇನೆ ನಾನು ಹೇಳಿದಂತೆಲ್ಲ ಬರೆದುಕೋ" ಎಂದರು.

"ಸರಿ" ಎಂದವನೇ ಜೇಬಿನಿಂದ ಸ್ಲೇಟುಕಡ್ಡಿ ತೆಗೆದು 'ಕಾಗದ?' ಎಂದು ಕೇಳಿದ. ತಿಂಮನ ತಂದೆ ದೊಡ್ಡದೊಂದು ಕಾಗದವನ್ನು ತಂದು ಕೊಟ್ಟರು.

'ಡಬರಿ'

'ಹೂಂ'

'ಪಂಚ ಪಾತ್ರೆ'

'ಹೂಂ'

"ಸೌಟು"

"ಇನ್ನೊಂದು ಕಾಗದ?" ಎಂದು ತಿಂಮ ಕೈಯೊಡ್ಡಿದ.

"ಏನೋ" ಎಂದು ಗದರಿಸಿಕೊಂಡರು ಅವನಪ್ಪ.

"ಈ ಕಾಗದ ತುಂಬಿದೆಯಪ್ಪಾ" ಎಂದು ಧೈರ್ಯವಾಗಿ ಉತ್ತರಕೊಟ್ಟ.

"ತುಂಬಿತು!" ಕೋಪಾಶ್ಚರ್ಯಗಳಿಂದ ಹತ್ತಿರ ಬಂದು, ಬರೆದದ್ದನ್ನು ನೋಡಿದರು. ಕಾಗದವು ತುಂಬಿದುದು ನಿಜ. ಪಾತ್ರೆಗಳ ಚಿತ್ರವನ್ನು ಬಿ ಸಿದ್ದಾನೆ. ಇನ್ನೆಲ್ಲಿದೆ ಸೌಟಿಗೆ ಸ್ಥಳ?

# ಸದ್ಯಕ್ಕೆ ಸಾಕು

ಬೇರೆ ಊರಿನಲ್ಲಿ ಓದಲು ಹೋಗಿದ್ದ ತಿಂಮ ಹಣದ ಹಾದಿ ಕಾದು ಬೇಸತ್ತು, ತಂದೆಗೆ ತಾರು ಮಾಡಿದ.


"ತಕ್ಷಣ ರೂ. ೨೫ ಕಳಿಸದಿದ್ದರೆ ನದಿಯಲ್ಲಿ ಹಾರುತ್ತೇನೆ"

ಉತ್ತರ ಬಂದಿತು ಹಿಂದೆಯೇ. "ಬ್ಯಾಂಕಿನಲ್ಲಿ ಹಣವಿಲ್ಲ. ತಕ್ಷಣ ನದಿಯಲ್ಲಿ ಹಾರಿಕೊ"

ತಿಂಮ ಪುನಃ ತಾರಿನಿಂಧ ತಿಳಿಸಿದ—

"ನದಿಯಲ್ಲಿ ನೀರಿಲ್ಲ. ಮದರಾಸಿಗೆಹೋಗಿ ಸಮುದ್ರದಲ್ಲಿ ಬೀಳುತ್ತೇನೆ ಗಾಡಿ ಖರ್ಚಿಗಾಗಿ ತಕ್ಷಣ ರೂ. ೪೦ ಕಳಿಸು.

"ಸದ್ಯಕ್ಕೆ ರೂ ೨೫ ಕಳಿಸಿದ್ದೇನೆ. ನದಿಗೆ ನೀರು ಬರುವ ವರೆಗೂ ಖರ್ಚಿಗೆ ಸಾಕು ತಾನೆ" ಎಂದುತ್ತರ ಬಂದಿತು.



## ತಿರುಮಂತ್ರ

ಪಕ್ಕದ ಮನೆಯಲ್ಲಿದ್ದ ಮೇಷ್ಟ್ರು ಮನೆಗೆ ತಿಂಮ ಹೋಗಿ ಕೇಳಿದ.

"ಕೊಂಚ ನಿಘಂಟು– ಡಿಕಷ್ನರಿ ಕೊಡ್ತೀರಾ ಸಾರ್"?

''ಹೊರಗೆ ಒಯ್ಯಕೂಡದು. ಇಲ್ಲಿಯೇ ಉಪಯೋಗಿಸಿ ಇಟ್ಟು ಹೋಗಬೇಕು''

ಮರುದಿನ ಬೆಳಿಗ್ಗೆ ಮನೆಗೆಲಸದಲ್ಲಿ ತೊಡಗಿದ್ದ ಮೇಷ್ಟ್ರು ತಿಂಮನ ಮನೆಗೆ ಬಂದರು.

"ಬನ್ನಿ ಸಾರ್ ಕುಳಿತುಗೊಳ್ಳಿ"

"ಕೂಡಲು ಸಮಯವಿಲ್ಲಪ್ಪ ತಿಂಮ, ಕೊಂಚ ಕಸಬರಿಗೆ ಬೇಕಾಗಿದೆ."

"ಅಗತ್ಯ ಕೊಡತೀನೆ ಸಾರ್. ಆದರೆ ಅದನ್ನು ಹೊರಗೆ ಒಯ್ಯಕೂಡದು. ಇಲ್ಲಿಯೇ ಉಪಯೋಗಿಸಿ ಇಟ್ಟು ಹೋಗಬೇಕು."

## ಆಣೆಗೊಂದು ಆನೆ

ತಿಂಮನ ಶಾಲೆಯ ತನಿಖಿಗೆ ಇನ್ಸ್‌ಪೆಕ್ಟರು ಬರುವವರಿದ್ದರು. ಕೊಂಡು ತಂದ ಹೂಮಾಲೆ ಒಣಗಿ ಹೋದ ನಾಲ್ಕು ದಿನಗಳ ನಂತರ ಇನ್ಸ್‌ಪೆಕ್ಟರರು ಬಂದಿಳಿದರು. ತಿಂಮನ ಪರೀಕ್ಷೆ ಸುರುವಾಯಿತು.

''ಹುಡುಗರಿಗೆ ಬಾಯಿಲೆಕ್ಕ ಬರುತ್ತದೆಯೇ?

''ಬರುತ್ತೆ ಸ್ವಾಮಿ, ಕೇಳಲೇ?''

''ಆಗಲಿ''

"ಒಂದು ಆಣೆಗೆ ನಾಲ್ಕಾಣೆಯಾದರೆ...."

''ಇದು ಏನು ಲೆಕ್ಕವೋ ತಿಂಮ, ಜಾತ್ರೆಯಲ್ಲಿ ಜೂಜಾಡುವವರ ಲೆಕ್ಕದಂತಿದೆ. ಬೇರೆ ಏನಾದರೂ ವಸ್ತುಗಳನ್ನು ಹೇಳಕೂಡದೆ.?''

''ಸರಿ. ಒಂದು ಆಣೆಗೆ ಒಂದು ಆನೆ ಆದರೆ........''

''ಏನೋ ಅನ್ಯಾಯ ಇದು? ಆಣೆಗೆ ಒಂದು ಆನೆ ಬರುತ್ತದೆಯೇ?"

''ಸಕ್ಕರೆ ಆನೆ ಸ್ವಾಮಿ'' ಎಂದ ತಿಂಮ.



## ತಿಂಮನ ಕ್ಲಾಸು

ಮಾಸ್ತರ ತಿಂಮ ಕ್ಲಾಸಿನಲ್ಲಿ ಬಂದಾಗ ಮುಂದಿನ ಬೆಂಚುಗಳು ಖಾಲಿ ಇದ್ದವು. ಹಿಂದಿನ ಬೆಂಚುಗಳಲ್ಲಿ ಹುಡುಗರಿರಲಿಲ್ಲ. ಒಬ್ಬಿಬ್ಬ ಹುಡುಗರ ಮಾತ್ರ ಆಕಳಿಸುತ್ತ ಅಡ್ಡಾಗಿದ್ದರು. ಕ್ಲಾಸು ಪ್ರಾರಂಭವಾಗಿ ಗಂಟೆಯಾಗಿ ಮುಗಿಯಲು ಅರ್ಧಗಂಟೆ ಇದ್ದರೂ ಹೊರಗೆ ಹೋಗಿದ್ದ ಹುಡುಗರು ಇನ್ನೂ ಬರಲಿಲ್ಲ. ಸಿಟ್ಟಿಗೆದ್ದ ತಿಂಮ ಪುಸ್ತಕಗಳನ್ನು ಕೈಯಲ್ಲಿ ಹಿಡಿದು ಮನೆಗೆ ಹೊರಡಲು ಸಿದ್ಧನಾದ.

ತೂಕಡಿಸುತ್ತಿದ್ದ ಹುಡುಗನೊಬ್ಬ ಕಣ್ಣು ಮುಚ್ಚಿಯೇ ಮಾತನಾಡಿದ.

"ಹೋದವರು ಇಲ್ಲದಿದ್ದರೆ ಇಲ್ಲ, ಇರುವ ನಮ್ಮಿಬ್ಬರಿಗೇ ಪಾಠ ಹೇಳಿ ಸಾರ್" ಎಂದ.


"ನನ್ನ ಕ್ಲಾಸು ಅಂದರೆ ಶಾಸನ ಸಭೆಯೆಂದು ತಿಳಿದಿರಾ; ಏನು ಗತಿ?" ತಿಂಮ ಕಣ್ಣು ಕಿಸಿದು ಹೊರಗೆ ಸಾಗಿದ.

## ನಂಗನಿಸಿದ್ದು

ಪಂಚಾಯತಿ ಬೋರ್ಡಿನ ಅಧ್ಯಕ್ಷರೂ, ದೊಡ್ಡೂರ ವಕೀಲರ ಏಜೆಂಟರೂ, ಹಳ್ಳಿಯ ಪೋಷ್ಟು ಮಾಸ್ತರರೂ, ಸರಕಾರೀ ಸಹಕಾರಿ ಅಗ್ಗದರದ ಕಾಳಿನ ಅಂಗಡಿ ಒಡೆಯರೂ, ಅನ್ನ ಸಮಿತಿ ಸದಸ್ಯರೂ, ಇತ್ಯಾದಿ, ಇತ್ಯಾದಿ ಆಗಿದ್ದ ಚಿಕ್ಕವಯಸ್ಸಿನ ಊರಹಿರಿಯ ಮುಖಂಡರಾದ ಮುರಗಿಗೌಡರು ಟಪಾಲು ಬಸ್ಸಿನ ಹಾದಿ ಕಾದು ಬೇಸತ್ತು, ಮಳೆಗೆ ಹೆದರಿ ತಿಂಮನ ಶಾಲೆಯಲ್ಲಿ ತೂರಿದರು. ತಕ್ಕ ಸನ್ಮಾನ ಮಾಡಿ ಇದ್ದೊಂದು ಮೂರು ಕಾಲಿನ ಕುರ್ಚಿಯನ್ನು ಗೋಡೆಗಾನಿಸಿ ತಿಂಮ ಅವರನ್ನು ಕುಳ್ಳಿರಿಸಿದ. ಇಡೀ ಜಗತ್ತಿನಲ್ಲಿಯೇ ಅತಿ ಎತ್ತರವಾದ ನದಿ, ಬಹುದಟ್ಟವಾದ ಗುಡ್ಡ, ಆಳವಾದ ಅಡಿವೆ ಮುಂತಾದವುಗಳ ಹೆಸರುಗಳನ್ನು ವಿದ್ಯಾರ್ಥಿಗಳಿಂದ ಹೇಳಿಸಿ, ವ್ಹಿಜಿಟಿಂಗ್ ಬುಕ್ಕನ್ನು ಮುಖಂಡರ ಮುಂದಿಕ್ಕಿ 'ನಿಮಗನಿಸಿದ್ದು ಬರೆಯಿರಿ' ಎಂದು ವಿನಂತಿಸಿದ.

'ತಿಂಮ ಟಪಾಲ ಬಸ್ಸಿನಂತ ಮನಿಶ. ಪ್ಯಾಸೆಂಜರಿ ಇರ್‍ಲಿ ಬಿಡ್ಲಿ ತುಸ ಜಲ್ದಿ, ತುಸ ತಡ, ಅಂತೂ ಸಾಲಿ ತೆಪ್ಪಾಸಕಿಲ್ಲ. ಈತಗೇರಿಸಬೇಕು. ನಂಗನಿಸಿದ್ದು ಮುರುಗಿಗಿಡ.'

ಎಂದು ಬರೆದು ಮೋಟಾರು ಹಾರ್ನ ಕೇಳಿ ಹೊರಗೆ ಓಡಿದರು.



# ಉಳಿದವರಾರು ?

" ಅಪ್ಪಾ "

" ಏನೋ ತಿಂಮಾ ? "

" ಪಾನನಿರೋಧದ ಸಭೆಯು ಬಹು ಸ್ವಾರಸ್ಯವಾಗಿತ್ತಪ್ಪಾ "

" ಏಕೋ ತಿಂಮಾ ? "

" ಅಧ್ಯಕ್ಷರು ಹೇಳಿದರಪ್ಪಾ, ನಮ್ಮ ದೇಶದಲ್ಲಿ ಹತ್ತಕ್ಕೆ ಒಬ್ಬರು ಕುಡುಕರಿದ್ದಾರೆಂದು "

" ಇದು ನಿಜವೋ ತಿಂಮಾ "

" ಆಗ ವೇದಿಕೆಯ ಮೇಲೆ ಸರಿಯಾಗಿ ಹತ್ತೇ ಜನರಿದ್ದರಪ್ಪಾ "

" ಮುಂದೇನಾಯಿತೋ ತಿಂಮಾ ? "

" ಉಳಿದ ಒಂಬತ್ತು ಜನರು ಹಿಂದೆಯೇ ಹೇಳಿದರಪ್ಪಾ, ತಾವಂತೂ ಕುಡುಕರಲ್ಲವೆಂದು. "



ಲಾಠಿಗೆ ಅಂಜುವ ಹೇಡಿಗಳಲ್ಲ

ಅಯ್ಯಯ್ಯೋ ತಿಂಮನ ಭಾಷಣವೇ !



## ತಿಳಿತಿಲ್ಲೊ ?

ನಾಡಹಬ್ಬದ ಕಾರ್ಯಕ್ರಮವು ಉತ್ತಮ ರೀತಿಯಲ್ಲಿ ಜರುಗಿತು. ಪರಸ್ಥಳದಿಂದ ಬಂದ ಮಾಸ್ತರರ ಭಾಷಣವು ಬಿಳೀ ಮೋಡದ ಮಳೆಯಂತೆ ಸುರಿಯಿತು.

ಕಡೆ ಬೆಂಚುಗಳಲ್ಲಿ ಕುಳಿತ ತಿಂಮನಿಗೂ ಅವನ ಗೆಳೆಯನಿಗೂ ಗುಜುಗುಜು ಪ್ರಾರಂಭವಾಗಿ ವಾದವಿವಾದವು ದೊಡ್ಡದಾಗಿ, ಬಾಯಿಗೆ ಬಾಯಿ ಹತ್ತಿ, ಮಾತಿಗೆ ಮಾತು ಬೆಳೆದು, ಕೈಗೆ ಕೈ ಹತ್ತಿಬಿಟ್ಟಿತು. ಅವರಿವರು ಓಡಿ ಬಂದು ಜಗಳವನ್ನು ಬಿಡಿಸಿ ತಿಂಮನನ್ನು ತಡೆಹಿಡಿದರು. ಭಾಷಣಕಾರರಾದ ಮಾಸ್ತರರು ತಿಂಮನನ್ನು ಪ್ರಶ್ನಿಸಿದರು.

‘‘ ಅದೇಕೋ ತಿಂಮಾ, ಅವನೊಡನೆ ದ್ವಂದ್ವ ಯುದ್ಧಕ್ಕೇ ಸುರು ಮಾಡಿದಿ ? ಏನಂದನೋ ಅವನು ? ’’

‘‘ ನೋಡಿ ಸ್ವಾಮಿ, ನಾನು ಮೊದಲಿನಿಂದಲೂ ಎಣಿಸಿದ್ದೇನೆ, ನಿಮ್ಮ ಭಾಷಣದಲ್ಲಿ ಬರಾಬರಿ ಒಂದನೂರ ಏಳು ‘ ತಿಳಿತಿಲ್ಲೊ ’ ಬಂದವು. ಒಂದನೂರ ಐದೇ ಬಂದವೆಂದು ಅವನು ವಾದಿಸುತ್ತಾನೆ ” ಎಂದು ತಿಂಮ ಉತ್ತರಿಸಿದ.

## ನನ್ನ ಭಾಷಣ

ಭಾಷಣಕಾರರು ವಿಷಯದ ಬಿಬು ಹತ್ತಗೊಡದೆ ಮೂರು ತಾಸು ಭೀಕರವಾದ ಭಾಷಣದ ಮಳೆ ಸುರಿಸಿದರು. ಸಭಿಕರೆಲ್ಲರೂ ಒಬ್ಬೊಬ್ಬರೆ ಎದ್ದು ಹೋಗದೆ ಗುಂಪುಗುಂಪಾಗಿ ಹೊರಗೆ ಸಾಗಿದರು. ಸಭೆಯು ಬರಿದಾದಂತೆಲ್ಲ ಭಾಷಣವು ಕಳೆಗಟ್ಟಿತು. ಆವೇಶಪೂರಿತರಾದ ಭಾಷಣಕಾರರ ಮುಂದೆ ಗಲ್ಲಕ್ಕೆ ಕೈ ಹಚ್ಚಿ ಇಡೀ ಸಭೆಯಲ್ಲಿ ತಿಂಮನೊಬ್ಬನೇ ಕುಳಿತ.

“ ನನ್ನ ಭಾಷಣವನ್ನು ಕೇಳಲು ಶ್ರದ್ಧೆಯಿಂದ ಒಬ್ಬನಾದರೂ ಕುಳಿತಿದ್ದಾನಲ್ಲ, ಇಷ್ಟೇ ಸಾಕು ’’ ಎಂದು ಭಾಷಣಕಾರರು ಹೆಮ್ಮೆಪಟ್ಟು ನುಡಿದರು.

“ ತಮ್ಮದಾದಮೇಲೆ ನನ್ನ ಭಾಷಣವಿದೆ ” ಎಂದ ತಿಂಮ.

## ಸ್ವಂತ ಡಬ್ಬಿ

ಗ್ರಾಮ ಸುಧಾರಣೆಯ ಸಭೆಯಲ್ಲಿ ತಂಬಾಕ ಸೇವನೆಯ ನಿಷೇಧದ ಬಗ್ಗೆ ಮಾತನಾಡುತ್ತ ಓರ್ವರು ನಾಸಿಕದಿಂದ ಭಾಷಣ ಮಾಡಿದರು.

" ಈ ಊರಲ್ಲಿ ನೇಕಡ ತೊಂಬತ್ತು ಜನರು ನಶ್ಯ ಹಾಕುವವರಿದ್ದಾರೆಂಬುದು ಲಾಂಛನಾಸ್ಪದವಾದ ಮಾತು."

" ಈ ತೊಂಬತ್ತರಲ್ಲಿ ಡಬ್ಬಿ ಇಟ್ಟವರು ಸೇಕಡ ಹತ್ತೂ ಸಹ ಇಲ್ಲವೆಂಬುದು ಹೆಮ್ಮೆಪಡುವ ಮಾತು" ಎಂದು ತಿಂಮ ನುಡಿದು ಭಾಷಣಕಾರರ ಡಬ್ಬಿಗಾಗಿ ಕೈ ಚಾಚಿದ.

O O O

## ಉತ್ತಮ ಉಪಯೋಗ

ಶಾಲೆಯಲ್ಲಿ ಉಪಾಧ್ಯಾಯರು ವಿದ್ಯಾರ್ಥಿಗಳ ಸಾಮಾನ್ಯ ಜ್ಞಾನದ ಪರೀಕ್ಷೆ ನಡೆಸಿದರು ಒಂದು ಬಾರಿ.

" ದನದ ಸೆಗಣಿಯ ಉತ್ತಮ ಉಪಯೋಗವೇನು ?"

" ಹೊರಗೋಡೆ ಮತ್ತು ನೆಲವನ್ನು ಬಳಿಯಲು ಬರುತ್ತದೆ ಸಾರ್" ಎಂದ ಒಬ್ಬ.

" ನಿನ್ನ ತಲೆ. ಅದರ ಉತ್ತಮ ಉಪಯೋಗ ಯಾವುದು, ನೀನು ಹೇಳೋ ?"

" ಗೋಡೆಗೆ ಕುರುಳು ತಟ್ಟಬಹುದು ಸಾರ್" ಎಂದ ಇನ್ನೊಬ್ಬ.

" ಅದೂ ಅಲ್ಲ."

" ನಾನು ಹೇಳಲೇನು ಸಾರ್" ಎಂದ ತಿಂಮ.

" ಹೂ, ಹೇಳೋ ನೋಡೋಣ."

" ಭಾಷಣಕಾರರ ಮುಖಕ್ಕೆ ಎಸೆಯಬಹುದು ಸಾರ್" ಎಂದು ಹೇಳಿ ತಿಂಮ ಹಿಂದೆಯೇ ಬೆಂಚಿ ಏರಿದ.

# ನಾನೂ ನಿಮ್ಮಂತೆ

ಚತುರ ರಾಜಕಾರಣಿಗಳಲ್ಲೊಬ್ಬರು ತಮ್ಮ ಭಾಷಣದ ಚಮತ್ಕೃತಿಯಿಂದ ಜನಪ್ರಿಯರಾಗಿದ್ದರು. 'ನಾನೂ ನಿಮ್ಮಂತೆ ಒಬ್ಬ ರೈತನಿದ್ದೇನೆ' ಎಂದು ರೈತ ಪರಿಷತ್ತಿನಲ್ಲಿಯೂ 'ನಾನೂ ನಿಮ್ಮಂತೆ ಒಬ್ಬ ಕೂಲಿಕಾರನಿದ್ದೇನೆ' ಎಂದು ಕೂಲಿಕಾರ ಸಭೆಯಲ್ಲಿಯೂ 'ನಾನೂ ನಿಮ್ಮಂತೆ ಒಬ್ಬ ನೌಕರನಿದ್ದೇನೆ' ಎಂದು ನೌಕರರ ಸಂಘದಲ್ಲಿಯೂ ಮಾತಿಗೊಮ್ಮೆ ನುಡಿದು ಕರ ತಾಡನ ಮಾಡಿಸಿದರು. ತಿಂಮ ಬಂದು ಅವರನ್ನು ಕೇಳಿಕೊಂಡ.

"ನಾಳೆ ಸಾಯಂಕಾಲ ತಮ್ಮ ಭಾಷಣವಾಗಬೇಕು ಸ್ವಾಮಿ" ಎಂದ.

"ಎಲ್ಲಿಯೋ ತಿಂಮ?" ಎಂದರು ಭಾಷಣಕಾರರು.

"ವಿಧವಾ ಸಮಾಜದಲ್ಲಿ"

"ಆಯಿತು ಬರುತ್ತೇನೆ"

"ಆದರೆ ತಮ್ಮ ಭಾಷಣದಲ್ಲಿ ಮಾತ್ರ 'ನಾನೂ ನಿಮ್ಮಂತೆ'.....ಎಂದು ಹೇಳಿದರೆ......." ಎಂದು ನುಡಿದು ತಿಂಮ ಅನುಮಾನಿಸುತ್ತ ನಿಂತ.




## ಮಾನಸಶಾಸ್ತ್ರ

ಮಾನಸಶಾಸ್ತ್ರಜ್ಞರ ಉಪನ್ಯಾಸವು ಊರ ಅಟ್ಟದ ಮೇಲೆ ಜರುಗಿತು. "ನೋವೆಂಬುದೆಲ್ಲಿದೆ? ಅದಕ್ಕೆಳ್ಳಷ್ಟೂ ಅರ್ಥವಿಲ್ಲ. ಕೇವಲ ಮನಸ್ಸಿನ ಭ್ರಾಂತಿಯದು," ಇತ್ಯಾದಿ ಇತ್ಯಾದಿ, ಎಂದು ಭಾಷಣಕಾರರು ಉದಾಹರಣೆಗಳೊಂದಿಗೆ ತಿಳಿಸಿ ಹೇಳಿದರು. ತಿಂಮನೂ ತಲೆದೂಗಿದ, ಎಲ್ಲ ತಲೆಗಳೊಂದಿಗೆ.

ಸಭೆಯ ವಿಸರ್ಜನೆಯನಂತರ ಶಾಸ್ತ್ರಜ್ಞರೊಟ್ಟಿಗೆ ಮಾತನಾಡುತ್ತ ರಸ್ತೆಯಲ್ಲಿ ಬರುತ್ತಲಿದ್ದ. ಇದ್ದಕ್ಕಿದ್ದಂತೆ ಒಂದು ಕತ್ತೆ ಹಿಂಗಾಲು ಎಸೆಯುತ್ತ ತಿಂಮನ ಬಳಿ ಹಾಯಿತು. ಬೆಚ್ಚಿಬಿದ್ದ ತಿಂಮ ಹಿಂದೆ ಹಾರಿದ. "

"ಅದೇಕೋ ತಿಂಮ ಅಷ್ಟು ಭಯ? ನೋವೆಂಬುದು ಬರೀ ಮಾನಸಿಕ ಕಲ್ಪನೆ ಎಂದು ಹೇಳಲಿಲ್ಲವೇನೋ ಇದೀಗ? ಅದು ನಿನಗೆ ನೋವನ್ನು ಮಾಡಬಲ್ಲುದೆ?''

"ಅಹುದು ಸ್ವಾಮಿ, ಆ ವಿಷಯ ನನಗೆ ಗೊತ್ತು, ನಿಮಗೆ ಗೊತ್ತು. ಆ ಕತ್ತೆಗೆಲ್ಲಿದೆ ಮಾನಸಶಾಸ್ತ್ರದ ಪಾಂಡಿತ್ಯ? ಅದು ನಿಮ್ಮ ಭಾಷಣಕ್ಕೆ ಬಂದಿರಲಿಲ್ಲ."



## ನಾಡಹಬ್ಬದ ಭಾಷಣ

ಮಹಾರಾಜರ ಕುದುರೆಗೆ ಬಹಳ ಕಾಹಿಲೆಯಾಗಿ ಇಡೀ ಸಂಸ್ಥಾನವೇ ತಲೆ ಬುಡವಾಯಿತು. ರಾಜಪ್ರೇಮಿಗಳು ಅಶ್ವಪ್ರೇಮಿಯಾದ ರಾಜನೊಟ್ಟಿಗೆ 'ಗೋಳೋ' ಎಂದು ಅತ್ತರು. ಎಲ್ಲರ ಸುದೈವದಿಂದ ವಿದೇಶದಿಂದೊಬ್ಬ ಪಶುವೈದ್ಯರು ಬಂದು ರಾಜರ ಕುದುರೆಗೆ ಜೀವದಾನ ಕೊಟ್ಟರು. ಕಡೆಗೂ ಕುದುರೆ ಬದುಕಿತು. ಆದರೆ ಪಶು ವೈದ್ಯರು ಒಂದು ಮಾತನ್ನು ಮಾತ್ರ ಖಂಡಿತವಾಗಿ ಹೇಳಿದರು.

"ಈ ಕುದುರೆಗೆ ಗುಣವಾಗಬೇಕಾದರೆ ಇದು ಕೂಡಲೆ ನಿದ್ರೆಮಾಡಬೇಕು. ಇದು ನಿದ್ರೆ ಮಾಡದಿದ್ದರೆ ಸಾಯುತ್ತದೆ" ಎಂದರು.

ಮಹಾರಾಜರು ಚಿಂತೆಗೀಡಾದರು. ಉಪಾಯಕಾಣದೆ ತಿಂಮನನ್ನು ಕರೆಯಿಸಿ ಆಲೋಚನೆ ಮಾಡಿದರು. ತಕ್ಷಣವೇ ತಿಂಮ ಉತ್ತಮ ಔಷಧಿಯನ್ನು ಸೂಚಿಸಿದ.

"ಕುದುರೆಗೆ ನಿದ್ರೆ ಬರುವಂತೆ ಮಾಡುವದಕ್ಕೆ ಇಷ್ಟೇಕೆ ಮಹಾಸ್ವಾಮಿ ಯೋಚನೆ? ನಮ್ಮ ನಾಡಹಬ್ಬದ ಸಭೆಗೆ ಕರೆ ತನ್ನಿ. ನಿಮ್ಮ ಕುದುರೆಯು ಭಾಷಣ ಮುಗಿಯುವ ಮುನ್ನವೇ ಗೊರಕೆ ಹೊಡಿಯುತ್ತದೆ."

## ಯಾರು ಮೊದಲು?

ವಾದಗ್ರಸ್ತವಾದ ವಿಷಯದ ಮೇಲೊಬ್ಬರು ಉದ್ದುದ್ದ ಭಾಷಣವನ್ನು ಬಿಗಿಯುತ್ತಿದರು. ಸಭಿಕರು ಒಬ್ಬೊಬ್ಬರೇ ಎದ್ದು ಮಧ್ಯೆ ಮಧ್ಯೆ ಮಾತನಾಡಲು ಸುರುಮಾಡಿದರು. ಭಾಷಣಕಾರರಿಗೆ ಕೋಪ ಬಂದಿತು.

"ಈ ಸಭೆಯಲ್ಲಿ ಮೂರ್ಖರೇ ಹೆಚ್ಚು ಇದ್ದಂತಿದೆ; ಆಗಲಿ, ಮೊದಲು ಮೂರ್ಖರೇ ಮಾತಾಡಲಿ" ಎಂದು ಕುಳಿತು ಬಿಟ್ಟರು.

ತಿಂಮ ವಿನಯದಿಂದ ಕೈ ಮುಗಿದು ನಿಂತು ಭಾಷಣಕಾರರನ್ನು ವಿಜ್ಞಾಪಿಸಿದ.

"ಮೊದಲು ಮೂರ್ಖರೇ ಮಾತನಾಡಲಿ ಎಂದು ತಾವು ಅಪ್ಪಣೆ ಕೊಡಿಸಿದ್ದೀರಿ. ಕಾರಣ ಪ್ರಾರಂಭವಾಗಲಿ ತಮ್ಮ ಭಾಷಣ."

## ಯಾವುದಕ್ಕೆ ಲಾಯಿಖು?

"ಅಪ್ಪಾ"

"ಏನೋ ತಿಂಮಾ?"

"ಮೊನ್ನೆ ಮೈಸೂರಲ್ಲಿ ಶಿಕ್ಷಣ ಮಂತ್ರಿಗಳು ಹೇಳಿದ್ದನ್ನು ಕೇಳಿದೇನಪ್ಪಾ?"

"ಏನೋ ತಿಂಮಾ ಹೇಳಿದರು?"

"ಮ್ಯಾಟ್ರಿಕ್ ಪಾಸಾದ ಪ್ರತಿಯೊಬ್ಬನೂ ಕನಿಷ್ಟ ಆರು ತಿಂಗಳಾದರೂ ಮಾಸ್ತರನಾಗಿ ದುಡಿಯಲೇಬೇಕಂತಪ್ಪಾ"

"ಇದು ಒಳ್ಳೇಯದೇ ಅಲ್ಲವೇನೋ ತಿಂಮಾ?"

"ಒಳ್ಳೆಯದೇನೋ ಸರಿ. ಆದರೆ ಮ್ಯಾಟ್ರಿಕ್ ನಪಾಸಾದವರಿಗೆ ಈ ಒತ್ತಾಯವಿಲ್ಲವಲ್ಲಪ್ಪಾ?"

"ಇಲ್ಲವೋ ತಿಂಮಾ"

"ಹಾಗಾದರೆ ಅವರು ಬರೀ ಮಂತ್ರಿ ಕೆಲಸಕ್ಕೆ ಲಾಯಿಖು!"

○ ○ ○

## ನಮ್ಮ ಡಾಕ್ಟರು

"ತಿಂಮಾ"

"ಏನಪ್ಪಾ?"

"ಡಾಕ್ಟರರ ಬಗ್ಗೆ ಒಬ್ಬ ಏನು ಹೇಳಿದ ಗೊತ್ತೇನೋ?"

"ಏನು ಹೇಳಿದನಪ್ಪಾ?"

"ಡಾಕ್ಟರರು ವಿದೇಶಿ ಔಷಧಿಗಳ ಏಜಂಟರಂತಲ್ಲೋ?"

"ಛೀಛೀ ಅಲ್ಲವಪ್ಪಾ; ಪಾಪ! ಅವರು ಯಮನ ಏಜಂಟರಪ್ಪಾ."

## ಜಾಣ ಡಾಕ್ಟರು

"ಅಪ್ಪಾ"

"ಏನೋ ತಿಂಮಾ?"

"ನಮ್ಮೂರಿಗೆ ಹೊಸ ಡಾಕ್ಟರರೊಬ್ಬರು ಬಂದಾರಪ್ಪಾ"

"ಅಹುದಂತೆ"

"ಅವರು ಬಹು ಜಾಣ ಡಾಕ್ಟರಂತಪ್ಪಾ"

"ಅಹುದಂತೆ"

"ಅವರು ಡಾಕ್ಟರ ಆದ ಕೂಡಲೆ ಮೊದಲು ತಮ್ಮ ಹೆಂಡತಿಗೇ ಔಷಧಿ ಕೊಟ್ಟರಂತಪ್ಪಾ."

"ಅಹುದಂತೆ"

"ಅಪ್ಪಾ...."

"ಏನೋ....ತಿಂಮಾ?"

"ಡಾಕ್ಟರರಿಗೆ ಕೂಡಲೆ ಎರಡನೇ ಮದುವೆ ಆಯಿತಂತಪ್ಪಾ"

## ಸರ್ಟಿಫಿಕೇಟುಗಳು

"ಅಪ್ಪಾ"

"ಏನೋ ತಿಂಮಾ?"

"ಹೊಸ ಡಾಕ್ಟರರೊಬ್ಬರು ಬಂದಿದ್ದಾರಪ್ಪಾ"

"ಎಲ್ಲಿದ್ದಾರೋ ತಿಂಮಾ?"

"ಮಾರ್ಕೀಟಿನಲ್ಲಿ ದವಾಖಾನೆ ಇಟ್ಟಿದ್ದಾರಪ್ಪಾ"

"ಅಲ್ಲಿ ಏನು ಗಿರಾಕಿ ಬರುತ್ತೆಯೋ? ಪಾಪ!"

"ಅದೇಕಪ್ಪಾ? ಅಲ್ಲಿಯೋ ಚನ್ನಾಗಿ ಹಣ ಬರುತ್ತಪ್ಪಾ"

"ಅದು ಹೇಗೋ ತಿಂಮಾ?"

"ಮಾರ್ಕೀಟಿನಲ್ಲಿ ಅಲ್ಲವೇನಪ್ಪಾ ಮತ್ತೆ, ಸರ್ಟಿಫಿಕೇಟುಗಳನ್ನು ಮಾರುವದು?"

## ಹೃದಯ ರೋಗ

ರಸ್ತೆಯಲ್ಲಿ ಸುತ್ತುವಾಗ ಒಬ್ಬರು ಸತ್ತರು, ಸೀನೇಮಾ ನೋಡುತ್ತ ಕುಳಿತಾಗ ಇನ್ನೊಬ್ಬರು ಸತ್ತರು, ಎಂಬ ಗಾಳೀ ಸುದ್ದಿಗಳು ಊರೆಲ್ಲ ಹಬ್ಬಿದವು. ಅವರಿಗೇನಾಗಿದ್ದಿತು, ಎಂದು ತಿಂಮ ಅಲ್ಲೆ-ಇಲ್ಲೆ ಕೇಳಿದ. 'ಹೃದಯ ರೋಗ'ವೆಂದರು. ತಿಂಮನ ತಲೆಗೆ ತೂರಲಿಲ್ಲ.

ದಾರಿಯಲ್ಲಿ ಬರುತ್ತ ನೋಡಿದ, ಉಗುರು ಕಡಿಯುತ್ತ ಬಹು ಕೆಲಸದಲ್ಲಿ ಡಾಕ್ಟರರು ಕುಳಿತಿದ್ದರು. ನೇರವಾಗಿ ಒಳಗೆ ಹೋಗಿ ಪ್ರಶ್ನೆ ಹಾಕಿದ-

"ಹೃದಯ ರೋಗ ಎನ್ನುವದು ಯಾರಿಗೆ ಬರುತ್ತೆ ಡಾಕ್ಟರೇ" ಎಂದ.

"ಯಾಕೊ ತಿಂಮಾ ?"

"ಎನೂ ಇಲ್ಲ. ಕೇಳಿದೆ"

"ಅದು ಏನು, ಯಾರಿಗಾದರೂ ಬರುತ್ತೆ. ಹೃದಯವಿದ್ದವರಿಗೆಲ್ಲಾ ಹೃದಯರೋಗ ಬರಬಹುದು."

"ಹೋಗಲಿ ಬಿಡಿ. ಸಧ್ಯ ನಿಮಗಂತೂ ಆ ರೋಗದ ಭಯವಿಲ್ಲವಲ್ಲ."



ಇವನಿಗೆ ಮೂಗೇ ಇಲ್ಲವಲ್ಲ! ಡಾಕ್ಟ್ರೇ? ಇವನಿಗೆ ಹೇಗೆ
ಕ್ಲೋರೋಫಾರಂ ಕೊಡೋದು.

## ಎರಡು ಗುಣಗಳ ವಕೀಲ

"ಅಪ್ಪಾ"

"ಏನೋ ತಿಂಮಾ?"

"ವಕೀಲನಲ್ಲಿ ಎರಡು ಗುಣಗಳಿವೆ ನೋಡಪ್ಪಾ"

"ಎರಡು ಗುಣಗಳಾವೋ ತಿಂಮಾ?"

"ಪ್ರತಿವಾದಿಯೊಂದಿಗೆ ಹೋರಾಡಿ ನಮಗೆ ಆಸ್ತಿಯನ್ನು ತಂದು ಕೊಡುತ್ತಾನಪ್ಪಾ"

"ಇದು ಒಂದು ಗುಣವಾಯಿತು. ಇನ್ನೊಂದು ಗುಣ ಆವುದೋ?"

"ಹಾಗೆ ತಂದುದನ್ನು ಹೋರಾಡದೆ ತಾನೇ ತೆಗೆದುಕೊಳ್ಳುತ್ತಾನಪ್ಪಾ"

## ತಕ್ಕ ಪಾರ್ಟು

ಒಬ್ಬ ಹಳೆ ಗೆಳೆಯನ ಶಿಫಾರಸು ಪತ್ರದೊಂದಿಗೆ ಬಂದ ಮನುಷ್ಯನೊಡನೆ ತಿಂಮನ ಸಂಭಾಷಣೆ ನಡೆಯಿತು.

"ಏನಯ್ಯಾ, ಏನು ಬೇಕು ನಿನಗೆ?" ಎಂದು ಕೇಳಿದ ತಿಂಮ.

"ನೌಕರಿ ಸ್ವಾಮಿ"

"ನನ್ನಲ್ಲಿ ಏನು ನೌಕರಿ ಇದೆಯೋ? ಇದುವರೆಗೂ ಏನು ಕೆಲಸ ಮಾಡುತ್ತಿದ್ದಿ?

"ಡಾಕ್ಟರ ಹತ್ತಿರ ಇದ್ದೆ ಸ್ವಾಮಿ. ಅವರ ಬಿಲ್ಲು ವಸೂಲ ಮಾಡುತ್ತಿದ್ದೆ"

"ಹಾಗಾದರೆ ಪರವಾಯಿಲ್ಲ. ನಾಟಕ ಕಂಪನಿಯಲ್ಲಿ ಸೇರುತ್ತೀಯಾ?"

"ನನಗೇನು ಪಾರ್ಟು ಮಾಡಲು ಬರುತ್ತೆ ಸ್ವಾಮಿ?"

"ಅವರು ಹರಿಶ್ಚಂದ್ರ ನಾಟಕ ಆಡುತ್ತಾರೋ. ಅದರಲ್ಲಿ ನಕ್ಷತ್ರಕನ ಪಾರ್ಟಿಗೆ ನೀನು ಸರಿಯಾಗುತ್ತೀ"

## ಆತ್ಮಹತ್ಯೆ

“ಅಪ್ಪಾ”

“ಏನೋ ತಿಂಮಾ ?”

“ಒಬ್ಬನು ಆರು ಸಲ ಕುತ್ತಿಗೆ ಕೊಯ್ದುಕೊಂಡನಂತಪ್ಪಾ ಆದರೂ ಸಾಯಲಿಲ್ಲವಂತೆ.”

“ಅಹುದು”

“ಕತ್ತಿಯನ್ನು ಗೋಡೆಯಲ್ಲಿ ಸಿಕ್ಕಿಸಿ ಮೂರು ಸಲ ಹೃದಯದಲ್ಲಿ ನೆಡುವಂತೆ ಹಾದನಂತಪ್ಪಾ. ಆದರೂ ಸಾಯಲಿಲ್ಲವಂತೆ.”

“ಅಹುದು ಕೇಳಿದ್ದೇನೆ.”

“ಒಂದು ಸೀಸೆ ಫಿನಾಯಿಲ ಕುಡಿದನಂತಪ್ಪಾ. ಆದರೂ ಸಾಯಲಿಲ್ಲವಂತೆ”

“ಅಹುದು ಕೇಳಿಬಲ್ಲೆ”

“ಅಪ್ಪಾ....”

“ಏನೋ.... ತಿಂಮಾ ?”

“ಅವನು ಪ್ರಾಥಮಿಕ ಶಾಲಾಶಿಕ್ಷಕರ ಕೆಲಸಕ್ಕೇಕಪ್ಪಾ ಅರ್ಜಿ ಹಾಕಲಿಲ್ಲ ?”

## ಸುಪ್ರಸಿದ್ಧ ಡಾಕ್ಟರರು

ರಸ್ತೆಯಲ್ಲಿ ಸಿಕ್ಕ ಗೆಳೆಯರೊಬ್ಬರನ್ನು ತಿಂಮ ಕೇಳಿದ.

“ಹೇಗಿದೆಯಯ್ಯಾ ನಿನ್ನ ತಂದೆಗೆ ಈಗ?”

“ಹೇಗೇನು? ಇದ್ದಾರೆ ಇನ್ನೂ ಜೀವದಿಂದ”

“ಕಾಹಿಲೆ? [illegible]

[illegible]ನಕೂ, [illegible]ಕುವ ಆಶೆ ಎಷ್ಟೂ ಇಲ್ಲ. ಆದರೆ ಅವರು ಪಡುತ್ತಿರುವ [illegible]ಯನ್ನು ಮಾತ್ರ ನೋಡಲು ಸಹ ಸಾಧ್ಯ [illegible]ದರೆ ಒಳಿತು ಎನಿಸಿದೆ”

“ಹಾಗಾದರೆ ಕರೆದೇಬಿಡು, ಆ ಡಾಕ್ಟರರನ್ನು” ಎಂದು ಸೂಕ್ತ ಸಲಹೆ ಕೊಟ್ಟ ತಿಂಮ.

## ಸರಿಯಾದ ಸಂಶಯ ?

ತಿಂಮ ಪೇಟೆಯಲ್ಲಿ ಹೊರಟಿದ್ದ, ಜನರು ಗುಂಪು ಕಟ್ಟಿ ನಿಂತಿದ್ದರು. ಏನು ನಡೆದಿದೆಯೋ ನೋಡೋಣವೆಂದು ತಿಂಮನೂ ಅಲ್ಲಿಗೆ ಹೊರಟ.

ಬಾಚಣಿಕೆ ಮಾರುವವನೊಬ್ಬ ಭಾಷಣವನ್ನು ಬಿತ್ತರಿಸುತ್ತಿದ್ದ. "ಇಗೋ ನೋಡಿರಿ, ಈ ಹೊಸ ಮಾದರಿಯ ಬಾಚಣಿಕೆಯನ್ನು. ಮೇಲಿನಿಂದ ಎಸೆದರೆ ಮುರಿಯುವದಿಲ್ಲ. ಬಿಲ್ಲಿನಂತೆ ಬಾಗಿಸಿದರೆ ತುಂಡಾಗುವದಿಲ್ಲ. ಸುತ್ತಿಗೆಯಿಂದ ಹೊಡೆದರೆ ಒಡೆಯುವದಿಲ್ಲ........"

"ಅದರಿಂದ ಬಾಚಿಗೊಳ್ಳಲು ಸಹ ಬರುತ್ತಿದೆಯೋ ?" ತಿಂಮ ನಡುವೇ ಬಾಯಿ ಹಾಕಿದ.

○ ○ ○


## ವೃತ್ತಿ ಏನು ?

ಬಹು ದಿನಗಳ ನಂತರ ತಿಂಮನ ಹಳೆ ಗೆಳೆಯ ಕಣ್ಣಿಗೆ ಬಿದ್ದ. ತಿಂಮ ಕುಶಲ ಪ್ರಶ್ನೆ ಮಾಡಿದ.

"ಏನಯ್ಯಾ ಚೆನ್ನಾಗಿದ್ದೀಯಾ ? ಏನು ಕೆಲಸ ಮಾಡುತ್ತಿ ?"

"ಪ್ರಾಥಮಿಕ ಶಾಲೆಯ ಮಾಸ್ತರಾಗಿದ್ದೀನಿ."

'ನಿನ್ನ ತಲೆ! ವೃತ್ತಿ ಏನಯ್ಯಾ? ವೃತ್ತಿ ಅಂದರೆ, ಹೊಟ್ಟೆಗೇನು ಮಾಡುತ್ತೀ ಎಂದರ್ಥ."



# ಪಶು ಚಿಕಿತ್ಸೆ

ತಿಂಮನ ಹಸುವಿಗೊಮ್ಮೆ ಕಾಯಿಲೆ. ಮುಂದೆ ಇಕ್ಕಿದ ನೀರು ಮೇವು ಮುಟ್ಟದೆ, ಕಲಕತ್ತೆಯ ಸರಕಾರಿ ನೌಕರರಂತೆ, ಮೇವು ತ್ಯಾಗ ವ್ರತವನ್ನು ಕೈಗೊಂಡಿತು. ಪ್ರಾಣಿ ದಯೆಯುಳ್ಳ ತಿಂಮನಿಗೆ ಪ್ರಾಣ ಹೋದಂತಾಗಿ ಪಶು ವೈದ್ಯರ ಬಳಿ ಓಡಿದ. ಬರೀ ಆಸ್ಪತ್ರೆಯಲ್ಲಿ ಎರಡು ತಾಸು ಮೂರೂ ಬೆಂಚಿಗಳ ಮೇಲೆ ಕುಳಿತು ಆಕಳಿಸಿ, ಮೈಮುರಿದು, ಬಾಯಿ ಮುಂದೆ ಚಿಟಿಗೆ ಹೊಡೆದಾದ ಮೇಲೆ, ಪಶು ವೈದ್ಯರು ಪ್ರತ್ಯಕ್ಷರಾಗಿ ಔಷಧಿಯನ್ನು ದಯಪಾಲಿಸಿದರು.

"ಈ ಗೋಲಿಯನ್ನು ಆ ಹಸು ಹೇಗೆ ಸ್ವಾಮಿ ನುಂಗಬೇಕು?" ಎಂದು ತಿಂಮ ಮೋರೆ ನೋಡಿದ.

ಔಷಧಿ ಸೇವನೆಯ ಕ್ರಮವನ್ನು ವೈದ್ಯರು ಅರ್ಧ ಗಂಟೆ ವಿವರಿಸಿ ತಿಳಿಸಿದರು. "ಒಂದು ಊದುಕೊಳವಿಯಲ್ಲಿ ಈ ಗೋಲಿಯನ್ನಿಕ್ಕಿ, ಒಂದು ತುದಿಯನ್ನು ಆಕಳ ಬಾಯಿಯಲ್ಲಿಟ್ಟು, ಇನ್ನೊಂದು ತುದಿಗೆ ನೀನು ಬಾಯಿ ಹಚ್ಚಿ ಊದು. ಮಾತ್ರೆಯು ತಾನೇ ಹೊಟ್ಟೆಯಲ್ಲಿ ಹೋಗುತ್ತೆ"

ತಿಳಿಯಿತೆಂದು ತಲೆಯಾಡಿಸಿ ಮನೆಗೆ ಹೊರಟ ತಿಂಮ; ಹತ್ತೇ ನಿಮಿಷಗಳಲ್ಲಿ ಕಂಗಾಲಾಗಿ ಓಡುತ್ತ ಪಶು ವೈದ್ಯರ ಹತ್ತಿರ ಬಂದ.

"ಏನೋ ತಿಂಮ, ಪುನಃ ಬಂದೆ?"

"ತಾವು ಕೊಟ್ಟ ಮಾತ್ರೆ ನನ್ನ ಹೊಟ್ಟೆಯಲ್ಲಿ ಹೋಯಿತು ಸ್ವಾಮಿ"

"ಅದನ್ನೇಕೋ ನುಂಗಿದಿ?"

"ನನ್ನಕಿಂತಲೂ ಜೋರಾಗಿ ಹಸುವೇ ಊದಿಬಿಟ್ಟಿತು."

## ಅಭ್ಯಾಸ ಕಾರಣ

ತಿಂಮನ ಸ್ನೇಹಿತನೊಬ್ಬ ಕಾರಕೂನ. ಅವನಿಗೆ ಜ್ವರ ಬಂದು ಮೂಲೆಯಲ್ಲಿ ಮಲಗಿದಾಗ ತಿಂಮ ಡಾಕ್ಟರರನ್ನು ಹುಡುಕಿ ತಂದ. ರೋಗಿಯ ಮುಂಗೈ ಹಿಡಿದು ನಾಲಿಗೆಯನ್ನೂ ಕಂಣು ಕಿಸಿದು ನಾಡಿಯನ್ನೂ ಬಾಯಿ ತೆರೆಯಿಸಿ ಕಂಣಲ್ಲಿಯ ರಕ್ತವನ್ನೂ ನೋಡಿ, ಡಾಕ್ಟರರು ರೋಗಿಯ ಕೈಗೆ ಉಷ್ಣಮಾಪಕ ಯಂತ್ರ (ಥರ್ಮಾಮೀಟರ್) ವನ್ನು ಕೊಟ್ಟರು.

"ಅವನಿಗೆ ಹೇಳಿ, ಅದನ್ನು ಎಲ್ಲಿ ಇಟ್ಟುಗೊಳ್ಳಬೇಕೆಂಬದನ್ನು" ಎಂದು ತಿಂಮ ಸಲಹೆ ಕೊಟ್ಟ.

"ನಿನ್ನ ತಲೆ. ಅವನಿಗೆ ಅಷ್ಟು ಗೊತ್ತಿಲ್ಲವೆ" ಎಂದು ಗದರಿಸಿದರು ಡಾಕ್ಟರರು.

"ಅವನು ಕಾರಕೂನ ಕಣ್ರೀ........"

ಎಂದು ಏನನ್ನೋ ತಿಂಮ ಹೇಳುತ್ತಲಿದ್ದ. ಉಷ್ಣಮಾಪಕ ಯಂತ್ರ ರೋಗಿಯ ಬಲಗಿವಿಯ ಮೇಲೆ ಹತ್ತೇಬಿಟ್ಟಿದ್ದಿತು ಲೆಕ್ಕಣಿಕೆಯಂತೆ.

o o o

## ಪ್ರಾಮಾಣಿಕ ವಕೀಲ

ಪ್ರಾಯಕ್ಕೆ ಬಂದ ಮಗಳ ಅಭಿಪ್ರಾಯವನ್ನು ತಿಳಿದುಕೊಳ್ಳಲು ತಿಂಮ ಒಮ್ಮೆ ಪ್ರಯತ್ನ ನಡೆಸಿದ.


"ಯಾರನ್ನು ಲಗ್ನವಾಗುವ ಇಷ್ಟವಿದೆಯಮ್ಮ ನಿನಗೆ?"

"ಪ್ರಾಮಾಣಿಕನಾಗಿರಬೇಕು, ವಕೀಲನಾಗಿರಬೇಕು, ಅಂತಹನನ್ನು."

"ಛೀ ಹುಚ್ಚಿ! ಇಬ್ಬಿಬ್ಬರನ್ನು ಮದುವೆಯಾಗಕೂಡದು"

## ಅವಸರದ ಪರಿಹಾರ

ಪ್ರಾಥಮಿಕ ಶಾಲೆಗಳ ಉಪಾಧ್ಯಾಯರುಗಳು ಒಟ್ಟಿಗೆ ಸೇರಿ "ಅರೆ ಹೊಟ್ಟೆಯವರ ಸಂಘ" ವನ್ನು ಮಾಡಿಕೊಂಡು ಮುಂದೇನು ಗತಿ, ಎಂದು ಯೋಚನೆ ಮಾಡಿದರು. ಬೇರೆ ಊರಿಗೆ ಹೋಗುತ್ತಿದ್ದ ಮಂತ್ರಿಗಳನ್ನು ತಮ್ಮ ಊರಿಗೆ ಬರಮಾಡಿಕೊಂಡು ವಿದ್ಯಾರ್ಥಿಗಳನ್ನು ಗಿಡಗಳ ಮೇಲೇರಿಸಿ ತಳಿರು ತೋರಣ ಕಟ್ಟಿಸಿದರು. ಸ್ವಾಗತವು ಸ್ವೀಕೃತವಾಯಿತು. ಗುರುಗಳ ಗೋಳು ಕೇಳಿ ಮಂತ್ರಿಗಳ ಕಣ್ಣಲ್ಲಿ ನೀರು ಬಂದಿತು. ಮಂತ್ರಿಗಳ ವಾಗ್ದಾನ ಕೇಳಿ ಗುರುಗಳ ಬಾಯಲ್ಲಿ ನೀರು ಬಂದಿತು. ''ನಿಮ್ಮ ಸಂಬಳವನ್ನು ಹೆಚ್ಚಿಸುತ್ತೇವೆ. ಆದರೆ ಕೊಂಚ ತಡವಾದೀತು. ಸಂಪೂರ್ಣ ಪರಿಹಾರವನ್ನು ಕೊಡಲಿಚ್ಛಿಸುತ್ತೇವೆ'' ಎಂದು ಮಂತ್ರಿಗಳು ನುಡಿದು ಸಭೆಯಲ್ಲಿ 'ತಾಲ್ ಬಜಾವ್' ಮಾಡಿಸಿದರು. ಮೂಲೆಯಲ್ಲಿ ಕುಳಿತಿದ್ದ ತಿಂಮ ಎದ್ದು ನಿಂತು ಕೈ ಮುಗಿದು ಹೇಳಿದ ''ಸಂಪೂರ್ಣ ಪರಿಹಾರದ ಕೆಲಸವನ್ನು ಈಗಿಂದಲೇ ದಯವಿಟ್ಟು ಆರಂಭಿಸಬೇಕು. ಇಲ್ಲದಿದ್ದಲ್ಲಿ ಅದು ಅವಸರದ ಪರಿಹಾರದ ಮುಂಚೆಯೇ ಬರಲಿಕ್ಕೆ ಸಾಧ್ಯವಾಗಲಿಕ್ಕಿಲ್ಲ."



"ಇದೇನು ಸ್ವಾಮಿ" ಕೈಯಲ್ಲಿ?
"ಗಾಯಗಳಿಗೆ ಹಚ್ಚುವ ಔಷಧಿ"

## ಏನು ಗತಿ?

"ಅಪ್ಪಾ"

"ಏನೋ ತಿಂಮಾ?"

"ಕೇಂದ್ರ ಸರಕಾರವು ನಿರಕ್ಷರತೆಯನ್ನು ಓಡಿಸುತ್ತದಂತೆ"

"ಆಹುದಂತೆ"

"ಅಂದರೆ ಎಲ್ಲರಿಗೂ ಬರೆಯಲು ಬರುತ್ತೇನಪ್ಪಾ?"

"ಆಹುದೋ ತಿಂಮಾ"

"ಅಪ್ಪಾ"

"ಏನೋ ತಿಂಮಾ?"

"ಇವರೆಲ್ಲರೂ ಕವನ ಬರೆದರೆ ಗತಿ ಏನಪ್ಪಾ?"

## ಸಂಗೀತಕ್ಕೆ ಸಿದ್ಧತೆ

ಪಕ್ಕದ ಮನೆ ರಾಯರ ಹೆಂಡತಿ ತಿಂಮನ ಮನೆಗೆ ಬಂದರು. 'ನನ್ನ ಮಗಳ ಸಂಗೀತ ಸಾಗಿದೆ. ಕೂಡಲೇ ಬನ್ನಿ' ಎಂದು ತಿಂಮನ ಹೆಂಡತಿಗೆ ಹೇಳಿ, ಕರೆದೊಯ್ಯಲು ಕಾದು ನಿಂತರು. ರಾಯರ ಹೆಂಡತಿ ಅರ್ಧಗಂಟೆ ಕಾಯ್ದರೂ ತಿಂಮನ ಹೆಂಡತಿಯ ಸಿಂಗಾರವೇ ಮುಗಿಯಲಿಲ್ಲ. ಸಿಟ್ಟಿಗೆ ಬಂದ ತಿಂಮ ಇದ್ದಲ್ಲಿಂದಲೇ ಕೂಗಿದ.

"ಇದೇನು ಅನ್ಯಾಯ? ಅವರು ಬಾಗಿಲಲ್ಲಿ ನಿಂತೇ ಗಂಟೆಯಾಯಿತು. ಸಂಗೀತಕ್ಕೆ ಹೊರಡಲೂ ಸಹ ಇಷ್ಟು ಹೊತ್ತು ಬೇಕೇ ನಿನಗೆ? ಏನು ಮಾಡುತ್ತಾ ಕುಳಿತಿ?"

"ಆಯಿತು, ಸಿದ್ಧವಾಗುತ್ತಿದ್ದಾರೆ. ಈಗ ಬರುತ್ತಾರೆ" ಎಂದು ರಾಯರ ಹೆಂಡತಿ ಉತ್ತರಿಸಿದರು.

"ನಿಮ್ಮ ಮಗಳ ಸಂಗೀತ ಕೇಳಲು ಇವಳ ಸಿದ್ಧತೆ ಏನಂತಮ್ಮಾ? ಕಿವಿಯಲ್ಲೆರಡು ಮುದ್ದಿ ಹತ್ತಿ ತುರಿಕಿ ಹೊರಡೋಕೆ ಒಂದು ಗಂಟೆ ಬೇಕೆ?" ಎಂದ ತಿಂಮ.

## ಕಾಟು ಹಾಕುವ ಸ್ಫೂರ್ತಿ

ವರಕವಿಗಳೊಬ್ಬರು ಉತ್ತಮ ಕವನವೊಂದನ್ನು ಹೊಸೆಯುತ್ತಿದ್ದರು. ಬಾಯಿ ತೆಗೆದು ನಿಂತು ನೋಡುತ್ತಿದ್ದ ತಿಂಮ.

"ಇಷ್ಟೊಂದು ದೊಡ್ಡ ಕವನವನ್ನು ಹೇಗೆ ಸ್ವಾಮೀ ಬರೆದಿರಿ ?"

"ಸರಸ್ವತಿಯು ಬರೆಸುತ್ತಾಳೋ ತಿಂಮಾ"

"ಕಾಟು ಹಾಕಿದ್ದು ನಿಮ್ಮದು, ಉಳಿದದ್ದು ಸರಸ್ವತಿಯದು, ಅಲ್ಲೇನು ಸ್ವಾಮಿ ?"

ಂ ಂ ಂ

## ಸಂಗೀತಕ್ಕೆ ಔಷಧಿ

ಬಾಲ ಸ್ನೇಹಿತನೊಬ್ಬನು ಬಹು ದಿನಗಳ ನಂತರ ತಿಂಮನ ಮನೆಗೆ ಬಂದ. ನಮಸ್ಕಾರ ತಿರಸ್ಕಾರಾದಿಗಳು ಮುಗಿದ ನಂತರ ತಿಂಮ ಹರಟೆಗೆ ಕುಳಿತ. ಒಮ್ಮೆಲೆ ತಿಂಮನ ನೆನಪಿಗೆ ಬಂದಿತು.

"ಅಲ್ಲವೋ, ಗುಕ್ಕು ಇರಲಿಲ್ಲವೇ ನಿನಗೆ ಚಿಕ್ಕವನಾಗಿದ್ದಾಗ ?"

"ಅಹುದು, ಈಗ ಗುಣವಾಗಿದೆ"

"ಹೇಗಯ್ಯ ಅದನ್ನು ಕಳೆದುಕೊಂಡೆ ?"

"ಸಂಗೀತ ಅಭ್ಯಾಸ ಮಾಡಿದೆ, ಗುಕ್ಕು ತಾನಾಗಿಯೇ ಹೋಯಿತು."

"ಒಳ್ಳೆಯ ಉಪಾಯವೇ; ಎಲ್ಲಿ, ಒಂದು ಹಾಡು ಹೇಳು ನೋಡುವಾ"

ತಿಂಮನ ಗೆಳೆಯನ ಸಂಗೀತವಾಯಿತು. ಅರ್ಧದಲ್ಲಿಯೇ ನಿಲ್ಲಿಸಿ ತಿಂಮ ಉಪದೇಶಿಸಿದ.

"ಗುಕ್ಕನ್ನೇ ಅಭ್ಯಸಿಸು."

# ಕಲಾ ಮಂದಿರ

ಪ್ರಸಿದ್ಧ ಚಿತ್ರಕಾರರ ಕಲಾಮಂದಿರದಲ್ಲಿ ನುಗ್ಗಿದ ತಿಂಮ ಎದುರು ಗೋಡೆಗಳಿಗೆ ನೇತಾಡುತ್ತಿದ್ದ ದೇಶಭಕ್ತರ ಭಾವಚಿತ್ರಗಳನ್ನು ನೋಡುತ್ತ ನಿಂತ.

"ಏನೋ ತಿಂಮಾ, ಚನ್ನಾಗಿವೆಯೇನೋ ತೈಲಚಿತ್ರಗಳು ?" ಎಂದು ಕಲಾವಂತರು ಕೇಳಿದರು.

"ಚನ್ನಾಗಿಯೇ ಇವೆ ಸ್ವಾಮಿ. ಆದರೆ ಇದೇನು, ಆ ಗೋಡೆಗೆ ಹಲವು ಈ ಗೋಡೆಗೆ ಹಲವು ಹಾಕಿದ್ದೀರಲ್ಲ?"

"ಎಡಗಡೆ ಇರುವವರೆಲ್ಲರೂ ಕಾಲವಾದವರು; ಬಲಗಡೆ ಇರುವವರು ಜೀವಂತ ಇರುವವರು."

ಕೊಂಚ ಹುಡುಕಾಡಿ ಮೆಲ್ಲಗೆ ಗೊಣಗಿದ ತಿಂಮ. "ನಿಮ್ಮ ಚಿತ್ರವು ಎರಡರಲ್ಲಿಯೂ ಇಲ್ಲವಲ್ಲ?"

ನಾ॰ಸ್ವತ್ವಾಲ್ಕ

# ಹೃದಯದ್ರಾವಕ

ಊರ ಮುಂದಿನ ಗುಡಿಯಲ್ಲಿ ಸುಪ್ರಸಿದ್ಧ ಗವಾಯಿಗಳ ಸಂಗೀತ ಸಭೆಯು ಕಿಕ್ಕಿರಿಯಿತು. ಬೀಸಣಿಕೆ ಆಡುವಷ್ಟು ಸಹ ಎಡೆಯಿರಲಿಲ್ಲ. ಗವಾಯಿಗಳ ರಾಗವು ಕಳೆಗಟ್ಟಿತು. ರಸಿಕರು ಅರ್ಥಾತ್, ಚಂದಾಕೊಡದೆ ಮುಂದೆ ಕುಳಿತವರು, ತಮ್ಮ ತಲೆಯಾಡಿಸಿ ಬದಿಯಲ್ಲಿದ್ದವರ ತೊಡೆ ಕುಣಿಸಿದರು. ಇದ್ದಕ್ಕಿದ್ದಂತೆ ಮೂಲೆಯಿಂದ ಹೋ ಎಂದು ಯಾರೋ ಅತ್ತು ಬಿಟ್ಟರು. ಸಭೆಯಲ್ಲೆಲ್ಲರು ಗಾಬರಿಯಾಗಿ ತಿರುಗಿ ನೋಡಿದರು. ಬಿಕ್ಕಿ ಬಿಕ್ಕಿ ಅಳುತ್ತಿದ್ದ ತಿಂಮ.

"ಏನಾಯಿತೋ ತಿಂಮಾ?" ಎಂದರು ಎಲ್ಲರೂ. ಇನ್ನೂ ಅಳುತ್ತಲೇ ಇದ್ದ.

"ಏನಾದರೂ ಕಡಿಯಿತೇನೋ?"

"ಇಲ್ಲ."

"ಮತ್ತೇಕೆ ಅಳುತ್ತೀ?"

"ಸತ್ತು ಹೋದ ನಮ್ಮ ಮೇಕೆಯ ನೆನಪಾಯಿತು." ಹೆಚ್ಚು ಅಳಲಾರಂಭಿಸಿದ ತಿಂಮ.

"ಏಕೋ ಈಗ ಮೇಕೆಯ ನೆನಪಾಯಿತು?"

"ಗವಾಯಿಗಳ ಸಂಗೀತ ಹಾಗೆಯೇ ಇದೆ" ತಿಂಮ ಗೋಳಾಡಿದ.



ಇನ್ನೂ ಒಂದೆರಡು ಹಾಡು, ನನ್ನ ಕಿವಿಯಲ್ಲಿ ಹತ್ತಿ ತುರುಕಿದ್ದೇನೆ.

ನಾಲ್ವತ್ತೈದು

## ಅಯ್ಯೋ, ! ಸೀಮೆ ಎಣ್ಣೆ !!

ತಿಂಮ ಕನಸಿನಲ್ಲಿ ಹೆಂಡತಿಯೊಡನೆ ಕದನ ಹೂಡಿದ. ನಿಮ್ಮಿಂದ "ಬೈಗಳನ್ನು ತಿಂದು ನಾನೇಕೆ ಬಾಳಬೇಕು'' ಎಂದವಳೆ ಸೀಮೆ ಎಣ್ಣೆಯ ಸೀಸೆ ಎತ್ತಿ ಕುಡಿದು ತಿಂಮನ ಹೆಂಡತಿ ನಿಜವಾಗಿಯೂ ತಿಂಮನ ಕನಸಿನಲ್ಲಿ ಸತ್ತೇ ಬಿದ್ದಳು. ತಿಂಮ ಚಿಟ್ಟನೇ ಚೀರಿ ಅಳುತ್ತ ಎದ್ದ; ಗಾಬರಿಯಿಂದೆದ್ದು 'ಏನಾಯಿತು' ಎಂದಳು ತಿಂಮನ ಹೆಂಡತಿ. "ಅಯ್ಯೋ, ಸೀಮೆ ಎಣ್ಣೆ" ಎಂದು ಅವನು ಗೋಳಾಡಿದ.

o o o

## ತಿಂಮನ ಜುಟ್ಟು

ರೇಶನ ಡಿಪೋದ ಮುಂದೆ ನಾ ಮುಂದು ನೀ ಮುಂದು ಎಂದು ನುಗ್ಗಾಟವಾಗಿ, ಬಾಯಿಗೆ ಬಾಯಿ ಕೈಗೆ ಕೈ ಹತ್ತಿ, ತಿಂಮನ ಜುಟ್ಟಿಗೆ ಒಬ್ಬರ ಕೈ ಹತ್ತಿ, ಗೋಪಾದದಷ್ಟಿದ್ದ ಜುಟ್ಟು ಕಿತ್ತೇ ಹೋಯಿತು.

ತಿಂಮನ ಹೆಂಡತಿಯು ಗಂಡನ ಜುಟ್ಟು ಕಿತ್ತಿದವರ ಮೇಲೆ ಹತ್ತು ಸಾವಿರ ರೂಪಾಯಿಗೆ ದಾವಾ ಹೂಡಿ ಕೋರ್ಟಿನ ಕಟ್ಟೆ ಹತ್ತಿಸೇಬಿಟ್ಟಳು.

ನ್ಯಾಯಾಧೀಶರು ತಿಂಮನ ಹೆಂಡತಿಯನ್ನು ಪ್ರಶ್ನಿಸಿದರು.

" ಜುಟ್ಟು ಹೋದದ್ದಕ್ಕೆ ಹತ್ತು ಸಾವಿರ ರೂಪಾಯಿ ಏಕಮ್ಮಾ ಕೊಡಬೇಕು ? ಅದಕ್ಕೆ ಅಷ್ಟು ಬೆಲೆಯೇ ?

'' ನನ್ನ ಗಂಡನ ಮೇಲಿನ ನನ್ನ ಹಿಡಿತವೇ ಹೋಯಿತಲ್ಲ, ಸ್ವಾಮಿ ? ಇನ್ನು ಅವರು ನನ್ನ ಕೈಗೆ ಸಿಕ್ಕಾರೆಯೇ ? "

## ಜೀವದಾಶೆ

ಬೆಳಗಿನ ಜಾವದಲ್ಲಿಯೇ ತಿಂಮ ಊರ ಹೊರಗಿನಿಂದ ಊರಲ್ಲಿ ಬರುತ್ತಿದ್ದ. ರಸ್ತೆಯಲ್ಲಿ ಎದುರಾದ ಪರಿಚಿತರೊಬ್ಬರು ಪ್ರಶ್ನೆಮಾಡಿದರು.

"ಇನ್ನೂ ಕತ್ತಲಿದೆ, ಈಗಾಗಲೇ ಎಲ್ಲಿಗಯ್ಯ ಹೋಗಿಬಂದಿ?"

"ಬೆಳಗಿನ ಜಾವದಲ್ಲಿ ಎದ್ದು ಓಡುತ್ತೇನೆ, ಎರಡು ಮೂರು ಮೈಲಿ."

"ಶಬಾಸ್! ಚಿಕ್ಕವನಿದ್ದಾಗ ಅಷ್ಟು ಮೈಗಳ್ಳನಾಗಿದ್ದ ನಿನಗೆ ಹೇಗಯ್ಯಾ ಇಷ್ಟು ಚಟುವಟಿಕೆ ಬಂದುದು?

ಓಡಲು ಹೇಗೋ ಅಭ್ಯಾಸ ಮಾಡಿದಿ.?"

"ಓಡುವದೇನು ಮಹಾಕಷ್ಟವಲ್ಲ. ನನ್ನ ಹೆಂಡತಿಯು ಹಿಂದೆ ಬೆನ್ನು ಹತ್ತಿ ಬರುತ್ತಿದ್ದಾಳೆ ಎಂದು ಮನಸಿನಲ್ಲಿ ಅಂದುಕೊಂಡರಾಯಿತು. ಮೋಟಾರ್ ಕಿಂತಲೂ ವೇಗವಾಗಿ ಕಾಲುಗಳೇ ಓಡುತ್ತವೆ. ಜೀವದಾಶೆ ಯಾರಿಗಿಲ್ಲ ಹೇಳಿ"

o o o

## ಏಕತಂತ್ರ ಜಗತ್ತು

ಊರ ಅಟ್ಟದ ಮೇಲೆ ಸಭೆ ಸೇರಿತು. ಏಕತಂತ್ರ ಜಗತ್ತಿನ ಮೇಲೆ ಉದ್ದುದ್ದ ಭಾಷಣಗಳು ಆದವು. ಹಲವರು ಹಲವಾರು ರೀತಿ ಅಭಿಪ್ರಾಯ ಗಳನ್ನು ವ್ಯಕ್ತ ಮಾಡಿದರು. ಯಾರ ಅಭಿಪ್ರಾಯವೂ ತಿಂಮನಿಗೆ ಸರಿಯೆನಿ ಸಲಿಲ್ಲ. ಕಡೆಗೆ ಅವನೇ ಒಂದು ಭಾಷಣವನ್ನು ಬಿಗಿದ—

"ಏಕತಂತ್ರ ಜಗತ್ತು ಪುರುಷ ವರ್ಗಕ್ಕೆ ಎಂದಿಗೂ ಸುಖಮಯವಾ ಗಿರಲಾರದು. ಕನಿಷ್ಟ ಪಕ್ಷ ಎರಡು ಜಗತ್ತುಗಳಾದರೂ ಬೇಕೇ ಬೇಕು; ನನ್ನದೊಂದು— ನನ್ನ ಹೆಂಡತಿಯದೊಂದು"

## ಮಕ್ಕಳೆಷ್ಟು?

ಹಳೆಯ ಪರಿಚಯದ ವೃದ್ಧರೊಬ್ಬರು ಹಾದಿಯಲ್ಲಿ ಕಂಡಾಗ ತಿಂಮನನ್ನು ಕುಶಲ ಪ್ರಶ್ನೆ ಮಾಡಿದರು. ಆ ಮಾತು ಈ ಮಾತು ಆದ ಮೇಲೆ,

"ನಿನಗೆಷ್ಟೋ ತಿಂಮ ಮಕ್ಕಳು?"

"ಉಳಿದವು ಮೂರಿವೆ, ಸ್ವಾಮಿ"

"ಒಟ್ಟು ಎಷ್ಟು ಹುಟ್ಟಿದ್ದು?"

"ಒಂದೊಂದೇ ಕಣ್ರೀ ಹುಟ್ಟಿದ್ದು"

o o o

## ತಿಂಮನ ಹೆಂಡತಿ

ವಿವಾಹಮಹೋತ್ಸವಾಹ್ವಾನಪತ್ರಿಕೆಯಲ್ಲಿ ಬಂಧುಜನವಿಧೇಯರು ತಪ್ಪು ಬರೆದಂತೆ- ಸಕುಟುಂಬ ಸಪರಿವಾರ ಸಮೇತನಾಗಿ- ತಿಂಮ ಸಪತ್ನಿಯೊಂದಿಗೆ ವನಭೋಜನಕ್ಕೆ ಹೊರಟಿದ್ದ.- ಅಲ್ಲಿ ಇಲ್ಲಿ ಅಡ್ಡಾಡುತ್ತ ತಿಂಮನ ಹೆಂಡತಿ ದಾರಿ ತಪ್ಪಿ ಕಾಡಿನ ಹಾದಿ ಹಿಡಿದು ಸಾಗುತ್ತಿದ್ದುದನ್ನು ಕಂಡ ತೋಟದ ಕಾವಲುಗಾರನು ಓಡುತ್ತ ಬಂದು ತಿಂಮನಿಗೆ ತಿಳಿಸಿದ.

"ಅಮ್ಮಾ ಅವರು ಅಡವಿಯ ಹಾದಿಯಲ್ಲಿ ಹೋದರು ಸ್ವಾಮಿ"

"ಸರಿ"

"ದೊಡ್ಡ ಹುಲಿ ಸೇರಿದೆ ಸ್ವಾಮಿ, ಆ ಕಾಡಿನಲ್ಲಿ"

"ಹುಲಿಯು ಸತ್ತರೆ ನಿನಗೇಕೋ ದುಃಖ?"

## ಅಹಿಂಸಾವಾದಿ

ಹಳೆಯ ಗೆಳೆಯರೊಬ್ಬರು ಸತ್ಯಾಗ್ರಹಿ ತಿಂಮನನ್ನು ಕಂಡದ್ದು, ಅವನು ಪೋಲೀಸರ ಲಾಠಿ ಪ್ರಹಾರ ತಿನ್ನುತ್ತಿದ್ದಾಗ- ಲತ್ತೆ ತಿಂದ ತಿಂಮನ ನೆತ್ತಿಯಿಂದ ರಕ್ತ ಸುರಿಯುತ್ತಿದ್ದರೂ ಕಿರುಬೆರಳನ್ನೂ ಎತ್ತದೆ ಸಾಧು ಅಂಹಿಸಾ ವಾದಿಯಾದ ತಿಂಮ ಸುಮ್ಮನೆ ಕುಳಿತಿದ್ದನು. ತಿಂಮನನ್ನು ಆಸ್ಪತ್ರೆಯಲ್ಲಿ ಮಲಗಿಸಿದಾಗ ಅವನ ಆ ಗೆಳೆಯರು ಬಂದು ಮಾತನಾಡಿಸಿದರು.

"ಅಲ್ಲವೋ ತಿಂಮಾ, ಶಾಲೆಯಲ್ಲಿದ್ದಾಗ ಅಷ್ಟು ಧೂರ್ತನಾಗಿದ್ದ ನೀನು ಒಮ್ಮಿಂದೊಮ್ಮೆಲೆ ಇಂತಹ ಅಹಿಂಸಾವಾದಿ ಹೇಗೋ ಆದಿ? ಎಲ್ಲಿಂದ ಬಂದಿತಯ್ಯಾ ಇಷ್ಟು ಸಹನೆ?"

"ಈ ಸಹನೆ ಒಂದೇ ದಿನದಲ್ಲಿ ಬಂದಿದ್ದಲ್ಲ. ಬಹು ದಿನಗಳಿಂದ ಈ ಲಾಠಿಪ್ರಹಾರದ ಪಾಠ ನನಗೆ ನಿತ್ಯವೂ ಆಗುತ್ತಲಿದೆ"

"ಅದು ಯಾರಿಂದಯ್ಯಾ, ನಿತ್ಯವೂ?"

"ನನಗೆ ಮದುವೆಯಾಗಿದೆ."



ಅಲ್ಲಿ—ಇಲ್ಲಿ


ಸಿಂಹ

# ಅವರನ್ನೇ ಕರೆಯಿರಿ

ಅಖಿಲ ಭಾರತ ಮಹಿಳಾ ಹಿತವಾದಿ ಸಮಾಜದ ಪರಿಷತ್ತು ಸೇರಲಿತ್ತು. ಸದಸ್ಯರನ್ನು ಮಾಡಲೋಸುಗ ದೊಡ್ಡವರ ದೊಡ್ಡ ಹೆಂಡಂದಿರು ಚಿಕ್ಕ ಕಾರುಗಳಲ್ಲಿ ಜಂಬದ ಚೀಲ ಕೈಲಿ ಹಿಡಿದು ಗಡಿಬಿಡಿಯಲ್ಲಿ ಓಡಾಡಿದರು. ಪುನುಗಿನ ಬೆಕ್ಕಿನಂತೆ ಗಮಗಮಿಸುತ್ತ ಜಾರ್ಜೆಟ ಸೀರೆ ಉಟ್ಟು ಉರುಳುವ ಬೂಟುಮೆಟ್ಟಿ ಜಂಟಿಕಾರ್ಯದರ್ಶಿಗಳು ತಿಂಮನ ಮನೆಗೂ ಬಂದರು. ಎರಡೂ ಕೂಸುಗಳನ್ನು ಒಂದೇ ತೊಟ್ಟಿಲಲ್ಲಿ ತುಂಬಿ ತೂಗುತ್ತ ಕುಳಿತಿದ್ದ ತಿಂಮ ಧಿಡಿಲ್ಲನೆ ಎದ್ದು 'ಒಳಗಿದ್ದಾರೆ' ಎಂದ.

ಮುನುಸುಗುಟ್ಟಿ ಮುಸುಗಿಕ್ಕಿ ಮಲಗಿದ ತಿಂಮನ ಹೆಂಡತಿ ಮುಸುಕು ಹಾರಿಸಿ ಎದ್ದು ಕಾರ್ಯದರ್ಶಿಯನ್ನು ದುರುದುರು ನೋಡಿದಳು. ಕಾರ್ಯದರ್ಶಿಯು ದೊಡ್ಡ ಪೀಠಿಕೆ ಹಾಕಿ ಚಿಕ್ಕ ಭಾಷಣ ಮಾಡುತ್ತ "ಸ್ವಾತಂತ್ರ್ಯ ಸರಿಸಮಾನತೆಗಳಿಗಾಗಿ ನಾವೆಲ್ಲರೂ ಹೋರಾಡುತ್ತೇವೆ. ನೀವೂ ಬರಬೇಕು" ಎಂದರು.

"ಹಾಗಾದರೆ ಅವರನ್ನೇ ಕರೆಯಿರಿ" ಎಂದು ತಿಂಮನ ಕಡೆ ಬೆರಳು ತೋರಿಸಿ ತಿಂಮನ ಅರ್ಧಾಂಗಿ ಮುಸುಗಿಕ್ಕಿದರು.

# ತಕ್ಕ ಗುರು

ಪೋಲಿಯಾಗಿ ಅಲೆದು, ಉಂಡು ಉಡಾಳರಾಗಿದ್ದ ಮಕ್ಕಳಿಗೆ ಓದು ಕಲಿಸಬೇಕೆಂದು ಸಾವಂ ಕರೋತಿ ಇತಿ ಸಾವು-ಕಾರರು ಯೋಚಿಸಿ ತಿಂಮನಿಗೆ ಹೇಳಿ ಕಳುಹಿದರು. ತಿಂಮನು ಬಂದು ಕುಳಿತ ಕೂಡಲೆ ನಾಲ್ಕು ಮಾತಿನಲ್ಲಿಯೇ ಸಾವುಕಾರರು ಸಂದರ್ಭವನ್ನು ಸೂಚಿಸಿದರು.

"ನಮ್ಮ ಹುಡುಗರು ಪೂರ್ತಿ ಕೈ ಮೀರಿದ್ದಾರೆ, ಸ್ವಾಮಿ"

"ಸರಿ"

"ಮೈ ಚರ್ಮವು ಸುಲಿಯುವಂತೆ ಚನ್ನಾಗಿ ಹೊಡೆಯಬೇಕು. ಗುರುಗಳನ್ನು ಕಂಡ ಕೂಡಲೆ ಅವರಿಗೆ ನಡುಗು ಹುಟ್ಟಬೇಕು ನೋಡಿ. ಅವರ ಪಾಲಿಗೆ ಸಾಕ್ಷಾತ್ ರಾಕ್ಷಸವೇ ಆಗಬೇಕು. ಇಲ್ಲದಿದ್ದರೆ........"

ತಿಂಮ ಮೆಲ್ಲಗೆ ಕಾಲ್ತೆಗೆದ.

"ಏನು ಎದ್ದಿರಲ್ಲ?"

"ಆಯಿತು, ಕಳಿಸುತ್ತೇನೆ"

"ಯಾರನ್ನು?"

"ಮನೆಗೆ ಹೋಗಿ ಅವಳನ್ನೇ ಕಳಿಸುತ್ತೇನೆ"

## ಹೊಸ ಆಭರಣ

ರಾಯರು ತಿಂಮನ ಹತ್ತಿರ ಗೋಳು ಹೇಳಿಕೊಂಡರು, ಒಂದು ಬಾರಿ. " ನನ್ನ ಹೆಂಡತಿಗೆ ಚಿನ್ನದ ಹುಚ್ಚು ಹಿಡಿದುಬಿಟ್ಟಿದೆಯೋ ತಿಂಮಾ. ಏನು ಮಾಡಬೇಕೋ ತಿಳಿಯದಾಗಿದೆ" ಎಂದರು.

"ದೇವರು ಕೊಟ್ಟ ಕಾಲಕ್ಕೂ ಏಕೆ ರಾಯರೆ ಯೋಚನೆ? ಆಭರಣ ಮಾಡಿಸಿ ಕೊಡಿ" ಎಂದ ತಿಂಮ.

"ಅಜ್ಜಿಯ ಕಾಲದ ನಾಗರದಿಂದ ಹಿಡಿದು ಮೊಮ್ಮಗಳ ಕಾಲದ ಲವ್ ಲಕ್ ಸಹ ಮಾಡಿಸಿ ಕೊಟ್ಟಾಯಿತು. ಇನ್ನೂ ಹೊಸ ನಮೂನೆಯ ಆಭರಣ ಬೇಕಂತೆ ಅವಳಿಗೆ."

"ಅಕ್ಕಸಾಲಿಗನನ್ನೇ ಕೇಳಿ ಬಿಡಿ" ಎಂದು ಸೂಚಿಸಿದ ತಿಂಮ.

"ಅದೂ ಆಯಿತು. ಇನ್ನಾವ ಹೊಸ ಆಭರಣವೂ ಇಲ್ಲವಂತೆ" ಎಂದರು ರಾಯರು

"ಹಾಗಾದರೆ ಡಾಕ್ಟರ ಹತ್ತಿರ ಕರೆದುಕೊಂಡು ಹೋಗಿ"ತಿಂಮ ನುಡಿದ.

"ಡಾಕ್ಟರ ಹತ್ತಿರ?"

" ಅಹುದು ಗೋಲ್ಡ್ (ಚಿನ್ನದ) ಇಂಜೆಕ್ಸನ್ ಮಾಡಿಸಿ ಬಿಡಿ ನಿಮ್ಮ ಹೆಂಡತಿಗೆ" ಎಂದು ಹೊಸ ಆಭರಣದ ಹೆಸರು ತಿಳಿಸಿದ ತಿಂಮ.

## ಈಗ ತಿಳಿಯಿತು

ಒಂದು ಬಾರಿ ತಿಂಮನ ಕೋಪವು ಅಳತೆಗೆಟ್ಟಿತು. ಕೈಹಿಡಿದವಳ ಕೆನ್ನೆಗೆ ಕೊಟ್ಟು ಕಂಣಿಂದ ಕಿಡಿ ಹಾರಿಸಿದ. ಆವೇಶದಲ್ಲಿ ಬೈಗಳು ಸುರಿಮಳೆ ಯಾದವು.

" ನಾನೊಬ್ಬ ಮೂರ್ಖ. ಇಲ್ಲದಿದ್ದರೆ ನಿನ್ನನ್ನೇಕೆ ಮದುವೆಯಾಗುತ್ತಿದ್ದೆ ?"

ಅಳುತ್ತಳುತ್ತ ತಿಂಮನ ಸಾಧ್ವಿ ಗೊಣಗುಟ್ಟಿದಳು.

" ಅಹುದು. ಆಗ ನನಗೆ ತಿಳಿದಿರಲಿಲ್ಲ"



## ತಿಂಮನ ತಪಸ್ಸು

ತಿಂಮನ ಮಗಳಿಗೆ ಅಷ್ಟ ವರ್ಷವು ದಾಟಿ ಅನಿಷ್ಟ ವಯಸ್ಸು ಬಂದರೂ ಒಬ್ಬ ವರನಾದರೂ ದೊರೆಯಲಿಲ್ಲ. ವರದಕ್ಷಿಣೆ ಕೊಡುವದು—ತೆಗೆದು ಕೊಳ್ಳುವದಲ್ಲ— ಹಿತೈಷಿಗಳ ಕಾರ್ಯಭಾರದಲ್ಲಿ ಅಪರಾಧವಾಗಿ ತಿಂಮನ ಮಗಳ ಮದುವೆ ಜನಕನ ಮದುವೆಯಾಯಿತು. ಪ್ರಯತ್ನಗಳೆಲ್ಲವೂ ವ್ಯರ್ಥವಾಗಿ ಮನಸ್ಸಿಗೆ ಜುಗುಪ್ಸೆಯಾಗಿ ಜಗತ್ತೇ ಬೇಡಾಗಿ, ತಿಂಮು ಹಿಮಾಲಯಕ್ಕೆ ಹೋಗಿ ಘೋರ ತಪಸ್ಸನ್ನು ಆಚರಿಸಿದ. ಕರಾರಿನಂತೆ ದೇವರು ಪ್ರತ್ಯಕ್ಷವಾಗಿ,

"ತಿಂಮಾ, ನಿನ್ನ ಭಕ್ತಿಗೆ ಮೆಚ್ಚಿದೆನು. ನಿನಗೆ ಬೇಕಾದ ವರ ಕೇಳು" ಎಂದ.

ಕಣ್ಣು ತೆಗೆಯುದಲೆ ತಿಂಮ "ಅಯ್ಯೋ ಮಹರಾಯ, ಇದೂ ತಿಳಿಯದೆ ನಿನಗೆ? ವರ ಬೇಕಾಗಿರುವದು ನನಗಲ್ಲ ನನ್ನ ಮಗಳಿಗೆ" ಎಂದು ನಕ್ಕು ಬಿಟ್ಟ.

## ವೀರಪುರುಷ ತೀಮ

ಊಟದಲ್ಲಿ ಬಂದ ಮೆಣಸಿನಕಾಯಿಯನ್ನು ಕಾಣದೆ ಕಡಿದು ತಿಂಮು ಹಾಯಿಗುಟ್ಟಿದ. ಬೇರೆ ಮಾರ್ಗ ಕಾಣದೆ ದೈವದ ಮೇಲೆ ಭಾರ ಹಾಕಿ ಧೈರ್ಯ ಮಾಡಿ "ತುಪ್ಪ" ಎಂದು ಕೇಳಿಬಿಟ್ಟ.

ಕಂಣನ್ನು ಕಿಸಿದು ಸುಟ್ಟುಬಿಡುವಂತೆ ನೋಡಿ "ಏನು?" ಎಂದು ಗರ್ಜಿಸಿದಳು ತಿಂಮನ ಸಾಧ್ವಿ.

"ಉಪ್ಪೂ ಎಂದೆ ಅಷ್ಟೇ" ಎಂದು ಅಂಜಂಜುತ್ತ ತಡವರಿಸಿದ ತಿಂಮು.

"ಏನದು?" ಹುಬ್ಬು ಮೇಲೇರಿಸಿ, ಕಂಣು ಬಿಟ್ಟಾಗ ತಿಂಮನ ಕೈ ಕಾಲು ತಂಣಗಾಗುತ್ತ ಬಂದವು.

"ಏನೂ ಇಲ್ಲ ಕೈಗೆ........ಬಿಸಿ ತಗಲಿತ್ತು. ಅದಕ್ಕೆ ಉಫ್ ಎಂದು ಊದಿದೆ" ಎಂದು ಹೇಳಿ ಧೀರ ಪುರುಷ ತಿಂಮ ಪ್ರಾಣವನ್ನುಳಿಸಿಕೊಂಡ.

## ಹೆಡ್ಡತಿ ಕಾಗದ

ತಿಂಮನಿಗೊಮ್ಮೆ ಹೆಂಡತಿಯಿಂದ ಪತ್ರ ಬಂದಿತು. ಎಲ್ಲರಂತೆ ಹತ್ತು ಬಾರಿ ಓದಿದ. ನೂರು ಬಾರಿ ಓದಿದ. ಸಾವಿರ ಬಾರಿಯೂ ಆಯಿತು, ಪ್ರೇಮದಿಂದಲ್ಲ; ಅದರ ಅರ್ಥವಾಗದಿದ್ದರಿಂದ. ಅದರಲ್ಲಿದ್ದುದು ಇಷ್ಟೆ. "ಪೂಜಾರಿಗೆ, ನೀವು ಕ್ಶಾಮವೇ ? ನಿಮ್ಮ ಶಾರ್ಧ ದಿನಾಲೂ ನೆನೆಸುತ್ತಳೆ ಇಉರಲಿ ಪೆಲಗು. ಇಲಿಗಳು ಬಾಳುತ್ತವೆ. ತಗಿಯ ಬಣತ್ರೆನಕ್ಕೆ ನಾನು ಹೊಗೇಲಿ. ಅಯೋಗ್ಯ ಮಂತ್ರಿಗಳು ಬಂದಾಗ ನೀವು ಮಾಕೆ ಬರಲೀಲ್ಲ ? ನಾಲಿ ನೀರು ಬೋಳುಕಿಟ್ಟ. ರೌಸಿಗೆ ಬಂದಿದೆ. ತಕ್ಷಣ ಹಗ್ಗ ಕಳಿಸರಿ.

ನಿಮ ಹೆಡ್ಡತಿ"

ಇದನ್ನು ಓದಿಸಲು ತಿಂಮ ಹೊರಟ, ಹೆಂಡತಿಯ ಊರಿಗೆ.

ಇಂತಹ ಕಾಗದಗಳನ್ನು ಓದುವ ಅನುಭವವಿಲ್ಲದವರಿಗಾಗಿ ಇದರ ನಿಜರೂಪವನ್ನು ಕೆಳಗೆ ಕೊಡಲಾಗಿದೆ:—

"ಪೂಜ್ಯರಿಗೆ

ನೀವು ಕ್ಷೇಮವೇ ? ನಿಮ್ಮ ಶಾರದ ದಿನಾಲು ನೆನೆಸುತ್ತಾಳೆ. ಈ ಊರಲ್ಲಿ ಪ್ಲೇಗು. ಇಲಿಗಳು ಬೀಳುತ್ತವೆ. ತಂಗಿಯ ಬಾಣಂತಿತನಕ್ಕೆ ನಾನು ಹೋಗಲೆ? ಆರೋಗ್ಯ ಮಂತ್ರಿಗಳು ಬಂದಾಗ ನೀವು ಯಾಕೆ ಬರಲಿಲ್ಲ ? ನಲ್ಲಿ ನೀರು ಬಹಳ ಕಷ್ಟ. ರೋಸಿಗೆ (ಬೇಸರ) ಬಂದಿದೆ. ತಕ್ಷಣ ಹಗ್ಗ ಕಳಿಸಿರಿ.

ನಿಮ್ಮ ಹೆಂಡತಿ"

## ಡಾರ್ವಿನ್ ವಾದ

"ಅಮ್ಮಾ"
"ಏನೋ ತಿಂಮಾ ?"
"ನಾವು ಕೋತಿಯ ವಂಶಜರಂತೆ ನೋಡಮ್ಮಾ."
"ಯಾರೋ ತಿಂಮಾ ಹೇಳಿದರು ?"
"ಶಾಲೆಯಲ್ಲಿ ಮಾಸ್ತರರು ಹೇಳಿದರು. ಇದು ನಿಜವೇನಮ್ಮಾ?"
"ನಿಮ್ಮಪ್ಪನನ್ನೇ ಕೇಳೋ ತಿಂಮಾ"
"ಏಕಮ್ಮಾ ಅಪ್ಪನನ್ನು ಕೇಳಬೇಕು ?"
"ನನ್ನ ತವರುಮನೆಯಲ್ಲಂತೂ ಕೋತಿಗಳು ಇರಲಿಲ್ಲವೋ ತಿಂಮಾ."

## ತಿಂಮನ ಕನಸು

ಬೆಳಿಗ್ಗೆ ಎದ್ದವನೇ ರಾತ್ರಿ ಕಂಡ ಕನಸನ್ನು ತಿಂಮ ಹೆಂಡತಿಗೆ ಹೇಳಲಿಕ್ಕೆ ಸುರುವು ಮಾಡಿದ.


"ಏನು ಸ್ವಾರಸ್ಯವಾದ ಕನಸು ಬಿದ್ದಿತ್ತು ಗೊತ್ತೇ, ನಿನ್ನೆ ರಾತ್ರಿ? ನಿನ್ನ ಕೈ ಮೊಸರಿನಲ್ಲಿ ಬಿದ್ದಿತ್ತು; ನನ್ನ ಕೈ ಕೆಸರಿನಲ್ಲಿ ಬಿದ್ದಿತ್ತು."

"ಹಾಗೇಯೇ ಆಗಬೇಕು ನಿಮಗೆ, ನಿಮ್ಮ ಮೈ ಕೂಡ ಕೆಸರಾಯಿತೋ ಇಲ್ಲವೋ ?"

"ಇಲ್ಲಿ ಕೇಳು ಮುಂದೆ, ಮೊಣಕೈವರೆಗೂ ಕೆಸರಾಗಿತ್ತು ನನ್ನ ಕೈ. ನಿನ್ನ ಕೈಯಲ್ಲ ಮೊಸರಾಗಿತ್ತು"

"ಆ ಮೇಲೆ ?"

"ಆಮೇಲೆನಿದೆ ? ನನ್ನ ಕೈಯನ್ನು ನೀನು ನೆಕ್ಕಿದಿ. ನಿನ್ನ ಕೈಯನ್ನು ನಾನು ನೆಕ್ಕಿದೆ."


ಸಿಂಹ

## ಲೈಫ್ ಇನ್ಶುರ್

ತಿಂಮನ ಮಗನಿಗೆ ಸೈಕಲ್ಲು ಕಲಿಯಬೇಕೆಂದಾಶೆ. ಕಲಿಸಬೇಕೆಂದು ತಿಂಮನಿಗೂ ಆಶೆ. ಒಂದು ದಿನ ಸೈಕಲ್ ಪಾಠ ನಡೆದಿದ್ದಾಗ ತಿಂಮನ ಮಗನ ತಾಯಿ ರೇಗಿ ಬಂದು ತಿಂಮನನ್ನು ದಂಡಿಸಿದಳು. "ಬೇಡ ಎಂದರೆ ಮತ್ತೇ ಅದೇನಾ, ಇದ್ದೊಬ್ಬ ಮಗನನ್ನು ಕೈಕಾಲು ಮುರಿದು ಕೊಂದು ಹಾಕಬೇಕೆಂದು ಮಾಡಿದ್ದೀರೇನು?"

ನಿರಾಶನಾದ ತಿಂಮನ ಮಗ ತಾಯಿಯ ಬಳಿ ಬಂದು ಗೊಣಗುಟ್ಟಿದ.

"ಅಪ್ಪ ಸೈಕಲ್ಲು ಹತ್ತುತ್ತಾರಲ್ಲಮ್ಮ ಮತ್ತೆ?"

"ನಿನ್ನತಲೆ, ಅವರು ಲೈಫ್ ಇನ್ಶೂರ ಮಾಡಿದ್ದಾರೆ."

O O O

## ನೆರಳಿನ ಆಕಾರ

"ಏನ್ರೀ, ಏನ್ರೀ" ಎಂದು ಚೀರುತ್ತ ಒಳಗಿನಿಂದ ಓಡಿ ಬಂದಳು ತಿಂಮನ ಹೆಂಡತಿ.

"ಏನಾಯಿತೇ!" ಕುಳಿತಲ್ಲಿಂದಲೆ ತಿಂಮು ಕೇಳಿದ.

"ಈ ಮನೆಯಲ್ಲಿ ನಾನಂತೂ ಎಂದೆಂದಿಗೂ ಇರಲಾರೆ. ಇಲ್ಲಿ ಒಂದು ಭೂತವಿದೆ" ಅಳುತ್ತ ಕುಳಿತಳು ಹೆದರಿದ ಹೆಂಡತಿ.

"ಎಲ್ಲಿದೆಯೇ ಭೂತ, ಹೀಗೇಕೆ ಅಂಜುತ್ತಿ?"

"ಹಿತ್ತಲಲ್ಲಿ ನನಗೆ ಈಗ ಕಂಡಿತು ದೆವ್ವ. ದೊಡ್ಡ ಕತ್ತೆಯ ಆಕಾರ ವಿದೆ ಅದಕ್ಕೆ."

"ಕತ್ತೆಯ ಆಕಾರವೇ? ಛೆ ಹುಚ್ಚಿ! ಹಿತ್ತಿಲದಲ್ಲಿ ನಿಂತವನು ನಾನು ಕಣೇ."

## ನಮ್ಮ ಮಾತೇ

ತಿಂಮ ತನ್ನ ಪುಸ್ತಕದಲ್ಲಿದ್ದ ಒಂದು ಚಿಕ್ಕ ರಾಷ್ಟ್ರ ಗೀತೆಯನ್ನು ರಾಗ ತೆಗೆದು ಓದುತ್ತಿದ್ದ.

"ಭಾರತಾಂಬೆ ನಮ್ಮ ಮಾತೆ, ಜೀವಗಿಂತ ಮೇಲೂ........"

"ಏನೋ ತಿಂಮಾ ಅದರ ಅರ್ಥ ?" ಅವನಪ್ಪ ಕೇಳಿದ.

"ಇದು ದೇಶಭಕ್ತರ ಹಾಡಪ್ಪ ಇದು."

"ಅಹುದು, ಅದರ ಅರ್ಥವೇನೋ ?"

"ಭಾರತಾಂಬೆ–ಎಲ್ಲೆ ಭಾರತಾಂಬೇ, ನಮ್ಮ ಮಾತೇ–ನಾವು ಆಡುವ ಮಾತೇ (ಭಾಷಣಗಳೇ), ಜೀವಗಿಂತ ಮೇಲೂ–ನಿನ್ನ ಜೀವದಕಿಂತಲೂ ಹೆಚ್ಚು."

○ ○ ○

## ಅನುಪಾನ ಕ್ರಮ

"ತಿಂಮಾ"

"ಏನಪ್ಪಾ ?"

"ದೇಶಸೇವೆಯ ಸೋಗಿನಲ್ಲಿ ಜನತೆಯನ್ನು ವಂಚಿಸುವವರೇ ಬಹಳ ಆದರಲ್ಲವೋ ?"

"ಅಹುದಪ್ಪಾ"

"ಅವರನ್ನು ಏನುಮಾಡಬೇಕೋ ?"

"ಮೂರೇ ಬಾರಿ ನೀರಿನಲ್ಲಿ ಮುಳುಗಿಸಿ ಎರಡುಬಾರಿ ಹೊರಗೆ ತೆಗೆಯಬೇಕಪ್ಪಾ"

# ವೀರ ರಮಣಿಯರು

"ಅಪ್ಪಾ"

"ಏನೋ ತಿಂಮಾ?"

"ನಮ್ಮ ಸ್ತ್ರೀಯರು ಒಳ್ಳೇ ಸಾಹಸಿಗಳಾಗಬೇಕಂತಪ್ಪಾ"

"ಅಹುದೋ ತಿಂಮಾ"

"ಯುದ್ಧ ಮಾಡಲು ಸಹ ಸಿದ್ಧರಿರಬೇಕಂತಪ್ಪಾ"

"ಅಹದೋ ತಿಂಮಾ"


"ಈಗಾಗಲೇ ತರಬೇತು ಹೊಂದುತ್ತಿದ್ದಾರಪ್ಪಾ" ನಮ್ಮ ಮುನಸಿ ಪಾಲ್ಟಿಯ ಕೃಪೆಯಿಂದ"

"ಎಲ್ಲಿಯೋ ತಿಂಮಾ?"

"ನೀರಿಗೆ ಹೋದಾಗ ನಲ್ಲಿಗಳ ಮುಂದೆ"



ಎಲ್ಲರಿಗೂ ಆರೇ ಔಂನ್ಸು ಅಕ್ಕಿ ಕೊಡುತ್ತಾರೆ.
ಅಂದರೆ, ನಿಮ್ಮ ಔಂನ್ಸೇ....ದೊಡ್ಡದೇನು ?



## ಅಮೇರಿಕೆಯ ಗುಟ್ಟು

" ತಿಂಮಾ "

" ಏನಪ್ಪಾ ?"

" ಏನೋ ಅದು ಕೈಯಲ್ಲಿ ?"

" ಆಟಂ ಬಾಂಬಪ್ಪಾ "

" ಅದನ್ನೇಕೋ ತಂದಿ ?"

" ದೀಪಾವಳಿಯಲ್ಲಿ ಬಾಣ ಬಿಡಬೇಕಲ್ಲಪ್ಪಾ "

" ಎಲ್ಲಿ ದೊರೆಯಿತೋ ಅದು "

" ಎಲ್ಲ ಬಾಣ ಬಿರುಸಿನ ಅಂಗಡಿಗಳಲ್ಲೂ ಇವೆಯಪ್ಪಾ ಒಂದಾಣೆಗೊಂದು "

" ಅಲ್ಲವೋ ತಿಂಮಾ............"

" ಅಹುದಪ್ಪಾ, ಆದರೆ ಅಮೇರಿಕೆಯಲ್ಲಿ ಮಾತ್ರ ಇದು ಗುಟ್ಟಾಗಿದೆ ಅಷ್ಟೇ "

## ಧೂಮಕೇತು

"ಅಪ್ಪಾ"

"ಏನೋ ತಿಂಮಾ ?"

"ಧೂಮಕೇತು ಬಂದಿದೆಯಂತಪ್ಪಾ"

"ಅಹುದೋ ತಿಂಮಾ"

"ಅದಕ್ಕೆ ನಾಲ್ಕು ಇಂಚುದ್ದದ ಬಾಲವಿದೆಯಂತಪ್ಪಾ"

"ಅಹುದೋ ತಿಂಮಾ"

"ಅಪ್ಪಾ"

"ಏನೋ ತಿಂಮಾ ?"

"ಎರಡಾಣೆ ಕೊಡಪ್ಪಾ"

"ಏತಕ್ಕೋ ತಿಂಮಾ ?"

"ತಿಕೀಟಿಗಪ್ಪಾ, ಧೂಮಕೇತು ನೋಡಿ ಬರ್ತೀನಿ"

"ಅದಕ್ಕೇಕೋ ತಿಕೀಟು ?"

"ಅತಿ ಪ್ರಸರಣೆ ತಡೆಯಲು ಸರಕಾರ ಆದಕ್ಕೂ ತಿಕೀಟು ಮಾಡಿದೆಯಂತಪ್ಪಾ"

## ಏಕೀಕರಣ ?

" ಅಪ್ಪಾ "

" ಏನೋ ತಿಂಮಾ ? "

" ಏಕೀಕರಣ ಅಂದರೇನಪ್ಪಾ ? "

" ಒಂದೇ ಮಾತಿನವರನ್ನೆಲ್ಲ ಒಂದೇ ಪ್ರಾಂತದಲ್ಲಿ ತರುವದು ಎಂದರ್ಥ "

" ಅಪ್ಪಾ "

" ಏನೋ ತಿಂಮಾ ? "

" ಒಬ್ಬರಿಬ್ಬರ ಸಲುವಾಗಿ ಒಂದು ಪ್ರತ್ಯೇಕ ಪ್ರಾಂತವೇಕಪ್ಪಾ ? "

" ಅದೇಕೋ ತಿಂಮಾ ? "

" ಮತ್ತೆ ಎಷ್ಟು ಜನರು ಸಿಕ್ಕಬಹುದಪ್ಪಾ ಒಂದೇ ಮಾತಿನವರು ? ನಿನ್ನೆ ಆಡಿದ ಮಾತು ಇಂದಿಲ್ಲವಲ್ಲ ಈ ಜನರಲ್ಲಿ ? ಅಂತಹ ಪ್ರಾಮಾಣಿಕರು ಎಷ್ಟಿದ್ದಾರು ಮಹಾ ! "



## ಇಂದಿನ ಗಣಪತಿ

" ತಿಂಮಾ "

" ಏನಪ್ಪಾ ? "

" ಈ ಗಣಪತಿಯನ್ನು ನೀನು ಮಾಡಿದೇನೋ ? "

" ಅಹುದಪ್ಪಾ. ಏಕೆ ಚೆನ್ನಾಗಿಲ್ಲವೇ ? "

" ಗಣಪತಿಗೆ ಹೊಟ್ಟೆಯೇ ಇಲ್ಲವಲ್ಲೋ ? "

" ಸರಕಾರ ಕೊಡುವ ಆರು ಔನ್ಸು ಅಕ್ಕಿಗೆ ಸಾಲದೇನಪ್ಪಾ ಇಷ್ಟು ಹೊಟ್ಟೆ ? "

## ಪ್ರಶ್ನೋತ್ತರ

" ಅಪ್ಪಾ "

" ಏನೋ ತಿಂಮಾ ? "

" ನನಗೆ ಎಷ್ಟಪ್ಪಾ ವಯಸ್ಸು ಈಗ ? "

" ತಿಳಿಯದು "

" ನಿನ್ನ ವಯಸ್ಸು ? "

" ವಿಚಾರಿಸಿ ಹೇಳಬೇಕು. "

" ಯಾವ ಊರಲ್ಲಿ ಅಪ್ಪಾ ನಾನು ಹುಟ್ಟಿದ್ದು ? "

" ಈ ಪ್ರಶ್ನೆಯನ್ನು ಪ್ರತ್ಯೇಕವಾಗಿ ಕೇಳಬೇಕು "

" ಯಾವ ಇಸವಿಯಲ್ಲಿ ನಾನು ಹುಟ್ಟಿದೆ ? "

" ಉತ್ತರ ಕೊಡಲು ಸಮಯಬೇಕು. "

" ಅಪ್ಪಾ "

" ಏನೋ ತಿಂಮಾ ? "

" ಇಷ್ಟು ಚೆನ್ನಾಗಿ ಉತ್ತರಕೊಡಲು ಬಂದರೂ ನೀನು ಏಕಪ್ಪಾ ಮಂತ್ರಿ ಆಗಲಿಲ್ಲ ? "

## ಸ್ವಚ್ಛತೆ

ಸ್ವಚ್ಛತೆಯ ಬಗ್ಗೆ ಉಪಾಧ್ಯಾಯರು ಉದ್ದವಾದ ಉಪನ್ಯಾಸವನ್ನು ಮಾಡಿದರು.

"ಊರನ್ನು ಶುಚಿಯಾಗಿಟ್ಟುಕೊಳ್ಳತಕ್ಕದ್ದು. ಎಲ್ಲರೂ ಮನೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳಬೇಕು. ಶುಭ್ರತೆಯ ಸಲುವಾಗಿ ಹಣವನ್ನು ನೀರಿನಂತೆ ವೆಚ್ಚ ಮಾಡಿಯಾದರೂ ಪ್ರತಿಯೊಬ್ಬನೂ ಮನೆಯನ್ನು ಸ್ವಚ್ಛವಾಗಿಡತಕ್ಕದ್ದು."

ಕಡೆ ಬೆಂಚಿಗೆ ಕುಳಿತಿದ್ದ ತಿಂಮ ಎದ್ದು ನಿಂತು ಪ್ರಶ್ನೆ ಕೇಳಿದ.

"ಮಂತ್ರಿಗಳು ಮನೆ ಮನೆಗೂ ಬರ್ತಾರೇನು ಸಾರ್?"

o o o

## ಗೌತಮಬುದ್ಧ

"ಅಪ್ಪಾ"

"ಏನೋ ತಿಂಮ?"

"ನಿನ್ನೆ ರಾತ್ರಿ ಬುದ್ಧನ ನಾಟಕ ನೋಡಿದೇನಪ್ಪಾ?"

"ಏಕೋ ತಿಂಮಾ?"

"ಬುದ್ಧ ಎಲ್ಲವನ್ನೂ ತ್ಯಾಗ ಮಾಡಿ ಬಿಟ್ಟನಪ್ಪಾ"

"ಅಹುದೋ ತಿಂಮಾ"

"ಹೆಂಡತಿ, ಮಕ್ಕಳು, ರಾಜ್ಯವನ್ನು ಸಹ ತ್ಯಾಗಮಾಡಿಬಿಟ್ಟನಪ್ಪಾ"

"ಅಹುದೋ ತಿಂಮಾ"

"ಆದರೆ ಮೆಡಲ್ ಕೊಡ್ತೇವೆ ಎಂದ ಕೂಡಲೆ ಓಡಿ ಬಂದನಪ್ಪಾ ಅವನು"

## ನಾಟಕದ ಉಪದೇಶ

ಸುಪ್ರಸಿದ್ಧ ನಾಟಕ ಕಂಪನಿಯು ಉತ್ತಮ ನಾಟಕವನ್ನು ಹಾಕಿತು. ಮರಣೋನ್ಮುಖನಾದ ರಾಜನು ಆವೇಶಪೂರಿತವಾದ ಭಾಷಣವನ್ನು ಮಾಡಿ ಪ್ರೇಕ್ಷಕರನ್ನು ದಂಗುಗೊಳಿಸಿದನು. ‘‘ಪುತ್ರಹೀನನಾದ ನಾನು ಈ ಕಿರೀಟವನ್ನು ಯಾರಿಗೆ ಕೊಡಲಿ ?’’ ಎಂದು ನುಡಿದು ರಾಜನು ಕಂಬನಿ ಸುರಿಸಿದನು.

ನಾಲ್ಕಾಣೆ ಗುಂಪಿನಿಂದ ತಿಂಮನ ದನಿ ಹಿಂದೆಯೇ ಬಂದಿತು. ‘‘ಸ್ವಸಮ್ಮತಿಯಿಂದ ಸರದಾರ ಪಟೇಲರಿಗೆ ಕೊಟ್ಟುಬಿಡು.”

## ಎಚ್ಚರವಾಯಿತು

‘‘ಅಪ್ಪಾ’’

‘‘ಏನೋ ತಿಂಮಾ ?”

‘‘ನಿನ್ನೆ ರಾತ್ರಿ ಒಳ್ಳೇ ಕನಸು ಕಂಡೆನಪ್ಪಾ”

‘‘ಏನೋ ತಿಂಮಾ ಅದು ?’’

‘‘ಕಾಂಗ್ರೆಸ್ಸು ಸರಕಾರ ನನಗೆ ೧೫ ಎಕರೆ ಭೂಮಿ ಕೊಟ್ಟಿತು.’’

‘‘ಆ ಮೇಲೆ ಏನಾಯಿತು ?”

‘‘ಸಮಾಜವಾದಿ ಸರಕಾರ ಇನ್ನೊಂದು ೧೫ ಎಕರೆ ಕೊಟ್ಟಿತು.’’

‘‘ಆ ಮೇಲೆ ?”

‘‘ಆರ್. ಎಸ್. ಎಸ್. ಸರಕಾರ ಮತ್ತು ೧೫ ಎಕರೆ ಕೊಟ್ಟಿತು.”

‘‘ಆ ಮೇಲೆ ?”

‘‘ಕಮ್ಯೂನಿಸ್ಟ ಸರಕಾರ ಈ ೪೫ ಎಕರೆ ಅಲ್ಲದಲೆ ನೀನು ಕೊಟ್ಟಿದ್ದನ್ನು ಕಸಿದುಕೊಂಡು ಬಿಟ್ಟಿತು.”

‘‘ಆ ಮೇಲೆ ?”

‘‘ಎಚ್ಚರವಾಯಿತು.”

## ಮುಖ್ಯ ಪಾರ್ಟು

ತಿಂಮನ ಶಾಲೆಯ ಬೆಳ್ಳಿ ಹಬ್ಬ. ಹಳೆ ಹೊಸ ವಿದ್ಯಾರ್ಥಿಗಳು ಸೇರಿ ನಾಟಕ ಹೂಡಿದರು. ಯಾವುದಾದರೊಂದು ಪಾತ್ರವನ್ನು ವಹಿಸೆಂದು ತಿಂಮನನ್ನು ಕಾರ್ಯದರ್ಶಿಗಳು ಕಾಡಿದರು.

"ನನಗೆ ಮುಖ್ಯ ಪಾರ್ಟು ಕೊಡುವದಾದರೆ ಬರುತ್ತೇನೆ" ಎಂದು ಕರಾರು ಮಾಡಿದ ತಿಂಮ.

"ರಾಜನ ಪಾರ್ಟು ಮಾಡುವಿಯಾ ?"

"ಅದೇಕೆ ಸ್ವಾಮಿ? ವಿಲಿನೀಕರಣವಾದ ಮೇಲೆ ರಾಜನ ಪಾರ್ಟು ಮಾಡುವದಕ್ಕಿಂತಲೂ ಸೇವಕನ ಪಾರ್ಟೇ ಮೇಲು"

"ಹಾಗಾದರೆ ಗವರ್ನರರ ಪಾರ್ಟು ಮಾಡು"

"ಇನ್ನೂ ನಾಲ್ಕು ಕಾಲ ಒಳ್ಳೆಯದು ಕೆಟ್ಟದು ಮಾಡಬೇಕೆಂದು ಆಶೆಯಿದೆ ಸ್ವಾಮಿ ನನಗೆ. ವಿಘ್ನೇಶ್ವರನನ್ನು ಮಾಡಿ ಮಾಡದಲ್ಲಿ ಕೂಡಿಸಿದಂತೆ ಈಗಲೆ ಕೂಡಿಸಿ ಬಿಡಬೇಡಿ"

"ಮತ್ತೇನು, ಮಂತ್ರಿ ಪಾರ್ಟಿಗಾದರೆ ಸಂತೋಷವೇ ?"

"ಓಹೋ, ಅಗತ್ಯ. ಆದರೆ ಅದಕ್ಕೂ ಹೆಚ್ಚು ಮುಖ್ಯ ಪಾರ್ಟು ಕೊಟ್ಟಿದ್ದರೆ ಚೆನ್ನಾಗಿತ್ತು"

"ಅದಾವುದೊ, ಮಂತ್ರಿಗಿಂತಲೂ ಮುಖ್ಯವಾದದ್ದು ?"

"ಅವರಳಿಯನ ಪಾರ್ಟು" ಎಂದ ತಿಂಮ.

## ಶಾಸನ ಸಭೆ

ನಾಡಹಬ್ಬದ ಸಭೆಯೊಂದರಲ್ಲಿ ಕಡೆಗೆ ಕುಳಿತವರ ಗಲಾಟೆ ಹೆಚ್ಚಿತು. ಅಧ್ಯಕ್ಷರು ಹುಬ್ಬು ಗಂಟಿಕ್ಕಿ 'ಗಲಾಟೆ ಮಾಡುವವರು ದಯವಿಟ್ಟು ಹೊರಗೆ ಹೋಗಬೇಕು' ಎಂದು ಗರ್ಜಿಸಿದರು.

"ನಿಮ್ಮ ಭಾಷೆ ನಮಗೆ ತಿಳಿಯುವದಿಲ್ಲ" ಎಂದು ಹಲವರು ಕೂಗಾಡಿದರು. ತಿಂಮ ಮುಂದೆ ಬಂದು ಒಂದು ಪ್ರಶ್ನೆ ಹಾಕಿದ.

"ಭಾಷೆ ತಿಳಿಯದವರು ಈ ಸಭೆಗೆ ಬಂದದ್ದೇಕೆ ಸ್ವಾಮಿ, ಇದೇನು ಶಾಸನ ಸಭೆಯೇ ?"

## ಪರಿಹಾರ

ಪಕ್ಕದ ಮನೆಯ ವೃದ್ಧ ಗೃಹಸ್ಥರೊಬ್ಬರು ತಿಂಮನನ್ನು ಕಡಕ್ಕಾಗಿ ಕಾಡಿದರು. ತಿಂಮ ಅವರ ಹಿತಚಿಂತನೆ ನಡೆಸಿದ.

"ಈಗ ನೌಕರಿಯಲ್ಲಿ ಇಲ್ಲವೇ ನೀವು ?"

"ಇಲ್ಲವಪ್ಪಾ, ನಿವೃತ್ತನಾದೆ."

"ಎಷ್ಟು ವರ್ಷಗಳು ಸ್ವಾಮಿ, ತಾವು ದುಡಿದದ್ದು"

"ಮೂವತ್ತು ವರ್ಷಗಳು"

"ಏನಾದರೂ ಚಿನ್ನ, ಮನೆ, ಭೂಮಿ ಮಾಡಲಿಲ್ಲವೆ ಸಂಪಾದನೆಯ ಕಾಲದಲ್ಲಿ ?"

"ಚೆನ್ನಾಯಿತು. ನಮಗೆಲ್ಲಿಯ ಭೂಮಿ— ರುದ್ರಭೂಮಿಯೇ ! ಒಂದಂಗುಳವೂ ಇಲ್ಲ"

"ಕತ್ತೆ ಹಾಗೆ ದುಡಿದರೆ ಆಯಿತೇನು ಸ್ವಾಮಿ ? ದೂರದೃಷ್ಟಿ ಬೇಕು ಮನುಷ್ಯನಿಗೆ. ಮೂವತ್ತು ವರ್ಷ ದುಡಿಯುವ ಬದಲು ಮೂರೇ ತಿಂಗಳು ಜೈಲಿಗೆ ಹೋಗಿದ್ದರೆ ೧೫ ಎಕರೆಯ ಮಾಲಕರಾಗುತ್ತಿದ್ದಿಲ್ಲವೇ ?"

## ತ್ರೈರಾಸಿಕ

ಚುನಾವಣೆಯಲ್ಲಿ ತಿಂಮ ಬೇರೆ ಪೆಟ್ಟಿಗೆಯಲ್ಲಿ ಮತವನ್ನು ಹಾಕಿದಂದಿನಿಂದ ಬೋರ್ಡಿನ ಅಧ್ಯಕ್ಷರು ತಿಂಮನ ಮೇಲೆ ಗುರ್ರೆನ್ನುತ್ತಿದ್ದರು. ಆ ಗೊಂದಲದಲ್ಲಿ ಕೈ ಬಿಟ್ಟ ಹಣವು ಭರ್ತಿಯಾದ ಮೇಲೆ ಅಧ್ಯಕ್ಷರಿಗೆ ಸವುಡಾಯಿತು. ತಿಂಮನ ಶಾಲೆಗೆ ಬೆನ್ನು ಹತ್ತಿ ಅಧ್ಯಕ್ಷರು ತಿಂಮನ ಪರೀಕ್ಷೆಯನ್ನೇ ಕೈಕೊಂಡರು.

"ತ್ರೈರಾಸಿಕ ಬರುತ್ತೇನು ಹುಡುಗರಿಗೆ? "

"ಕೊಂಚ ಮಟ್ಟಿಗೆ ಕಲಿಸಿದ್ದೇನೆ ಸ್ವಾಮಿ."

"ಪ್ರಶ್ನೆ ಕೇಳಿ, ನೋಡೋಣ."

"ಒಂದು ಮತಕ್ಕೆ ಐದು ರೂಪಾಯಿ, ಆರಾಣೆ ಜಟ್ಕಾ ಬಾಡಿಗೆ, ಮೇಲೊಂದು ಕಪ್ಪು ಚಾ, ಆದರೆ ನಾಲ್ಕುನೂರು ಮತಗಳ ಬೆಲೆ ಎಷ್ಟು? "

ಅಂದೇ ಅಧ್ಯಕ್ಷರ ಕಡೆ ಸವಾರಿ.

## 'ಜೈ' ರೋಗ

ಚಿಕ್ಕ ಹಳ್ಳಿಯೊಂದರಲ್ಲಿ ಗಟ್ಟಿಯಾಗಿ ಕೂಗುವವರ ಪರಿಷತ್ತು ಜರುಗಿತು. ಊರಲ್ಲಿ ಸಾಕಷ್ಟು ಎಳೆಯುವ ಎತ್ತುಗಳಿಲ್ಲದ್ದರಿಂದ ಅಧ್ಯಕ್ಷರ ರಥಕ್ಕೆ ಹಿಂಡುವ ಎಮ್ಮೆಗಳನ್ನೂ ಕಟ್ಟಿದರು. ಸ್ವಾಗತದಿಂದ ಸಮಾಪ್ತಿಯ ವರೆಗೂ ಕಾರ್ಯಕ್ರಮವು ಜರುಗಿತು. ಸಭೆಯ ವಿಸರ್ಜನೆಯ ಮುನ್ನ ಅಧ್ಯಕ್ಷರು ಸಿಂಹಗರ್ಜನೆ ಮಾಡಿದರು.

"ಬೋಲೋ ಭಾರತ ಮಾತಾಕಿ ಜೈ"

"ಬೋಲೋ ಪಂಡಿತ ನೆಹ್ರೂಕಿ ಜೈ"

ಪರಿಷತ್ತನ್ನು ಏರ್ಪಡಿಸಿದ ಊರ ಗೌಡರು ಬಿರಿ ಬಿರಿ ನೋಡಿದರು.

"ಬೋಲೋ ಊರ ಗೌಡಕು ಜೈ" ಎಂದರೊಬ್ಬರು.

"ಬೋಲೋ ಕುಲಕರ್ಣಿೀಕು ಜೈ" ಹಿಂದೇ ಬಂದಿತು.

ಕೈ ಮುಗಿದು ಕುಣಿಯುತ್ತ ತಿಂಮ ಸುರು ಮಾಡಿದ.

"ಗಳ ಚಾಪಿ ಕೊಟ್ಟ ಮಾದ್ಯಾರ ದುರಗಪ್ಪಕು ಜೈ; ಗ್ಯಾಸ ಲೈಟು ಬಾಡಿಗಿ ಕೊಟ್ಟ ಅಲ್ಲೀಸಾಬಕು ಜೈ; ತಕರಾರು ಮಾಡಿ ಜಮಖಾನ ಕೊಟ್ಟ ತಮಣ ಭಟ್ಟಕು ಜೈ; ತೋರಣಕ್ಕೆ ಮಾವಿನ ಸೊಪ್ಪು ಕೊಟ್ಟ ಮರೆಣ್ಣಾಕು ಜೈ; ಹಂದರದ ಮುಂದೆ ಕಸಗೂಡಿಸಿದ ಮಾದರ ಮಾರಿಗಕು ಜೈ"

ಎಪ್ಪತ್ತುಮೂರು

## ನನ್ನ ಕಸುಬು

ಕೈಯಲ್ಲಿ ಕಾಲಾಣೆ ಹಿಡಿದು ಆಡುತ್ತಿದ್ದ ಮಗುವೊಂದು ಆ ನಾಣ್ಯವನ್ನು ಬಾಯಿಗೆ ಹಾಕಿ ಇದ್ದಕ್ಕಿದ್ದಂತೆ ಕಣ್ಕಂಣು ಬಿಡಹತ್ತಿತು. ಮಗುವಿನ ತಾಯಿಯು ಅಯ್ಯೋ ಅಯ್ಯೋ ಎಂದು ಚೀರುತ್ತ ಕಂಗಾಲಾಗಿ ರಸ್ತೆಗೆ ಓಡಿದಳು. ಆಕಸ್ಮಾತ್ತಾಗಿ ಎದುರು ಬಂದ ತಿಂಮ ಏನೆಂದು ವಿಚಾರಿಸಿ ಕೂಡಲೆ ಮನೆಯಲ್ಲಿ ಬಂದು ಉಸಿರು ಸಿಕ್ಕ ಮಗುವನ್ನು ನೋಡಿದ.

" ಪರವಾಯಿಲ್ಲ ಬಿಡ್ರಿ, ತೆಗೆಯುತ್ತೇನೆ" ಎಂದವನೇ ಮಗುವನ್ನು ಕಾಲು ಮೇಲೆ ಮಾಡಿ ಹಿಡಿದೆತ್ತಿ ಚೆನ್ನಾಗಿ ಅಲುಗಾಡಿಸಹತ್ತಿದನು. ನಾಣ್ಯವು ಝಣಂಣೆಂದು ನೆಲಕ್ಕೆ ಉರುಳಿ ಹಿಂದೆಯೇ ತಿಂಮನ ಕಿಸೆ ಸೇರಿತು.

" ಬಹಳ ಉಪಕಾರವಾಯಿತು, ಡಾಕ್ಟರೇ " ಎಂದು ಆ ಮಗುವಿನ ತಾಯಿ ಹೇಳಿದಾಗ ತಿಂಮನ ಉತ್ತರಿಸಿದ.

" ನಾನು ಡ್ಯಾಕ್ಟರನಲ್ಲಮ್ಮಾ, ನಾನೊಬ್ಬ ಉತ್ತಮ ದೇಶಭಕ್ತ. ಹಣವು ಎಲ್ಲಿ ಅಡಗಿಕೊಂಡರೂ ನಾನು ಬಿಡುವಂತಿಲ್ಲ. "

## ಪಟಾಕ್ಷಿ

ದೀಪಾವಳಿ ಹಬ್ಬವು ಸಮೀಪಿಸಿದಂತೆಲ್ಲ ತಿಂಮನಿಗೆ ಮಗನ ಕಾಟವು ಹೆಚ್ಚಾಯಿತು. ಪಟಾಕ್ಷಿ ಕೊಡೆಂದು ಹಟ ಹಿಡಿದು ಅಳುತ್ತ ಕುಳಿತ ತಿಂಮನ ಮಗ. ತಿಂಮನ ಉಪಾಯಗಳೆಲ್ಲವೂ ವ್ಯರ್ಥವಾದವು. ಕಡೆಗೊಂದು ಬಾರಿ ಬುದ್ಧಿ ಹೇಳಿ ನೋಡುವಾ ಎಂದು ನೆನೆಸಿ ತಿಂಮ ಸುರು ಮಾಡಿದ.

" ಬರೀ ಮದ್ದು ಗುಂಡುಗಳಿಗೆ ಹಣ ದುರ್ವ್ಯಯ ಮಾಡಕೂಡದು ಮಗು. "

" ಮಾಡಿದರೆ ಏನಾಗುತ್ತೆ " ಎಂದ ಮಗ.

" ಹೈದರಾಬಾದ ನಿಜಾಮನನ್ನು ಕೇಳು. "

# ಅವಳೇ ಹೇಳಿದ್ದಳು


ತಿಂಮನ ಹೆಂಡತಿ ಸತ್ತಳು. ಮಕ್ಕಳು ಮರಿಗಳು ಗೋಳೋ ಎಂದು ಅತ್ತರು. ತಿಂಮನೂ ಅತ್ತು ಅತ್ತು ಮೆತ್ತಗಾದ. ಅತ್ತವರ ಕಣ್ಣಿನ ಹಸಿ ಆರುವ ಮುನ್ನೆಯೇ ತಿಂಮ ಎರಡನೆಯ ಲಗ್ನಕ್ಕೆ ಸಿದ್ಧನಾದ. ಇದು ಸರಿಯಲ್ಲವೆಂದು ಅವರಿವರು ಆಡಿಕೊಂಡರು. ಕಡೆಗೆ ಊರ ಮುಖಂಡರು ತಿಂಮನನ್ನು ಅಣಕಿ ಬಿಟ್ಟರು.

“ಇದು ಅನ್ಯಾಯವಪ್ಪ ತಿಂಮ, ನೀನು ಮದುವೆಯಾಗುವದು ನಮಗೆ ಮನಸ್ಸಿಲ್ಲ” ಎಂದರು.

“ನನಗೂ ಮನಸ್ಸಿಲ್ಲ ಸ್ವಾಮಿ; ಆದರೆ ಏನು ಮಾಡಬೇಕು? ಸಾಯುವ ಮುನ್ನೆಯೆ ಅವಳೇ ಹೇಳಿದ್ದಳು ಮದುವೆಯಾಗೆಂದು” ಎಂದು ತಿಂಮ ಉತ್ತರ ಕೊಟ್ಟ.

“ನಿನ್ನ ತಲೆ ಅವಳೇಕೆ ಹೇಳುತ್ತಾಳೆ?” ಎಂದು ಸಿಟ್ಟಿಗೆದ್ದರು ಊರ ಮುಖಂಡರು.

“ಈ ಸಲ ಚುನಾವಣೆಗೆ ನಿಲ್ಲೆಂದು ನಿಮಗೆ ಗಾಂಧೀಜಿಯವರು ಹೇಳಿದ್ದರೆಂದು ನೀವು ಹೇಳಲಿಲ್ಲವೇ ಮೊನ್ನೆ?” ಎಂದು ತಿಂಮ ಕೇಳಿದ.



ನಿಮ್ಮ ಎರಡೂ ಮತಗಳನ್ನು ನನಗೇ ಕೊಡಿ.
ನಾನೂ ನಿಮ್ಮ ಪಾರ್ಟಿಯವನೇ

## ವ ವಹಾರಜ್ಞಾನಿ ತಿಂಮ

ಶಾಲೆಯಿಂದ ಬರುವಾಗ ತಿಂಮನ ಮಗನು ಕಲ್ಲೆಡವಿ ಬಿದ್ದು ಕಾಲೆಲ್ಲ ರಕ್ತ ಮಾಡಿಕೊಂಡು, ಸ್ಲೇಟು ಒಡೆದುಕೊಂಡು ಅಳುತ್ತ ಮನೆಗೆ ಬಂದ. ಒಡೆದ ಸ್ಲೇಟವನ್ನು ಕಂಡ ಕೂಡಲೇ ತಿಂಮ ಕಿಡಿಕಿಡಿಯಾಗಿ ಮಗನ ಮೇಲೆ ಮಂತ್ರಪುಷ್ಪದ ಸುರಿಮಳೆ ಮಾಡಿದ.

" ಹಾಳು ಮೋರೆಯವನೇ, ಐದಾಣೆ ಸ್ಲೇಟನ್ನು ಮುರಿದು ಬಿಟ್ಟೆ " ಎಂದು ಹೊಡೆಯಲು ಹೊರಟ. ಕಾಲಿನ ರಕ್ತವನ್ನು ನೋಡಿ ತಿಂಮನ ಹೆಂಡತಿ ಗಾಬರಿಯಿಂದ ಬಂದು ತಿಂಮನನ್ನೇ ಗದರಿಸಿದಳು. " ಸುಮ್ಮನೆ ಇರಿ ಸಾಕು. ಕೂಸಿನ ಕಾಲಿಗೆ ಗಾಯವಾಗಿದೆ, ಸ್ಲೇಟು ಒಡೆದರೆ ಏನಾಯಿ ತಂತೆ. "

" ಕಾಲಿಗೆ ಗಾಯವಾದರೆ ಏನಾಯಿತೇ ಹುಚ್ಚಿ ! ದಯಾಳು ಸರಕಾರದ ಧರ್ಮಾಸ್ಪತ್ರೆ ಇದೆ, ಇಂದಿಲ್ಲ ನಾಳೆ ವಾಸಿ ಮಾಡುತ್ತಾರೆ. ಸ್ಕೂಲ ಫೀ ಸಹ ಹೆಚ್ಚಿಸುವ ಉದಾರ ಸರಕಾರವು ನಿನ್ನ ಮಗನಿಗೆ ಸ್ಲೇಟು ಕೊಡುತ್ತೆಯೇ ? " ಎಂದು ಮುರಿದ ಸ್ಲೇಟನ್ನು ನೋಡಿ ಮರುಗಿದ ತಿಂಮ.

## ತಿಂಮನ ಸ್ಮಾರಕ

ಬೆಳಗಿನ ಜಾವದಲ್ಲಿಯೇ ಎದ್ದು ತಿಂಮ ಮನೆ ಮನೆಗೂ ಹೊರಟಿದ್ದ. ರಸ್ತೆಯಲ್ಲಿ ಕಂಡ ಹಿರಿಯರೊಬ್ಬರು ಕೇಳಿದರು :

"ಏನೋ ತಿಂಮಾ, ಬಹು ದೊಡ್ಡ ಕೆಲಸದಲ್ಲಿ ಕೈಹಾಕಿದಂತೆ ಇದೆಯಲ್ಲೋ ?"

"ಅಹುದು ಸ್ವಾಮಿ, ಸಾರ್ವಜನಿಕ ಹಿತಕ್ಕಾಗಿ ಹೊರಟಿದ್ದೇನೆ. ನನ್ನ ಸ್ಮಾರಕದ ಬಗ್ಗೆ ಪ್ರಚಾರ ಕಾರ್ಯ ನಡೆಸುತ್ತಿದ್ದೇನೆ"

"ಬದುಕಿರುವಾಗಲೇ ಏಕೋ ? ನಿನ್ನ ಸ್ಮಾರಕವನ್ನು ನೀನೇ ಮಾಡಿ ಕೊಳ್ಳಬೇಕೇನು ?"

"ನನ್ನ ನಂತರ ಈ ಕಾರ್ಯದ ನೆವದಿಂದ ಯಾರಾದರೂ ಹಣವನ್ನು ಎತ್ತಿ ಹಾಕಿದರೆ ಏನು ಮಾಡಲಿ ? ಅದಕ್ಕಾಗಿ ಪ್ರತಿಯೊಬ್ಬರಿಗೂ ಹೇಳುತ್ತ ಹೊರಟಿದ್ದೇನೆ– ಯಾರಿಗೂ ಹಣ ಕೊಡಬೇಡಿ ಎಂದು."

## ಮುಂದುವರಿದ ವೀರ

ಬಹು ದಿನಗಳ ನಂತರ ತಿಂಮನು ಹಳೆಯ ಗೆಳೆಯನೊಬ್ಬನನ್ನು ಕಂಡ. ಅವನ ಮುಖದಲ್ಲಿದ್ದ ಗಾಯಗಳ ಗುರುತುಗಳನ್ನು ಕಂಡು ತಿಂಮನಿಗೆ ಆಶ್ಚರ್ಯವಾಯಿತು.

"ಇದೇನೋ ಅನ್ಯಾಯ, ಮುಖದ ತುಂಬಲೂ ಗಾಯಗಳು !"

"ಯುದ್ಧಕ್ಕೆ ಹೋಗಿದ್ದೆನೋ ತಿಂಮಾ ನಾನು" ಎಂದು ಹೆಮ್ಮೆಯಿಂದ ಹೇಳಿಕೊಂಡ ಅವನ ಗೆಳೆಯ.

"ಓಹೋ ತಿಳಿಯಿತು ಬಿಡು" ಎಂದ ತಿಂಮ.

"ಏನೋ ತಿಳಿಯಿತು ?"

"ಯುದ್ಧರಂಗದಿಂದ ಓಡಿ ಹೋಗುವಾಗ ಹಿಂದೇಕೋ ತಿರುಗಿ ನೋಡುತ್ತಿದ್ದಿ !"

## ಕೊರತೆಗೆ ಮದ್ದು

ಬಾಗಿಲಿಗೆ ಭಿಕ್ಷುಕನು ಬಂದು ನಿಂತಾಗಲೇ ತಿಂಮನಿಗೆ ಸಿಟ್ಟು ಏರ ಹತ್ತಿತು. ಕೈಯಲ್ಲೊಂದು ಪರಟೆ ಹಿಡಿದು ದೀನಮುಖದಿಂದ ಭಿಕ್ಷುಕನು ಕೂಗಹತ್ತಿದ.

"ಅನ್ನ ಸ್ವಾಮೀ, ಅನ್ನಕೊಡಿ....ಒಂದೇ ತುತ್ತು ಅನ್ನ ಕೊಡಿ.... ಅನ್ನ....ಅನ್ನ ಸ್ವಾಮೀ"

ಹೊಟ್ಟೆಯಮೇಲೆ ಕೈಯಾಡಿಕೊಳ್ಳುತ್ತ ಕುಳಿತಲ್ಲಿಂದಲೇ ತಿಂಮ ಬೈಯಲು ಸುರುಮಾಡಿದ—

"ಏ, ದರಿದ್ರ....ಮಗನೆ. ಯಾಕೆ ಅನ್ನ ಅನ್ನ ಅಂತಾಬಡಕೊಂಡು ಸಾಯಿತಿ? ಒಪ್ಪೊತ್ತು ಅನ್ನ ಇಲ್ಲದಿದ್ದರೆ ಪ್ರಾಣವೇ ಹೋಗುತ್ತದೇನು? ಏನೋ ಒಂದು ತಿಂದು ಮಲಗು; ಒಂದುಸೇರು ಹಲ್ವಾ ತಿನ್ನು. ಇಲ್ಲವಾದರೆ ಒಂದು ಸೇರು ಹಾಲು ಕುಡಿ....ಅನ್ನನೇಬೇಕು ಈ ಮಕ್ಕಳಿಗೆ!"

ಮರುದಿನವೇ ತಿಂಮ ಆಹಾರ ಮಂತ್ರಿಯಾದ.

## ತಿಂಮನ ಕಳವು

ತಿಂಮನ ತಂದೆ ರಾಯದುರ್ಗದಿಂದ ರಾಯಬೋರೆ ಹಣ್ಣು ತಂದು, ಚಿಕ್ಕಬಾಯಿ ದೊಡ್ಡ ಹೊಟ್ಟೆಯ ತಂಬಿಗೆಯಲ್ಲಿಕ್ಕಿ ಗೂಡಿನಲ್ಲಿ ಮಡಗಿದರು. ಸ್ಕಾಟ್ಲೆಂಡ ಯಾರ್ಡಿನ ನಾಯಿಯಂತೆ ವಾಸನೆ ಹಿಡಿದು ತಿಂಮ ಗೂಡಿನ ಮುಂದೆಯೇ ನಿಂತ. ತಂಬಿಗೆಯಲ್ಲಿ ಕೈ ಇಕ್ಕಿ ದೊಡ್ಡ ಮುಷ್ಟಿ ತುಂಬ ಹಂಣನ್ನು ಹಿಡಿದ. ಕೈಸಿಗಿಬಿದ್ದಿತು. ಹಂಣನ್ನು ಕಂಡು ಬಾಯಲ್ಲಿ ನೀರು, ಕೈಯನ್ನು ಕಂಡು ಕಂಣಲ್ಲಿ ನೀರು. ಅಕಸ್ಮಾತ್ ತಂದೆ ಒಳಗೆ ಬಂದರು. ತಿಂಮನ ಕಳವು ಬಯಲಾಯಿತು. "ಕಳವು ಮಾಡಿದರೆ ಕೈ ನೋವಾಗುತ್ತದೆ." ಎಂದು ಹತ್ತು ಬಾರಿ ಅವನಿಂದ ಬರೆಯಿಸಿ ಕೈ ಬಿಟ್ಟರು.

ಮತ್ತೊಮ್ಮೆ ನೋಡಿದಾಗ ತಿಂಮ ಹಂಣುಗಳನ್ನು ತಿನ್ನುತ್ತಿದ್ದ.

"ಏನೋ ತಿಂಮಾ, ಪುನಃ ಕಳವು ಮಾಡುತ್ತಿದ್ದೀಯಾ ?"

"ಇಲ್ಲವಪ್ಪಾ, ಕೈ ನೋವಾಗಿಲ್ಲ ಈ ಸಲ" ಎಂದ. ಟೊಪ್ಪಿಗೆಯಲ್ಲಿ ಬೋರಲು ಮಾಡಿದ್ದ.

## [illegible]ಾಸ

ಹಳೆಯ ಪರಿಚಯದ ಗೆಳೆಯನೊಬ್ಬನಿಗೆ ಬಹು ದಿನಗಳ ಮೇಲೆ ತಿಂ[illegible] ಪತ್ರ ಬರೆಯಬೇಕಾಯಿತು. ಆವನ ವಿಳಾಸದ ಬಗ್ಗೆ ಅನುಮಾನವೆನಿಸಿ ಕೆಳಗಿನಂತೆ ಬರೆದ: "ಯಂ ಅಥವಾ ಆರ್........ರಾವು ಅಥವಾ ಆಚಾರು, ಏಳನೇ ಅಥವಾ ಎಂಟನೇ ತರಗತಿ, ಎ ಅಥವಾ ಬಿ ಸೆಕ್ಶನ್, ಮುನಿಸಿಪಲ್ ಅಥವಾ ಮಿಷನ್ ಹೈಸ್ಕೂಲು, ಬಳ್ಳಾರಿ ಅಥವಾ ಹೊಸಪೇಟೆ, ಆಂಧ್ರ ಅಥವಾ ಕರ್ನಾಟಕ ಅಥವಾ ಕರ್ಣಾಟಕ." ಪತ್ರವು ತಲುಪುವದೋ ಇಲ್ಲವೋ ಎಂಬ ಸಂಶಯವು ಬಂದು ಕಡೆಗೊಂದು ವಿಶೇಷ ಸೂಚನೆಯನ್ನು ಸೇರಿಸಿದ. "ಈ ಪತ್ರವು ನಿನಗೆ ತಲ್ಪದಿದ್ದಲ್ಲಿ ದಯವಿಟ್ಟು ನನಗೆ ತಿಳಿಸು"

ತಿಮ್ಮನ ತಲೆ ಉಳಿದೆಲ್ಲ

## ಕತ್ತಲಲ್ಲಿತ್ತು

ರಾತ್ರಿ ಹೊತ್ತಾಗಿ ಮನೆಗೆ ಬಂದ ತಿಂಮ ಗಡಿಬಿಡಿಯಲ್ಲಿ ನೆಲವನ್ನು ನೋಡದೆ, ಕಾಲಲ್ಲಿದ್ದ ಪೆಟ್ರೋಮಾಕ್ಸನ್ನು ಒದೆದು ಪೆಚ್ಚಾಗಿ ನಿಂತ. ಮನೆಯಲ್ಲವೂ ಕತ್ತಲಾಯಿತು.

ಸಿಟ್ಟಿಗೆ ಬಂದ ಅವನ ತಾಯಿ ಪ್ರಶ್ನಿಸಿದಳು:

" ದೇವರು ನಿನ್ನ ಕಾಲಿಗೆ ಎರಡು ಕಣ್ಣು ಕೊಟ್ಟಿದ್ದರೆ ಚೆನ್ನಾಗಿತ್ತು. ಸೂರ್ಯನಂತೆ ಉರಿಯುತ್ತಿದ್ದ ದೀಪ ಸಹ ಕಾಣಲಿಲ್ಲವೇನೋ ತಿಂಮ, ನಿನಗೆ ?

" ಕತ್ತಲಲ್ಲಿತ್ತು " ಎಂದು ಗೊಣಗುಟ್ಟಿದ.

## ಪ್ರೇಮ ಚಿಕಿತ್ಸೆ

ಉಕ್ಕುವ ಪ್ರಾಯದ ತಿಂಮನ ಮನಸ್ಥಿತಿ ಹರೆಮುರಿದ ತಂದೆಗೆ ಅರ್ಥವಾಗಲಿಲ್ಲ. ಕಂಣಲ್ಲಿ ಉರಿ, ಅನ್ನವೂ ರುಚಿಸದು, ನಿದ್ರೆ ಬೀಳದು, ಅದೊಂದು ಬಗೆಯ ಅದೇನೋ ಅದು ಆಗುತ್ತದೆಂದಷ್ಟೆ ತಿಂಮ ತನ್ನ ತಂದೆಗೆ ತಿಳಿಸಿದ್ದ. ಗುಟ್ಟು ಮಾತ್ರ ಹೊರಬಿದ್ದಿರಲಿಲ್ಲ. ದಿನದಿನವೂ ಮುಖವು ಕಳೆಗುಂದುತ್ತಿರುವದನ್ನು ಕಂಡು ತಂದೆತಾಯಿಗಳು ದಿಗಿಲುಗೊಂಡರು. ತಂದೆಯ ಆಗ್ರಹಕ್ಕೆ ತಿಂಮ ಪ್ರೇಮ ಚಿಕಿತ್ಸಾಲಯದ ಪಂಡಿತರ ಮುಂದೆ ನಿಲ್ಲಬೇಕಾಯಿತು. ತಮ್ಮ ಮೂಗಿಗೆ ಬೆರಳಿಟ್ಟು ನಾಡಿ ನೋಡಿ ಧನ್ವಂತರಿಗಳು ಹೇಳಿದರು :

" ಪ್ರಮಾದವೇನೂ ಇಲ್ಲ. ಈ ಹುಡುಗನಿಗೆ 'ಚಂದ್ರಮುಖಿ'ಯನ್ನು ಕೊಟ್ಟರೆ ಒಳ್ಳೆಯದು. "

" ಕೊಂಚ ತಪ್ಪಿದಿರಿ ವೈದ್ಯರೆ. ಅದು ಅವಳಕ್ಕನ ಹೆಸರು; ಚಂದ್ರಮುಖಿಗೆ ಆಗಲೆ ಮದುವೆ ಆಗಿದೆ " ಎಂದು ತಿಂಮ ಉಗುರು ಕಡಿದ.

## ಬೆಲ್ಲ

ತಿಂಮನಿಗೆ ಕತ್ತು ನೋವಾಗಿ ಅಳುತ್ತಲಿದ್ದ. ಕತ್ತು ತಿರುವಲು ಬಾರದಂತಾಗಿದ್ದ ತಿಂಮನನ್ನು ಅವನ ತಾಯಿ ಕರೆದುಕೊಂಡು ಡಾಕ್ಟರ ಬಳಿ ಬಂದರು.

"ಏಕೋ ತಿಂಮ, ನೋವಾಯಿತು?" ಎಂದು ಡಾಕ್ಟರು ಕೇಳಿದರು.

"ಬಹುಶಃ ತಲೆ ಸೊಟ್ಟ ಇಕ್ಕಿ ಮಲಗಿರಬೇಕು" ಎಂದರು ತಿಂಮನ ತಾಯಿ.

"ಇಲ್ಲ, ಬೆಲ್ಲವನ್ನು ನೆಕ್ಕುವಾಗ ಕತ್ತು ಖಳಕ್" ಎಂದು ನೋವಾಯಿತು." ಎಂದ ತಿಂಮ.

"ಬೆಲ್ಲ ಎಲ್ಲಿದ್ದಿತೋ?" ಎಂದರು ಅವನಮ್ಮ.

"ಬೆನ್ನಿನ ಮೇಲಿರುವ ಕುರುಬಿಗೆ ಬೆಲ್ಲ ಸುಂಣ ಹಚ್ಚಲಿಲ್ಲವೇನಮ್ಮ ನೀನು ನಿನ್ನೆರಾತ್ರಿ?" ಎಂದು ಕೇಳಿದ ತಿಂಮ.

## ಭಾವೀಭಾವ

ತಿಂಮನ ಅಕ್ಕ ಮದುವೆಗಾದಳು. ಕನ್ಯಾಪರೀಕ್ಷೆಗಳು ಮೇಲಿಂದ ಮೇಲೆ ಸಾಗಿದವು. ಸಾಮುದ್ರಿಕಶಾಸ್ತ್ರಜ್ಞರೊಡನೆ ತಿಂಮನ ಭಾವೀಭಾವ ಮನೆಗೆ ಬಂದೆ. ಎಲ್ಲರೂ ಕುಳಿತ ಮೇಲೆ ತಿಂಮನ ಅಕ್ಕ ನಾಚುತ್ತ ಬಂದು ಮುಂದೆ ಕುಳಿತಳು. ಶಾಸ್ತ್ರಜ್ಞರು ಕನ್ನೆಯ ಹಸ್ತ ನೋಡಲು ಆರಂಭಿಸಿದರು.

ಬಾಗಿಲಲ್ಲಿ ಆಡುತ್ತಿದ್ದ ತಿಂಮ ಸಾಮುದ್ರಿಕಾಶಾಸ್ತ್ರಜ್ಞರನ್ನು ವೈದ್ಯರೆಂದು ತಿಳಿದು ಕಡಲೆ ಕೂಗಿ ಹೇಳಿದ.

"ಕೊಂಚ ಸರಿಯಾಗಿ ನೋಡಿ ಸ್ವಾಮಿ. ನಿದ್ರೆಯಲ್ಲಿಯೇ ಎದ್ದೆದ್ದು ಕೂಡುತ್ತಾಳೆ. ಸನಿಯದಲ್ಲಿ ಮಲಗಿದವರ ಕತ್ತು ಹಿಸುಕುತ್ತಾಳೆ" ಎಂದ.

ತಿಂಮನ ಭಾವೀಭಾವ ಕತ್ತು ಮುಟ್ಟಿಗೊಳ್ಳುತ್ತ ಮೆಲ್ಲಗೆ ಹೊರ ಜಾರಿದ.



## ಅವರ ಮೂಗು

ತಿಂಮನ ಮನೆಗೊಬ್ಬರು ಅತಿಥಿಗಳು ಬರಲಿದ್ದರು. ತಿಂಮನ ಕಿಡಿಗೇಡಿತನವನ್ನು ನೆನೆದು ಅಂಜುತ್ತ ತಿಂಮನತಂದೆ ಅವರಿಗೆ ಬರಹೇಳಿ ಮನೆಗೆ ಬಂದು ಪೂರ್ವಸಿದ್ಧತೆ ನಡೆಸಿದರು.

''ಇಂದು ಮಧ್ಯಾಹ್ನ ಒಬ್ಬರು ಊಟಕ್ಕೆ ಬರುತ್ತಾರೆ. ಅವರ ಮೂಗಿನ ವಿಷಯ ಏನಾದರೂ ಮಾತನಾಡಿದರೆ ನಿನ್ನ ಕತ್ತು ಹಿಸಿಗಿಬಿಡುತ್ತೇನೆ ನೋಡು ಆಮೇಲೆ'' ಎಂದು ಮುಂಗಡವಾಗಿಯೇ ತಿಂಮನಿಗೆ ಹೇಳಿಟ್ಟರು.

ಅತಿಥಿಗಳು ಒಳಗೆ ಕಾಲಿಡುತ್ತಲೇ ತಿಂಮ ಅವರ ಮೂಗಿನ ಮೇಲೆ ದೃಷ್ಟಿ ಬೀರಿದ. ಎಲ್ಲರೂ ಸಾಲಾಗಿ ಊಟಕ್ಕೆ ಕುಳಿತರು. ತಿಂಮನ ತಾಯಿ ಬಡಿಸುತ್ತಿದ್ದಳು.

''ಅವರ ಮೂಗಿನ ವಿಷಯ ಮಾತನಾಡಬೇಡ ಅಂದೆಲ್ಲಪ್ಪಾ, ಅವರಿಗೆ ಮೂಗೇ ಇಲ್ಲವಲ್ಲ ?" ಎಂದು ತಿಂಮ ಅತಿಥಿಗಳ ಇಲ್ಲದ ಮೂಗಿಗಾಗಿ ಹುಡುಕಾಡಿದ.

## ಅಧ್ಯಕ್ಷರ ನಡತೆ

"ಅಪ್ಪಾ"

"ಏನೋ ತಿಂಮಾ ?"

"ನನ್ನ ನಡತೆ ಚೆನ್ನಾಗಿದೆ ಎಂಬುದಕ್ಕೆ ಒಂದು ಸರ್ಟಿಫಿಕೇಟ ಬೇಕಾಗಿದೆಯಪ್ಪ"

"ಆಗಲಿ. ಅಧ್ಯಕ್ಷರು ಕೊಟ್ಟರೆ ಸಾಕುತಾನೆ"

"ಸಾಕೂ........ಆದರೆ........''

''ಆದರೆ ಏನೋ ?''

''ಅವರ ನಡತೆ ಬಗ್ಗೆ ನನ್ನನ್ನು ಸರ್ಟಿಫಿಕೇಟು ಕೊಡು ಎಂದರೆ?"

## ಪುನಃ ಮದುವೆ

" ಅಪ್ಪಾ "
" ಏನೋ ತಿಂಮಾ? "
" ದೊಡ್ಡಪ್ಪನ ಮದುವೆಯಂತಲ್ಲಪ್ಪಾ ? "
" ಅಹುದೋ "
" ಮತ್ತೆ ಏಕಪ್ಪಾ ಮದುವೆ ? "
" ಮಕ್ಕಳಾಗಿಲ್ಲ. ಅದಕ್ಕೇ ಪುನಃ ಮದುವೆಯಾಗುತ್ತಾನಂತೆ"
" ಮಕ್ಕಳಾಗದಿದ್ದರೆ ಮತ್ತೆ ಮತ್ತೆ ಮದುವೆಯಾಗುತ್ತಾರೇನಪ್ಪಾ?"
" ಅಹುದೋ "
" ಅಪ್ಪಾ "
" ಏನೋ ತಿಂಮಾ ? "
" ನಾನು ದೊಡ್ಡಮ್ಮನ ಮದುವೆಗೆ ಹೋಗ್ತೇನಪ್ಪಾ "

## ಸೆರೆ ಕುಡಿದರೆ

' ಅಪ್ಪಾ "
' ಏನೋ ತಿಂಮಾ "
" ಮೊನ್ನೆ ಒಬ್ಬ ಸೆರೆ ಕುಡಿದು ಜಗಳಾಡಿದನಂತಪ್ಪಾ "
" ಅಹುದೋ ತಿಂಮಾ "
" ತನ್ನ ಅಪ್ಪನ ತಲೆಗೇ ಕಲ್ಲು ಎಸೆದನಂತಪ್ಪಾ "
" ಅಹುದಂತೋ ತಿಂಮಾ "
" ಗುರಿ ತಪ್ಪಿ ತಲೆಗೆ ಏಟು ಬೀಳಲೇ ಇಲ್ಲವಂತಪ್ಪಾ "
" ಅಹುದೋ ತಿಂಮಾ"

" ಸೆರೆ ಕುಡಿದರೆ ಗುರಿ ತಪ್ಪುತ್ತೆ ಅಂತಾನೆ ಕುಡಿಯೋದನ್ನು ಸರ್ಕಾರ ಬಂದು ಮಾಡಿದೆಯೇನಪ್ಪಾ?"

## ಆಡದೆ ಮಾಡುವನು

" ತಿಂಮಾ "

" ಏನಪ್ಪಾ ? "

" ದೇಶದ ತುಂಬಾ ಮಾತನಾಡುವವರೇ ಆದರಲ್ಲೋ ? "

" ಅಹುದಪ್ಪಾ "

" ಬಾಯಿಂದಾಡುವ ಬದಲು ಕೈಯಿಂದ ಮಾಡಿ ತೋರಿಸುವವರು ಯಾರೂ ಇಲ್ಲವೇನೋ ? "

" ಇದ್ದಾರಪ್ಪಾ "

" ಯಾರೋ ತಿಂಮಾ ಅಂತಹ ಉತ್ತಮರು ? "

" ಮೂಕರು "

O O O

## ಕರ್ನಾಟಕದ ಹುಲಿಗಳು

"ಅಪ್ಪಾ "

"ಏನೋ ತಿಂಮಾ ? "

"ಕರ್ನಾಟಕದ ಹುಲಿಗಳ ಹಾವಳಿ ಹೆಚ್ಚಿದೆಯಪ್ಪಾ "

"ಅಹುದೋ ತಿಂಮಾ "

"೨೦ ವರ್ಷದ ಹುಡುಗನೊಬ್ಬನು ಹುಲಿಯನ್ನು ಕೊಂದನಂತಪ್ಪಾ "

"ಹೇಗೋ ತಿಂಮಾ ?"

"ಬರೀ ಲಾಠಿಯಿಂದ ಹೊಡದೇ ಕೊಂದನಂತಪ್ಪಾ "

"ಒಳ್ಳೆಯ ವೀರನಿರಬೇಕು ಅವನು "

"ಅದಿರಲಪ್ಪಾ; ಕರ್ನಾಟಕದ ಹುಲಿಗಳು ಎಷ್ಟು ದುರ್ಬಲವಾಗಿವೆ ನೋಡು, ಲಾಠಿ ಹೊಡೆತಕ್ಕೇ ಸಾಯಬೇಕಾದರೆ "

## ಪಿಟೀಲು ಕೇಳಿದ

" ಅಪ್ಪಾ "

" ಏನೋ ತಿಂಮಾ? "

" ನನಗೆ ಪಿಟೀಲು ಅಂದರೆ ಬಹಳ ಇಷ್ಟ ನೋಡಪ್ಪಾ "

" ಒಳ್ಳೆಯ ರಸಿಕನೋ ನೀನು. ಮೊನ್ನೆ ಚೌಡಯ್ಯನವರ ಪಿಟೀಲು ಕೇಳಿದೇನೋ ತಿಂಮಾ? "

" ಕೇಳಿದೆನಪ್ಪಾ, ಆದರೆ............... "

" ಆದರೇನೋ ಗೀದರೆ? "

" ಪಿಟೀಲು ಕೇಳಿದೆನಪ್ಪಾ, ಅವರು ಕೊಡುವದಿಲ್ಲ ಎಂದರು. "

O O O

## ಇದೇನು ಮಹಾ?

ತಿಂಮ ತಿರುಪತಿಯ ಬೆಟ್ಟ ಏರಿದ. ಎದೆಯ ಮೇಲೆಯೇ ಬರುವಂತಿದ್ದ ಮೆಟ್ಟಲುಗಳನ್ನೇರಿ 'ಗೋವಿಂದಾ ಗೋವಿಂದಾ' ಎಂದು ದಣುವನ್ನು ಆರಿಸಿ ಕೊಳ್ಳುತ್ತಿದ್ದ ಭಕ್ತರು ಅಲ್ಲಲ್ಲಿ ಕೂಡುತ್ತಿದ್ದರು. ತಲೆ ಮೇಲೆತ್ತಿ ಗಾಳಿ ಗೋಪುರವನ್ನು ಕಂಡವರು ಗಲ್ಲ ಗಲ್ಲ ಹಾಕಿಕೊಂಡರು. ಮುಗಿಲನ್ನು ಮುದ್ದಿಕ್ಕುವಂತಿದ್ದ ಗಾಳಿಗೋಪುರದ ಕಳಸವನ್ನು ಕಂಡು ಯಾರೋ ಒಬ್ಬ ಉದ್ಗಾರ ತೆಗೆದ.

" ಇಷ್ಟು ಎತ್ತರದ ಗೋಪುರವನ್ನು ಹೇಗಪ್ಪಾ ಕಟ್ಟಿದ್ದಾರು? "

" ಇದೇನು ಮಹಾ? ಮೊದಲು ಮೇಲೆ ಹೋಗುವದು. ಕಟ್ಟುತ್ತ ಕಟ್ಟುತ್ತ ಹಾಗೆಯೇ ಕೆಳಗೆ ಬಂದು ಇಳಿದು ಬಿಡೋದು" ಎಂದ ತಿಂಮ.

## ಮಹಾತ್ಮ

ಗುರುಗಳೊಬ್ಬರಿಗೆ ಮಹಾತ್ಮರೆನಿಸಿಕೊಳ್ಳಬೇಕೆಂಬ ಹುಚ್ಚು. ಭಾಷಣ ಗಳನ್ನು ಮಾಡಿನೋಡಿದರು; ಪ್ರಕಟನೆಗಳನ್ನು ಕೊಟ್ಟು ಕೇಳಿದರು. ಅಲ್ಲಲ್ಲಿ ಭಾವಚಿತ್ರವನ್ನು ಛಾಪಿಸಿ ಎಲ್ಲರ ಕಣ್ಮುಂದಲೂ ಬಂದರು. ಆದರೂ ಎಲ್ಲವೂ ವ್ಯರ್ಥವಾಯಿತು. ಶಿಷ್ಯನಾದ ತಿಂಮನಲ್ಲಿ ಆಪ್ತಾಲೋಚನೆ ನಡೆಸಿದರು.

"ಮಹಾತ್ಮರಾಗಬೇಕೋ ಅಥವಾ ಮಹಾತ್ಮರೆನಿಸಿಕೊಳ್ಳಬೇಕೋ, ಬುದ್ಧೀ?" ಎಂದು ಕೇಳಿದ ತಿಂಮ.

"ಮಹಾತ್ಮರಾದರೆ ಏನು ಪ್ರಯೋಜನವೋ ತಿಂಮಾ? ಮಹಾತ್ಮರೆನಿಸಿಗೊಳ್ಳಬೇಕಯ್ಯಾ ನಾನು" ಎಂದರು.

"ಕೊಂಚ ತಪ್ಪು ಮಾಡಿಬಿಟ್ಟಿರಿ. ಒಂದು ತಿಂಗಳ ಹಿಂದೆ ಅಪ್ಪಣೆ ಕೊಡಿಸಿದ್ದರೆ........"

"ಏಕೋ ತಿಂಮ, ಆಗ ಮಾತ್ರ ಹೇಗೆ ಸಾಧ್ಯವಿದ್ದಿತು?" ನಡುವೇ ಬಾಯಿ ಹಾಕಿ ಕೇಳಿದರು.

"ಅನಾಯಾಸವಾಗಿ ಧೂಮಕೇತು ಬಂದಿತ್ತಲ್ಲ ಬುದ್ಧೀ" ಎಂದು ತಿಂಮ ಗೋಳಾಡಿದ.

## ಶ್ರೀಖಂಡ

ವನಭೋಜನಕ್ಕೆ ಇಡೀ ಊರೇ ಹೊರಟಿತು. ತಿಂದಷ್ಟು ಶ್ರೀಖಂಡ ಕ್ಕೆ ತುಂಬ ದಕ್ಷಿಣೆ; ಹೆಳವರಿಗೆ ಕಾಲು ಕೊಟ್ಟಿತು, ಕುರುಡರಿಗೆ ಕಣ್ಣು ಕೊಟ್ಟಿತು. ಮನೆಮನೆಗೂ ಬಂಧುಬಳಗ ಬಂದಿಳಿದಿತು. ಊಟದ ಜಾತ್ರೆ ತೋಟದಲ್ಲಿ ನಡೆಯಿತು. ಕೆನೆಮೊಸರಿನಲ್ಲಿ ಇಳಿಸಿದ ಶ್ರೀಖಂಡವನ್ನು ಎಲ್ಲರೂ ಸುರಿದರು. ತಿಂಮ ಮಾತ್ರ ಒಂದು ಅಗಳನ್ನೂ ಮುಟ್ಟಲಿಲ್ಲ. ಶ್ರೀಖಂಡದಿಂದ ಆರಂಭಿಸಿದ ಊಟವನ್ನು ಶ್ರೀಖಂಡದಿಂದಲೇ ಮುಗಿಸಿದ. ಪಾಪ, ಅದರ ಆಧಾರವೇ ಆಧಾರ! ಊಟವನ್ನು ಮುಗಿಸಿ, ತಾಂಬೂಲ ಅಗಿಯುತ್ತ ಎಲ್ಲರೂ ಕುಳಿತಾಗ ಹಿರಿಯರೊಬ್ಬರು ತಿಂಮನ ವಿಚಾರಣೆ ತೆಗೆದು ಕೊಂಡರು.

"ಶ್ರೀಖಂಡವನ್ನು ತಿಂದಿಯೇನೋ, ತಿಂಮಾ?"

"ಏನು ಶ್ರೀಖಂಡವೋ, ತಿಂದೆ ಬಿಡಿ" ಎಂದು ಮೂಗೆಳೆದ.

"ಏಕೋ ಹಾಗಂತಿದೀಯಾ, ಚನ್ನಾಗಿರಲಿಲ್ಲವೆ?"

"ಚೆನ್ನಾಗಿಯೇ ಇತ್ತು. ಆದರೆ ಶ್ರೀಖಂಡವನ್ನು ಮೊಸರಿನಿಂದ ಮಾಡಿ ಕೆಡೆಸಿಬಿಟ್ಟಿದ್ದಾರೆ" ಎಂದು ಅಸಮಾಧಾನದಿಂದ ನುಡಿದ ತಿಂಮ.

## ಅಶ್ಲೀಲ ಸಾಹಿತ್ಯ

"ಅಪ್ಪಾ"

"ಏನೋ ತಿಂಮಾ?"

"ಅಶ್ಲೀಲ ಸಾಹಿತ್ಯವೆಂದರೆ ಯಾವುದಪ್ಪಾ?"

"ಚಿಕ್ಕವರು ಓದಬಾರದ್ದು ಅಶ್ಲೀಲ ಸಾಹಿತ್ಯ"

"ಹೀಗೆಂದು ದೊಡ್ಡವರು ಹೇಳುತ್ತಾರಲ್ಲವೇನಪ್ಪಾ?"

"ಅಹುದೋ ತಿಂಮಾ"

"ಚಿಕ್ಕವರಿದ್ದಾಗ ಓದಿ, ದೊಡ್ಡವರಾದ ಮೇಲೆ ಚಿಕ್ಕವರು ಓದ ಕೂಡದು ಎಂಬುದಕ್ಕೇ ಅಶ್ಲೀಲ ಸಾಹಿತ್ಯವೆನ್ನುತ್ತಾರೇನಪ್ಪಾ?"

## ಕೊಂಚ ಅವಸರವಿದೆ

ಬೆಳಗಿನ ಜಾವದಲ್ಲಿಯೇ ಎದ್ದು ತಿಂಮ ಕಾಲ್ನಡಿಗೆಯಲ್ಲಿ ಹೊರಟಿದ್ದ. ಊರ ಹೊರಗೆ ಕೊಂಚ ದೂರ ಸಾಗಿದ ಮೇಲೆ ಗ್ಯಾಸ್ ಪ್ಲಾಂಟ ಬಸ್ಸೊಂದು ಹಿಂದೆ ಬಂದಿತು. ಪರಿಚಿತ ಡ್ರೈವರನಿದ್ದ ಕಾರಣ ಮೋಟಾರ ನಿಲ್ಲಿಸಿ ತಿಂಮನನ್ನು ಮಾತನಾಡಿಸಿದ.

"ಹಳ್ಳಿಯವರಿಗೂ ನಡೆಯೋದಾ? ಬಾರೋ ತಿಂಮ ಮೋಟಾರಿನಲ್ಲಿ, ಹಳ್ಳಿಯಲ್ಲಿ ನಿನ್ನನ್ನು ಇಳಿಸುತ್ತೇನೆ."

"ಇಲ್ಲ, ನೀವು ಹೋಗಿ. ನಾನು ನಡೆದೇ ಬರುತ್ತೇನೆ."

"ಏಕೋ?"

"ಇಂದು ನಾನು ಹಳ್ಳಿಗೆ ಹೋಗಲೇಬೇಕು. ಕೊಂಚ ಅವಸರವಿದೆ."

O O O

## ತಿಂಮನಿಗನಿಸಿದ್ದು

ಮಗುವನ್ನೆತ್ತಿಕೊಂಡು ಜಡಭರತರಾಯರು ಅಡ್ಡಾಡಲು ಬಂದರು ಸಾಯಂಕಾಲ. ಎದುರಿಗೆ ಬಂದ ತಿಂಮ ಕೇಳಿದ.

"ನಿಮ್ಮದೇನು ಮಗು, ರಾಯರೇ?"

"ಅಹುದಪ್ಪಾ. ಯಾಕೋ?"

"ಯಾಕೂ ಇಲ್ಲ, ಬಹು ಮುದ್ದಾಗಿದೆ ಸ್ವಾಮಿ"

"ಬರೀ ಅಷ್ಟೇ ಅಲ್ಲವೋ ತಿಂಮ, ಇದರ ಬುದ್ದಿ ಎಷ್ಟು ಚುರುಕು ಅಂತ ತಿಳಿದೀಯಾ?"

"ಸರಿ, ಹಾಗಾದರೆ ತಾಯಿಯನ್ನೇ ಹೋತಿದೆ ಅನ್ನಿ"

ಎಂಬತ್ತೊಂಭತ್ತು

ಉಳಿದೆಲ್ಲ

## ಯಾವುದಾದರೂ ಸರಿಯೇ

ಪಕ್ಕದ ಮನೆಯಲ್ಲಿ ಪರೀಕ್ಷೆಗಾಗಿ ರಾತ್ರಿಯೆಲ್ಲವೂ ಓದುತ್ತಿದ್ದ ವಿದ್ಯಾರ್ಥಿಯ ದೀಪದಲ್ಲಿ ಎಣ್ಣೆ ಆಗಿ ಹೋಗಿ ಏನೂ ತೋಚದೆ ನಡುರಾತ್ರಿಯಲ್ಲಿ ಬಂದು ತಿಂಮನನ್ನು ಎಬ್ಬಿಸಿದ. ಅರೆನಿದ್ರೆಯಲ್ಲಿ ಕಣ್ಣು ತಿಕ್ಕುತ್ತ ಎದ್ದ ತಿಂಮ ವಿಚಾರಿಸಿದ.

"ಏನಪ್ಪಾ ಬೇಕು?"

"ಕೊಂಚ ಸೀಮೆ ಎಣ್ಣೆ ಕೊಡುತ್ತೀರಾ?"

"ಇಲ್ಲವಲ್ಲಯ್ಯಾ"

"ಒಳ್ಳೆಣ್ಣೆ?"

"ಅದೂ ಇಲ್ಲವೋ"

"ಔಡಲ ಎಣ್ಣೆ ಆದರೂ ಪರವಾಯಿಲ್ಲ. ಯಾವುದಾದರೂ ಸರಿ"

"ಕೊಂಚ ನಿಲ್ಲು. ಪೆಟ್ಟಿಗೆಯಲ್ಲಿ ಎಲ್ಲಿಯೋ ಪರ್ಗೋಲ್ಯಾಕ್ಸ (ಸುಖಭೇದಿ ಮಾತ್ರೆ) ಇರಬೇಕು. ನೋಡ್ತೇನೆ" ಎಂದ ತಿಂಮ.

## ಅಡವಿಯ ದೆವ್ವ

"ಅಪ್ಪಾ"

"ಏನೋ ತಿಂಮಾ?"

"ರಾಯರ ಮನೆಯಲ್ಲಿ ಮೊದಲು ದೆವ್ವದ ಕಾಟವಿದ್ದಿತಂತಪ್ಪಾ"

"ಅಹುದಂತೋ ತಿಂಮಾ"

"ರಾಯರಿಗೊಬ್ಬ ಮನೆ ಅಳಿಯ ದೊರೆತನಂತಪ್ಪಾ"

"ಅಹುದಂತೋ ತಿಂಮಾ"

"ಆ ಮೇಲೆ ದೆವ್ವ ಪರಾರಿಯಾಯಿತಂತೆ ನೋಡಪ್ಪಾ"

## ಕಡೇ ಮಾತು

ತಿಂಮನಿಗೆ ಮರಣಕಾಲವು ಸಮೀಪಿಸಿತು. ಕೈಕಾಲು ತಣ್ಣಗಾಗುತ್ತ ಬಂದು ದೃಷ್ಟಿ ಮೇಲ್ಗಡೆಯಾಯಿತು. ಬಂಧು ಬಳಗವು ಗುಂಪು ಸೇರಿ ಹೋಯೆಂದು ಅತ್ತರು. ದೇಹದ ಬಂಧನಗಳನ್ನು ದಾಟಿ ಹಾದಿಹಿಡಿಯುತ್ತಿದ್ದ ತಿಂಮ.

"ನನಗೇನಪ್ಪಾ ಹೇಳುತ್ತೀ ?" ಎಂದು ತಿಂಮನ ಹಿರಿಮಗನು ಎದೆ ಬಡಿದುಕೊಂಡು ಅಳಹತ್ತಿದ.

ಕೈಸನ್ನೆಯಿಂದ ಮಗನನ್ನು ಹತ್ತಿರ ಕರೆದು ಮಗನ ಕಿವಿಯಲ್ಲಿ ಕಡೇ ಮಾತನ್ನು ಹೇಳಿದ ತಿಂಮ.

"ನನ್ನ ರೇಶನ್ ಕಾರ್ಡನ್ನು ರದ್ದು ಮಾಡಿಸಲು ಮರೆಯಬೇಡ"

## ಸಾಹಿತಿ ತಿಂಮ

"ಕತೆ, ಕವನ, ನಾಟಕ, ರಗಳೆ, ವ್ಯಕ್ತಿಚಿತ್ರ, ಪ್ರಬಂಧ, ಕಾದಂಬರಿ, ಹರಟೆ, ಏನು ಬೇಕು ಎಲ್ಲ ಬರೆಯಬಲ್ಲೆ" ಎಂದೊಮ್ಮೆ ತಿಂಮ ಗೆಳೆಯರ ಗುಂಪಿನಲ್ಲಿ ಜಂಭಕೊಚ್ಚಿಕೊಂಡ.

"ಹಾಗಾದರೆ ಒಂದು ಕವನವನ್ನು ಬರೆಯಬಲ್ಲೆಯಾ?" ಎಂದ ಒಬ್ಬ.

"ಓಹೋ"

"ಯಾವುದರ ಮೇಲೆ ?"

"ಕಾಗದದ ಮೇಲೆ"

"ಅಲ್ಲವೋ ಒಂದು ಹೂವಿನ ಮೇಲೆ ಬರೆ ನೋಡೋಣ"

ಕೈಯಲ್ಲಿ ಕಾಗದ ಸೀಸಕಡ್ಡಿ ಹಿಡಿದು "ಹೂ, ಹೇಳು" ಎಂದ ತಿಂಮ.



ಉಳಿದೆಲ್ಲ 

## ಆಕಳಲ್ಲ

ಬಿಸಿಲಿಗೆ ಜೋಳ ಹಾಕಿ ತಿಂಮನ ತಾಯಿ ಕಾಯುತ್ತ ಕುಳಿತಳು. ಬೇರೆ ಕೆಲಸದ ಸಲುವಾಗಿ ಒಳಗೆ ಹೋಗಬೇಕಾಯಿತು. ತಿಂಮನನ್ನು ಕಾಯಲು ಕೂಡಿಸಿ "ಕೊಂಚ ಹುಷಾರಾಗಿರು, ಆಕಳು ಬಂದು ಬಾಯಾ ಡೀತು" ಎಂದು ಹೇಳಿ ಎದ್ದಳು. ಪುನಃ ಬಂದು ನೋಡುವಾಗ ಅರ್ಧ ಕಾಳು ಮಾಯವಾಗಿದ್ದಿತು.

"ಏನೋ ತಿಂಮಾ ನೀನು ಕಾದದ್ದು? ಆಕಳು ತಿನ್ನುವಾಗಲೂ ನೋಡುತ್ತ ಕುಳಿತಿದ್ದೀನು?"

"ಛೀ! ಛೆ! ಆಕಳಲ್ಲಮ್ಮ ಜೋಳ ತಿಂದದ್ದು. ನಾನು ಸರಿಯಾಗಿ ನೋಡಿದ್ದೇನೆ, ಎರಡೆರಡು ಬಾರಿ. ಅದು ಎತ್ತು."

O O O

## ಕರ್ಫ್ಯೂ

ಮಾಮೂಲು ರಸ್ತೆ ಬಿಟ್ಟು ಬೇರೆ ರಸ್ತೆಯಲ್ಲಿ ಬರುತ್ತಿದ್ದ ತಿಂಮನನ್ನು ಕಂಡು ಗೆಳೆಯರೊಬ್ಬರು ಪ್ರಶ್ನಿಸಿದರು.

"ಏಕೇ ತಿಂಮಾ, ನಿನ್ನ ಮಾಮೂಲು ರಸ್ತೆ ಬಿಟ್ಟು ಈ ರಸ್ತೆಗೆ ಬಂದಿ?"

"ಸ್ವಾಮಿ, ಇನ್ನು ಮೂರು ವರ್ಷ ಆ ರಸ್ತೆಯಲ್ಲಿ ಯಾರೂ ಹಾಯು ವಂತಿಲ್ಲ"

"ಏನು, ಮ್ಯಾಜಿಸ್ಟ್ರೇಟರು ಕರ್ಫ್ಯೂ ಆರ್ಡರು ಕೊಟ್ಟಿದ್ದಾರೆಯೇ?"

"ಇಲ್ಲ ಕಣ್ರೀ, ಮ್ಯಾಜಿಸ್ಟ್ರೇಟರ ಕರ್ಫ್ಯೂ ಆದರೆ ಮೂರು ತಿಂಗಳಲ್ಲೇ ಮುಗಿಯುತ್ತಿತ್ತು. ಇದು ಮುನಸಿಪಾಲ್ಟಿ ಕರ್ಫ್ಯೂ, ರಸ್ತೆ ರಿಪೇರಿ ನಡೆದಿದೆ.

## ಭಿಕ್ಷೆ

ತಿಂಮನ ಮನೆಯ ಬಾಗಿಲಲ್ಲಿ ಭಿಕ್ಷುಕಳೊಬ್ಬಳು ಕೂಗುತ್ತಿದ್ದಳು ಕುಳಿತಲ್ಲಿಂದಲೆ ತಿಂಮ ಮಗಳಿಗೆ ಕೂಗಿ ಹೇಳಿದ.

" ಒಂದೆರಡು ಕಾಳು ಭಿಕ್ಷೆ ಹಾಕಮ್ಮಾ ಅವಳಿಗೆ " ಎಂದ.

" ಜೋಳ ಹಾಕಲೇನಪ್ಪಾ ? "

" ಛೀ ಹುಚ್ಚಿ, ನಮ್ಮಂತೆ ಜೋಳ ತಿನ್ನಲು ಅವರೇನು ದುಡಿಯುವರೇ ಪಾಪ! ಅಕ್ಕಿಯನ್ನೇ ಹಾಕಮ್ಮಾ, ಜೋಳ ತಿನ್ನಲು ಅವರಿಗೇನು ದರಿದ್ರ?"

○ ○ ○

## ಉಡುಗೊರೆ

ತಿಂಮನ ಗೆಳೆಯರೊಬ್ಬರ ಹುಟ್ಟುಹಬ್ಬ. ಉಡುಗೊರೆ ಕೊಡಲು ನಾ ಮುಂದೆ ನೀ ಮುಂದೆಂದು ಜನರೆಲ್ಲರೂ ಜಿಗಿದಾಡಿದರು. ವಿಲೀನವಾದ ಸಂಸ್ಥಾನಗಳ ಬಿಳಿ ಆನೆಗಳಿಂದ ಹಿಡಿದು ದಿವಾಳಿ ತೆಗೆದ ಅಂಗಡಿಗಳ ರಿಬ್ಬನ್ನುಗಳ ವರಗೂ ಸುರಿಮಳೆಯಾದವು. ಏನು ಕೊಡಬೇಕೆಂದು ತಿಂಮನಿಗೆ ತೋಚದಾಯಿತು. ನೇರವಾಗಿ ಸಾಗಿ ತನ್ನ ಗೆಳೆಯನನ್ನೇ ಕೇಳಿದ:

" ನಾನು ಏನು ಉಡುಗೊರೆ ಕೊಡಲಿ ಹೇಳಯ್ಯಾ ಕೊಂಚ "

" ಎಲ್ಲರಂತೆಯೇ ನೀನೂ ಸಾಮಾನ್ಯವಾಗಿ ಕೊಡುವದನ್ನೇ ಕೊಟ್ಟರೆ ಹೇಗೋ ತಿಂಮಾ ? ಏನಾದರೂ ಹೊಸದನ್ನು ಕೊಡು "

ಆಯಿತು ಎಂದು ಹೊರ ಹೊರಟ ತಿಂಮ ಕರೀ ಮಾರ್ಕೇಟಿನಲ್ಲಿ ಕೊಂಡು ತಂದು ಒಂದು ಬಾಟ್ಲಿ ಸೀಮೆ ಎಂಣೆ ಕೊಟ್ಟ.

ಉಳಿದೆಲ್ಲ

## ಕುಟುಂಬ ಸಹಿತ

ರಸ್ತೆಯಲ್ಲಿ ಯಾರ ಗೋಜಿಗೂ ಹೋಗದೆ, ಎದುರು ಬರುತ್ತಿದ್ದ ರಾಯರಿಗೆ ತಿಂಮ ಕುಶಲ ಪ್ರಶ್ನೆ ಹಾಕಿದ.

" ನಮಸ್ಕಾರ ರಾಯರೇ, ಯಾವಾಗೋ ಬಂದದ್ದು ? "

" ನಿನ್ನೆ ರಾತ್ರಿ ತಾನೆ ಬಂದೆ ತಿಂಮ "

" ತೀರ್ಥ ಯಾತ್ರೆ ಸುಖವಾಗಿ ಆಯಿತೇ ? "

" ಆಯಿತಪ್ಪ, ದೇವರ ದಯೆಯಿಂದ "

" ಓಹೋ ! ಇದೇನು ಶನಿವಾರ ಮುಂಡನ ಆಗಿದೆಯಲ್ಲಾ ? "

" ಮುಂದೆ ತಿಥಿಗಳಿಲ್ಲವೋ ತಿಂಮ "

" ಕುಟುಂಬ ಸಹಿತ ತಾನೇ ? "

" ಅಯ್ಯೊ ಶನಿಯೇ, ಏನು ಮುಂಡನವೇ ? "

" ಅಲ್ಲ ರಾಯರೇ, ತೀರ್ಥ ಯಾತ್ರೆ "

## ಸೆರೆಕುಡುಕ ತಿಂಮ

ಮದ್ಯಪಾನ ನಿಷೇಧ ಸಮಿತಿಯ ಅಧ್ಯಕ್ಷನಾದ ತಿಂಮನಿಗೆ ಒಮ್ಮೆ ಸೆರೆ ಕುಡಿಯುವ ಸಮಯ ಒದಗಿತು. ಮೋಜಿನ ಗೆಳೆಯರ ಗುಂಪಿನಲ್ಲಿ ಸೇರಿ ಸಿಕ್ಕಾಪಟ್ಟೆ ಕುಡಿದು ಜೀವು ಗಾಡಿಯಂತಾದ. ಇದ್ದುದರಲ್ಲಿಯೇ ಕೊಂಚ ಹುಷಾರಿದ್ದ ಜೊತೆಯವನೊಬ್ಬ ತಿಂಮನನ್ನು ಎಬ್ಬಿಸಿದ.

" ಏಳೋ ತಿಂಮ ಸಾಕು, ಮನೆಗೆ ಹೋಗೋಣ; ನಿನ್ನ ಬೂಟುಗಳನ್ನು ಮೆಟ್ಟಿಕೋ " ಎಂದು ಅವಸರ ಮಾಡಿದ.

" ಅಹುದು........ಬೂಟೇನೊ ಇವೆ. ಎಡಗಾಲಿನದು ಯಾವುದೂ, ಬಲಗಾಲಿನದು ಯಾವುದೂ ಅಂತ........"

" ಚೆನ್ನಾಯಿತು, ಇಗೋ ಇದರಲ್ಲಿ ಎಡಗಾಲಿಡು "

" ಅಹುದೂ........ಎಡಗಾಲು ಯಾವುದೂ ಅಂತ "

ತಿಂಮನ ತಲೆ ಉಳಿದಿಲ್ಲ

## ಇದು ನಿಜವೇ?

ಪರಸ್ಥಳದವನೊಬ್ಬ ತಿಂಮನನ್ನು ಕೇಳಿದ.

"ಸ್ವಾಮೀ, ರೈಲ್ವೆ ಸ್ಟೇಶನ್ ಎಲ್ಲಿದೆ?"

"ಎಲ್ಲಿಯೋ ಇರಬೇಕ್ರೀ........ ರೈಲು ನಿಂತಿರುತ್ತೆ ನೋಡಿ, ಅದೇ ಇರಬೇಕು ಬಹುಶಃ"

o o o

## ಬೀಗ ಮುರಿಯುವವರು.

"ಕಿಸೆ ಹರಿಯುವಷ್ಟು ಭಾರವುಳ್ಳ ಬೀಗವನ್ನು ಕಿಸೆಯಲ್ಲಿಯೇ ಇಟ್ಟು ಕೊಂಡು ತಿರುಗುತ್ತಿದ್ದ ತಿಂಮನನ್ನು ಓರ್ವರು ಪ್ರಶ್ನೆ ಮಾಡಿದರು.

"ಅದೇನೋ ತಿಂಮ, ಕಿಸೆಯಲ್ಲಿ?"

"ಮನೆಯ ಬೀಗ ಸ್ವಾಮಿ"

"ಅದನ್ನೇಕೋ ಹೊತ್ತುಕೊಂಡು ತಿರುಗುತ್ತೀ?"

"ಮೊನ್ನೆ ಪತ್ರಿಕೆಯಲ್ಲಿ ನೋಡಲಿಲ್ಲೇನು ಸ್ವಾಮಿ ನೀವು. ಊರಲ್ಲಿ ಬೀಗ ಮುರಿಯುವವರು ಬಹಳ ಆಗಿದ್ದಾರಂತೆ. ಮನೆಗೆ ಹಾಕಿದ ಬೀಗ ಗಳನ್ನೆಲ್ಲಾ ಮುರಿದಿದ್ದಾರೆ. ಅದಕ್ಕೇ ಸ್ವಾಮಿ ಕಿಸೆಯಲ್ಲಿಯೇ ಇರುತ್ತೆ ಬೀಗ ಯಾವಾಗಲೂ."

## ದಂಪತ್ಯೈರಿ ದೇವರು

ಸಕುಟುಂಬವಾಗಿ ತಿಂಮ ದೇವರ ಗುಡಿಗೆ ಹೊರಟ ಒಂದು ಬಾರಿ. ಹೊರ ಬಾಗಿಲಲ್ಲಿಯೇ ನಿಂತುಬಿಟ್ಟ, ದೊಡ್ಡ ಬೋರ್ಡನ್ನು ಕಂಡ ಕೂಡಲೆ.

'ಛತ್ರಿ, ಜೋಡುಗಳಿಗೆ ಪ್ರವೇಶವಿಲ್ಲ' ಎಂದಿದ್ದಿತು.

"ಮೊದಲು ನೀನು ಹೋಗಿ ಬಾ ಗುಡಿಯಲ್ಲಿ ಆ ಮೇಲೆ ನಾನು ಹೋಗುತ್ತೇನೆ" ಎಂದು ತಿಂಮ ಹೆಂಡತಿಗೆ ಹೇಳಿದ.

"ಅದೇಕೆ ?"

"ಅಲ್ಲಿ ನೋಡು ಬೋರ್ಡು. ಜೋಡಿಗೆ ಪ್ರವೇಶವಿಲ್ಲವಂತೆ. ಒಬ್ಬೊಬ್ಬರೇ ಹೋಗಬೇಕು."

## ಜಾತೀಯ ತಳಹದಿ

ತಿಂಮನ ಹಲವು ಅಭಿಪ್ರಾಯಗಳು ಊರ ಹಿರಿಯರೊಬ್ಬರಿಗೆ ಸರಿ ಬೀಳಲಿಲ್ಲ. ಚರ್ಚೆ ಮಾಡಿ ಬೇಸತ್ತ ಹಿರಿಯರು ಸಿಟ್ಟಿಗೆ ಬಂದರು.


"ಹೀಗೆ ಮಾತನಾಡಿದರೆ ನಿನ್ನನ್ನು ಹುಚ್ಚಾಸ್ಪತ್ರೆಯಲ್ಲಿ ಸೇರಿಸಬೇಕಾಗುತ್ತೆ" ಎಂದು ಗದರಿಸಿದರು.

"ಈ ಅಭಿಪ್ರಾಯವು ನನ್ನೊಬ್ಬನದೇ ಅಲ್ಲ ಸ್ವಾಮಿ; ನನ್ನ ತಮ್ಮನೂ ಇದೇ ಮಾತನ್ನೇ ಹೇಳುತ್ತಿದ್ದಾನೆ"

"ಹಾಗಾದರೆ ಇಬ್ಬರನ್ನೂ ಒಂದೇ ಬಾರಿ ಹುಚ್ಚಾಸ್ಪತ್ರೆಯಲ್ಲಿ ಸೇರಿಸಬೇಕಷ್ಟೆ"

"ಅದು ಹೇಗೆ ಸ್ವಾಮಿ ಸಾಧ್ಯ ? ಇಬ್ಬರದೂ ಒಂದೇ ಜಾತಿಯಲ್ಲವೆ? ಜಾತೀಯ ತಳಹದಿಯ ಮೇಲೆ ಪ್ರವೇಶ ಅಂದರೆ ಅವನು ತನ್ನ ಸರತಿಗಾಗಿ ಕಾಯಬೇಡವೇ ?" ಎಂದು ಮೋರೆ ನೋಡಿದ ತಿಂಮ.

ತೊಂಭತ್ತೇಳು


MSP 1907

## ಅನುಭವ

ತಿಂಮನ ತಲೆ ತುಂಬಿದ್ದಿತು; ರಸ್ತೆಯ ಮಧ್ಯೆ ಹೋಗುವಾಗಲೂ ಏನೋ ಯೋಚನೆ ಮಾಡುತ್ತ ನಡೆದಿದ್ದ. ಹತ್ತಾರು ಬಾರಿ ಚೀರಿಸಿ, ಸನಿಯ ಬಂದರೂ ಮೋಟಾರಿಗೆ ಹಾದಿ ಬಿಡಲಿಲ್ಲ. ಕಾರು ಬಹು ಹತ್ತಿರ ಬಂದಿತು. ತಿಂಮನನ್ನು ಒಯ್ಯಲು ಯಮನಿಗೆ ಅವಸರವಿಲ್ಲದುದರಿಂದ ತಿಂಮ ಸಾವಿನಿಂದ ಪಾರಾದ.

ಕಣ್ಣು ಕಿಸಿದು ತಿಂಮ ಸಿಟ್ಟಿನಿಂದ ಗಾಡಿ ನಡಿಸುವವನ ಮೇಲೆ ಜೋರು ಮಾಡಿದ.

"ಕಲಿಯುವವನು ತುಂಬಿದ ರಸ್ತೆಯಲ್ಲಿ ಏಕಯ್ಯಾ ಬಂದದ್ದು ?"

"ಹದಿನೈದು ವರ್ಷದಿಂದ ಗಾಡಿ ನಡೆಸುತ್ತಿದ್ದೇನೆ ಸ್ವಾಮಿ. ನನಗೇ ಅನುಭವ ವಿಲ್ಲವೇನು ? ನೀವೇ ಅಡ್ಡ ಬಂದಿರಿ"

"ಹಾಗಾದರೆ ನನಗಿಲ್ಲವೇ ಅನುಭವ? ಮೂವತ್ತು ವರ್ಷದಿಂದ ನಡೆಯುತ್ತಲಿದ್ದೇನೆ ನಾನು."

O O O

## ಯಾವುದು ಅನ್ಯಾಯ?

ತಿಂಮನ ಗೆಳೆಯರೊಬ್ಬರ ಮನೆಗೆ ಬೆಂಕಿ ಬಿದ್ದಿತು. ಬಹಳ ನಷ್ಟವಾಯಿತು; ಸಹಾನುಭೂತಿ ತೋರಿದ ತಿಂಮನ ಮುಂದೆ ಆ ಗೆಳೆಯರು ಗೋಳು ತೋಡಿಕೊಂಡರು, "ಹಿತ್ತಲಲ್ಲಿ ಮಲಗಿದ್ದ ಕತ್ತೆಯೂ ಸತ್ತು ಹೋಗಬೇಕೆ ಪಾಪ ? ಸದ್ಯ ನನ್ನ ದೈವವು ಚೆನ್ನಾಗಿದ್ದಿತು; ನಾನು ಬದುಕಿಕೊಂಡೆ"

"ಬಹಳ ಅನ್ಯಾಯವಾಯಿತು" ಎಂದ ತಿಂಮ.

## ಐದನೇ ನಂಬರ ಸೌಜನ್ಯ

ಬಾನುಲಿಯಲ್ಲಿ ಹಾಡಲು ತನಗೆ ಅನುವು ಮಾಡಿಕೊಡಬೇಕೆಂದು ತಿಂಮ ಒಂದು ಬಾರಿ ಅರಿಕೆ ಮಾಡಿಕೊಂಡ. ಅವನಿಗೆ ಬಂದ ಉತ್ತರವನ್ನು ಓದಿದಾಗ ಅವನ ಆನಂದವು ಅಳತೆ ಮೀರಿತು. ಬಾನುಲಿ ಅಧಿಕಾರಿಗಳ ಸೌಜನ್ಯ ಸಭ್ಯತೆಗೆ ತಲೆದೂಗಿ ಈ ಪತ್ರವನ್ನು ಊರ ತುಂಬ ತೋರಿಸಿದ.

"ತಮ್ಮ ಪತ್ರವು ಕೈಸೇರಿತೆಂದು ತಿಳಿಸಲು ಈ ದಾಸನು ಹೆಮ್ಮೆ ಪಡುತ್ತಾನೆ. ನಿಮ್ಮಂತಹ ಶ್ರೇಷ್ಠ ಕಲಾವಿದರ ಕೃಪಾಕಟಾಕ್ಷಗಳಿಂದ ಬಾನುಲಿಯ ಉದ್ಧಾರವು ತಪ್ಪದೆ ಆದೀತೆಂಬ ವಿಶ್ವಾಸವು ನಮಗಿದೆ. ಮಹಾಸ್ವಾಮಿ, ಇದೇ ಫೆಬ್ರುವರಿ ೨ಂನೆಯ ತೇದಿ ತಾವು ಬಾನುಲಿ ಕೇಂದ್ರಕ್ಕೆ ಧಾವಿಸುವಿರಾ.

ಇತಿ ನಿಮ್ಮ ದಾಸಾನುದಾಸ."

ಈ ಕಾಗದದೊಟ್ಟಿಗೆ ತಾನು ಕಳುಹಿದ ಕಾಗದವೂ ಪರಿಪಾಟಿನಿಂದ ಪರತು ಬಂದಿದ್ದಿತು. ಅದರ ಎಡಮೂಲೆಯಲ್ಲಿ ಚಿಕ್ಕದಾಗಿ ಯಾರೋ ಬರೆದಿದ್ದರು.

'ಈ ಕತ್ತೆಯನ್ನು ಒದರಲು ಕರೆಯಿರಿ. ಐದನೇ ನಂಬರ ಪತ್ರದ ಮಾದರಿ ಬರೆಯಬೇಕು ಇದಕ್ಕೆ' ಎಂದಿದ್ದಿತು.

## ಹೆಸರು ಹಾಳುಮಾಡುವ ಖಾತೆ

ತಿಂಮನ ಹಳೆಯ ಪರಿಚಯದವನೊಬ್ಬನು ರಸ್ತೆಯಲ್ಲಿ ಕಂಡಾಗ ಉಭಯಕುಶಲೋಪರಿ ಸಾಗಿತು.

" ಏನಯ್ಯಾ, ಈಗ ಮಾಡುತ್ತಿ ? "

" ಇದ್ದೇನೆ ಸ್ವಾಮಿ, ಪೋಲೀಸ ಖಾತೆಯಲ್ಲಿ "

" ಆ ಖಾತೆಗೆ ಏಕೋ ಸೇರಿದಿ ? ಹೆಸರು ಹಾಳಾಗುತ್ತದೆ ಅಲ್ಲಿ "

" ಅದೇಕೆ ಸ್ವಾಮಿ, ಪೋಲೀಸ ಖಾತೆಯಲ್ಲಿ ಹೆಸರು ಹಾಳಾಗುತ್ತೆ ?" ಸಿಪಾಯಿ ಕೇಳಿದ.

" ಅಲ್ಲವೋ, ಈಗ ನಿನ್ನ ನಂಬರು ಎಷ್ಟೋ ? "

" ೧೧೫ ಕಣ್ರೀ "

" ಬಂಗಾರದಂತಹ ಬಸವಣ್ಣೆಪ್ಪ ಅನ್ನುವ ಹೆಸರು ಬಿಟ್ಟು ಈ ದರಿದ್ರ ೧೧೫ ಬಂದರೆ ಹೆಸರು ಹಾಳಾಗಲಿಲ್ಲವೇನೋ ? " ಎಂದ ತಿಂಮ.

## ಮಂಣು


ತಿಂಮನ ಪರಿಚಯದವರೊಬ್ಬರಿಗೆ ಮನೆಕಟ್ಟಿಸುವ ಹುಚ್ಚು. ಹೋಗಬಾರದಲ್ಲೆಲ್ಲ ಹೋಗಿ ಕಾಣಬಾರದವರನ್ನೆಲ್ಲ ಕಂಡು ಕೇಳಬಾರದನ್ನೆಲ್ಲ ಕೇಳಿ ಮನೆಗೆ ಬೇಕಾಗುವ ಮುಟ್ಟನ್ನು ಜಮ ಮಾಡಿಕೊಂಡರು. ಕಡೆಗೆ ಬಂದು ತಿಂಮನನ್ನೂ ಕಂಡರು.

"ನನ್ನ ಕೈಯಿಂದೇನಾಗಬೇಕು ಹೇಳಿ ಬಿಡಿ" ಎಂದು ಉದಾರ ಹೃದಯ ತೋರಿದ ತಿಂಮ.

"ಬಾಕಿ ಸಾಮಾನು ಎಲ್ಲವನ್ನೂ ದೊರಕಿಸಿದ್ದೇನಯ್ಯ, ಕೊಂಚ ಮಂಣು ಮಾತ್ರ ಬೇಕಾಗಿದೆ" ಎಂದು ಕಾಡಹತ್ತಿದರು.

"ನಿಮ್ಮೂರ ಗೌಡರು ನನಗೆ ತುಂಬ ಪರಿಚಯ. ಅವರಿಗೆ ಒಂದು ಪತ್ರವನ್ನು ಕೊಡುತ್ತೇನೆ" ಎಂದವನೆ ಒಂದೇ ಸಾಲು ಬರೆದು ಕೊಟ್ಟ—

**'ಈ ಚೀಟಿ ತಂದವರಿಗೆ ಮಂಣು ಕೊಡಿರಿ'**


ಸಿಂಹ

# ಕಂಣ ಪರೀಕ್ಷೆ

ತಿಂಮನ ಕಣ್ಣಿಗೆ ಕನ್ನಡಕ ಬೇಕಾಯಿತು, ಒಂದು ಬಾರಿ. ಕಣ್ಣ ವೈದ್ಯನ ಕುರ್ಚಿಯನ್ನೇರಿ ಕಾಲು ಚಾಚಿ ಸೆಟೆದು ಕುಳಿತ. ಅಕ್ಷರ ಮಾಲೆಯ ಪಟವನ್ನು ಗೋಡೆಗೆ ಹಾಕಿ, ಕಣ್ಣಿಗೆ ಕಾಜುಗಳನ್ನಿಕ್ಕಿ ವೈದ್ಯ

"ಓದಿ ನೋಡು ತಿಂಮಾ"

"ಊ........ಹೂಂ"

ಗಾಜನ್ನು ಬೇರೆ ಮಾಡಿ "ಈಗ?"

"ಊ....ಹೂಂ"

"ಈಗ?"

"ಊ ಹೂಂ."

ಇದ್ದ ಗಾಜುಗಳೆಲ್ಲವೂ ಮುಗಿದವು. ತಿಂಮ ಮಾತ್ರ ಊ ಹೂಂ ಎನ್ನುತ್ತಲೇ ಇದ್ದ.

ನೇತ್ರ ವೈದ್ಯ ಕೋಪಿಸಿಕೊಂಡು

"ಏನೋ ತಿಂಮ ಚೇಷ್ಟೆ?"

"ನನಗೆ ಓದು ಬರೋಲ್ಲ ಸ್ವಾಮಿ"

## ಬರೆಹಗಾರರ ಸ್ವಾತಂತ್ರ್ಯ

" ತಿಂಮಾ "

" ಏನಪ್ಪಾ ? "

" ಇಷ್ಟು ದಿನಗಳು ಎಲ್ಲಿಯೋ ಹೋಗಿದ್ದಿ, ಕಾಣಲೇ ಇಲ್ಲವಲ್ಲೊ ? "

" ಬರೆಹಗಾರರ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಹೋಗಿದ್ದೆನಪ್ಪಾ "

" ಸ್ವಾತಂತ್ರ್ಯವನ್ನು ತಂದಿಯೇನೋ ? "

" ತಂದಿದ್ದೇನಪ್ಪಾ, ಪೂರ್ಣ ಸ್ವಾತಂತ್ರ್ಯವು ಬಂದಿದೆ "

" ಹಾಗಾದರೆ ಬರೆಹಗಾರರು ಏನನ್ನಾದರೂ ಬರೆಯ ಬಹುದೇನೋ ಇನ್ನು ಮೇಲೆ ? "

" ಅಲ್ಲವಪ್ಪಾ– ಈ ಹೊಸ ಸ್ವಾತಂತ್ರ್ಯದ ಮೇರೆಗೆ ಬರೆಹಗಾರರು ಬೇಕಾದರೆ ಬರೆಯಬಹುದು, ಬೇಡವಾದರೆ ಸುಮ್ಮನೆ ಕೂಡಬಹುದು "

## ಸರ್ವಾಸ್ಪತ್ರೆಗಳು

ಹೊಸ ಡಾಕ್ಟರರೊಬ್ಬರ ಮುಂದೆ ತಿಂಮ ಕಂತೆ ಬಿಚ್ಚಿದ. ಅಳತೆ ಮೀರಿತು ಅವನ ಹೆಚ್ಚಳ.

" ಈ ಊರಲ್ಲಿಯ ಎಲ್ಲ ಆಸ್ಪತ್ರೆಗಳನ್ನೂ ನೋಡಿದ್ದೇನೆ ಡಾಕ್ಟರೇ– ನಾನು ಇದ್ದು ಬಾರದ ಆಸ್ಪತ್ರೆಯೇ ಇಲ್ಲ ನೋಡಿ ಇಲ್ಲಿ "

ಸಿಕ್ಕು ಬಿದ್ದ ತಿಂಮ ಎಂದು ಡಾಕ್ಟರು ತುಂಟ ನಗುವಿನೊಂದಿಗೆ ಪ್ರಶ್ನೆ ಹಾಕಿದರು.

" ಹೆರಿಗೆಯ ಆಸ್ಪತ್ರೆಯಲ್ಲಿಯೂ ಇದ್ದಿಯೇನೋ ತಿಂಮಾ ? "

" ಅಲ್ಲೇ ಸ್ವಾಮಿ, ನಾನು ಹುಟ್ಟಿದ್ದು "

## ಅಲ್ಲಿಯ ಅಭ್ಯಾಸ

ತಿಂಮ ತನ್ನ ಗೆಳೆಯರೊಟ್ಟಿಗೆ ಮಾತನಾಡುವಾಗೆಲ್ಲ ಬುಜವುಟ್ಟಿ ಅಲುಗಾಡಿಸುತ್ತಿದ್ದ. ಅದನ್ನು ಸಹಿಸಲಾರದ ಗೆಳೆಯನೊಬ್ಬನು ಗೊಣಗುಟ್ಟಿದ.

"ಇದೇನೋ ತಿಂಮಾ ನಿನ್ನ ಅಭ್ಯಾಸ! ಹೀಗೇಕೆ ಮಾತಿಗೊಮ್ಮೆ ಎದುರಿದ್ದವರನ್ನು ಮುಟ್ಟಿ ಮುಟ್ಟಿ ಮಾತನಾಡುತ್ತೀ?"

"ಅಭ್ಯಾಸ ಕಣಯ್ಯಾ ಅದು, ಮೊದಲಿನಿಂದಲೂ ಸ್ತ್ರೀಯರೊಟ್ಟಿಗೇ ನನ್ನ ಸ್ನೇಹ ಹೆಚ್ಚು."

O O O

## ಅತಿ ಸುಲಭ ಮಾರ್ಗ?

ತಿಂಮನ ಗೆಳೆಯನೊಬ್ಬ ಮನೆಗೆ ಬಂದ. ಆ ಈ ಮಾತನಾಡಿದ ನಂತರ ತಿಂಮನ ಮಗನ ಹೆಸರೇನೆಂದು ಗೆಳೆಯ ವಿಚಾರಿಸಿದ.

"ಅವನ ಹೆಸರು ಮದನ"

"ಹೆಸರೇನೋ ಚೆನ್ನಾಗಿದೆಯಾಗಲಿ ಇದನ್ನು ನೆನಪಿನಲ್ಲಿಡುವದೇ ಕಷ್ಟವಲ್ಲೋ ತಿಂಮಾ?"

"ಹಾಗಾದರೆ ಈ ಮೂರು ಹೆಸರುಗಳನ್ನು ಜ್ಞಾಪಿಸಿಕೋ. ಅವುಗಳ ಮೊದಲ ಅಕ್ಷರಗಳು ಸೇರಿದರೆ ಅವನ ಹೆಸರೇ ಆಗುತ್ತದೆ."

"ಯಾವ ಮೂರು ಹೆಸರುಗಳೋ?"

"ಮಕರಧ್ವಜ, ದಯಾನಂದ, ನಚಿಕೇತ."

## ತುಪ್ಪದ ವಾಸನೆ?

ಹಳ್ಳಿಯ ಕೆಂಚ, ದೊಡ್ಡೂರ ದಡ್ಡ, ಪಟ್ಟಣದ ಒಂದೆಡೆ ಸೇರಿ ಮಾತನಾಡುತ್ತ ಕುಳಿತಿದ್ದರು. ಒಳ್ಳೆ ಎಮ್ಮೆಯ ಬೆಣ್ಣೆಯನ್ನು ಅಲ್ಲ ಕ್ಷಮಿಸಿ–ಎಮ್ಮೆಯ ಒಳ್ಳೆ ಬೆಣ್ಣೆಯನ್ನು ಪಕ್ಕದ ಮನೆಯಲ್ಲಿ ಕಾಸುವಾಗ ಗಮಗಮ ವಾಸನೆ ಬಂದಿತು. ಹಳ್ಳಿಯ ಕೆಂಚ ಕೂಡಲೆ ಮೂಗೇರಿಸಿ "ಎಷ್ಟು ಚೆನ್ನಾಗಿದೆ ತುಪ್ಪದ ವಾಸನೆ" ಎಂದ.

ದೊಡ್ಡೂರ ದಡ್ಡ ನಕ್ಕು ನಕ್ಕು ಬಿದ್ದು ಕೇಳಿದ. "ಇದಕ್ಕೇ ಹಳ್ಳಿಯ ಕೆಂಚ ಅನ್ನೋದು. ತುಪ್ಪಕ್ಕೆ ವಾಸನೆ ರುಚಿ ಎಲ್ಲಾದರೂ ಇರುತ್ತೆಯೇ? ತುಪ್ಪ ಅಂದರೆ ಅದೊಂದು ಬಗೆಯ ನೀರು ಅಲ್ವೇನೊ?"

ಪಟ್ಟಣದ ತಿಂಮ ಗಹ-ಗಹಿಸಿ ನಕ್ಕು ಬಿಟ್ಟ. "ಅಯ್ಯೋ ಮಂಕುಗಳೇ, ತುಪ್ಪದ ವಾಸನೆ ಅಂತ ಹಳ್ಳಿಯ ಕೆಂಚನ ಹೇಳಿಕೆ. ತುಪ್ಪ ಒಂದು ಬಗೆಯ ನೀರು ಎಂದು ದೊಡ್ಡೂರ-ದಡ್ಡನ ತರ್ಕ. ನಾನೇನು ಕಿವುಡನೇ, ತುಪ್ಪವನ್ನು ಕೇಳದಲೇ ಇರಲಿಕ್ಕೆ? ತುಪ್ಪ ಎಂಬುದು ಹೋಟೆಲಲ್ಲಿ ಬಟ್ಟಲಿಗೆ ಸವುಟು ಬಡೆದಾಗ ಹುಟ್ಟುವ ಶಬ್ದದ ಹೆಸರು."

## ಪತ್ರಬಂದಾಗ

ವಿದ್ಯಾವಂತ ತಿಂಮನಿಗೆ ಒಂದು ಪತ್ರವು ಬಂದಿತು. ತನ್ನ ಮಗನಿಗೆ ಕೊಟ್ಟು ತಿಂಮ ಓದು ಎಂದು ಹೇಳಿದ. ಸರಪಣಿಯಂತಿದ್ದ ಆ ಅಕ್ಷರಗಳನ್ನು ಓದಲಾರದೆ ತಿಂಮನ ಮಗನು ಕಾ—ಮಾ ಮಾಡುತ್ತಲಿದ್ದ.

"ನಿನ್ನ ತಲೆ, ಓದಲಿಕ್ಕೆ ಬರುವದಿಲ್ಲ ನಿನಗೆ. ಇಲ್ಲಿ ತಾ, ಓದಿಸಿಕೊಂಡು ಬರುತ್ತೇನೆ" ಎಂದು ಕಾಗದವನ್ನು ಕಸಿದುಕೊಂಡು ಹೊರಗೇ ನಡೆದ ತಿಂಮ.

## ಪರಸ್ಥಳಿ

ಸೆರೆಯ ಬರ ತೀರಿಸಿಕೊಳ್ಳಲು ತಿಂಮ ಒಣಗಿದ ತನ್ನೂರಿಂದ ಹಸಿಯಿದ್ದ ಸನಿಯದ ಊರಿಗೆ ಹೋಗಿದ್ದ. ಹಬ್ಬ ಮುಗಿಸಿ ಹೊರಗೆ ತಿರುಗಾಡಲು ಬಂದಾಗ ರಸ್ತೆಯಲ್ಲಿಬ್ಬರ ಮಾತು ನಡೆದಿತ್ತು. ಅವರಿಗೂ ಹಬ್ಬವು ಕಡಿಮೆಯಾಗಿರಲಿಲ್ಲ.

"ಏನು ಬಿಸಿಲಯ್ಯಾ ಇದು, ಬಹು ತೀಕ್ಷ್ಣವಿದ್ದಾನೆ ಸೂರ್ಯ" ಎಂದ ಒಬ್ಬ.

"ನಿನ್ನ ತಲೆ. ಚಂದ್ರನನ್ನು ನೋಡಿ ಸೂರ್ಯ ಎನ್ನುತ್ತೀಯಲ್ಲಯ್ಯಾ? ನಿನಗೆ ಸೆರೆ ಜೋರಾಗಿದ್ದಂತಿದೆ" ಎಂದು ವಾದ ಹೂಡಿದ ಇನ್ನೊಬ್ಬ. ಆಕಾಶದಲ್ಲಿದ್ದುದು ಸೂರ್ಯನೋ ಅಥವಾ ಚಂದ್ರನೋ ಎಂಬ ವಾದಗ್ರಸ್ತ ವಿಷಯದಲ್ಲಿಯೇ ಇಬ್ಬರ ಮಧ್ಯೆ ಯುದ್ಧವಾಗುವ ಸ್ಥಿತಿ ಬಂದಿತು. ಇವರೀರ್ವರಿಗೆ ತಿಂಮ ಯು. ನೋ. ಓ. ಆಗಬೇಕಾಯಿತು.

"ಮೇಲಿರುವದು ಸೂರ್ಯನೋ ಅಥವಾ ಚಂದ್ರನೋ ಸ್ವಾಮಿ?" ಎಂದೊಬ್ಬ ತಿಂಮನನ್ನು ಕೇಳಿದ.

ಮೇಲೂ ಕೆಳಗೂ, ಸುತ್ತುಮುತ್ತಲೂ ನೋಡಿ ತಿಂಮ ಅನುಮಾನಿಸುತ್ತ ನುಡಿದ.

"ನಾನು ಪರಸ್ಥಳದವನಯ್ಯಾ, ನಮ್ಮೂರಾದರೆ ಹೇಳುತ್ತಿದ್ದೆ"

## ಹುಚ್ಚಾಸ್ಪತ್ರೆಯಲ್ಲಿ

ಜಾಣ ತಿಂಮನಿಗೊಮ್ಮೆ ಹುಚ್ಚರ ಆಸ್ಪತ್ರೆ ನೋಡಬೇಕೆಂದು ಮನ ಸಾಯಿತು. ಪರಿಚಯದ ತಲೆವೈದ್ಯರೊಬ್ಬರು ಇಲ್ಲ ಎನ್ನಲಾರದೆ ಕರ ದೊಯ್ದು ಒಳಗೆ ಬಿಟ್ಟರು. ಕೂಡಲೆ ಹಲವಾರು ಹಚ್ಚರು ತಿಂಮನನ್ನು ಸುತ್ತುಗಟ್ಟಿದರು. ಒಬ್ಬ ಹುಚ್ಚನು ಬಹು ಸಲಿಗೆಯಿಂದ ಭುಜಕ್ಕೆ ಕೈ ಕೊಟ್ಟು ಪ್ರಶ್ನೆಮಾಡಿದ.

" ಯಾರು ಸ್ವಾಮಿ. ತಾವು ? "

"ನಾನು ಸ್ಕೂಲು ಮಾಸ್ತರ" ಎಂದ ತಿಂಮ. ಕೂಡಲೇ ಉತ್ತರ ಬಂದಿತು ಹುಚ್ಚನಿಂದ.

" ಅಯ್ಯೊ ಹುಚ್ಚ! ಮಾಸ್ತರನಂತೆ ಮಾಸ್ತರ. ಪರವಾ ಇಲ್ಲ ಬನ್ನಿ. ಇಲ್ಲಿ ಆ ಹುಚ್ಚನ್ನೂ ಬಿಡಿಸುತ್ತಾರೆ. ಮೊನ್ನೆ ಬಿಡುಗಡೆಯಾಗಿ ಹೋದ ಹುಚ್ಚನು ಬಂದದಿನವೆಲ್ಲ ತಾನು ಶಾಲೆ ಇನ್ಸ್ಪೆಕ್ಟರು ಎಂದು ಹೇಳಿಕೊಳ್ಳು ತ್ತಲಿದ್ದ. ಹೋಗುವಾಗ ತಿಳಿಯಿತು ಅವನಿಗೆ, ತಾನು ಹುಚ್ಚನೆಂದು."

## ಕ್ಷಮಾಪಣೆ

ಬಸ್ಸಿನಲ್ಲಿ ಕುಳಿತಾಗ ಆಕಸ್ಮಾತ್ ತಿಂಮನಕಾಲು ಬದಿಯಿದ್ದವರಿಗೆ ತಗುಲಿತು. ಕಣ್ಣು ಕೆಂಪುಮಾಡಿ ತಿಂಮನನ್ನು ದುರುದುರು ನೋಡಿದರು ಆ ಮಹಾಶಯರು.

" ಕ್ಷಮಿಸಬೇಕು " ಎಂದು ಸೌಮ್ಯವಾಗಿ ಕೋಳಿಕೊಂಡ ತಿಂಮ.

" ಏನು ನಿನ್ನ ತಲೆ ಕ್ಷಮಿಸೋದು ? ಮೊದಲು ಕಾಲಿನಿಂದ ಒದೆದು ಆ ಮೇಲೆ ಕ್ಷಮಾಪಣೆ ಕೇಳೋದಾ ? "

" ಪರಪಾಟು ಸ್ವಾಮಿ. ಇನ್ನು ಮೇಲೆ ಮೊದಲೇ ಕ್ಷಮಾಪಣೆ ಕೇಳಿ ಆ ಮೇಲೆ .... "

## ಪ್ರಾಣಿದಯೆ

ಪ್ರಾಣಿ ದಯಾ ಪ್ರಚಾರಕ ಸಂಘದ ಕಾರ್ಯಕರ್ತರು ಒಂದು ಬಾರಿ ತಿಂಮನ ಊರಿಗೆ ಬಂದರು. ಚಂದಾ ಕೇಳಲು ಊರಲ್ಲಿ ಹೊರಟು ಎಲ್ಲ ಕಡೆಗೂ ವಿಮುಖರಾಗಿ ಕಡೆಗೆ ತಿಂಮನ ಬಳಿ ಬಂದು ಕುಳಿತರು.

"ಈ ಊರಲ್ಲಿ ಒಂದು ಬಿಡಿ ಕಾಸು ಕೂಡ ದೊರೆತಿಲ್ಲ ಸ್ವಾಮಿ-ನೀವೇ ಏನಾದರೂ ಮಾಡಿ ಚಂದಾ ವಸೂಲು ಮಾಡಬೇಕು. ಮೂಕ ಪ್ರಾಣಿಗಳಿಗಾಗಿ ನಿಮಗೆ ದಯೆ ಇಲ್ಲವೇ ? " ಎಂದರು.

"ಅಯ್ಯೊಪಾಪ, ಮೂಕ ಪ್ರಾಣಿಗಳಿಗೆ ದಯೆತೋರದಿದ್ದರೆ ಹೇಗೆ? ಆದರೆ ನೋಡಿ, ಈ ಊರಲ್ಲಿ ಚಂದಾ ವಸೂಲು ಆಗುವದು ಬಹುಕಷ್ಟ. ಏನಾದರೂ ಮನರಂಜನ ಕಾರ್ಯಕ್ರಮವಿದ್ದರೆ ಹಣದ ಸುರಿಮಳೆ ಆಗುತ್ತೆ" ಎಂದು ಸೂಚಿಸಿದ ತಿಂಮ

"ಆಗತ್ಯ ಆಗಲಿ, ನಾವೇಕೆ ಬೇಡ ಎನ್ನುತ್ತೇವೆ. ಏನು ಕಾರ್ಯಕ್ರಮ ಇಡಬೇಕು ಹೇಳಿ. "

"ಕಾಲಿಗೆ ಚೂರಿ ಕಟ್ಟಿ ಎರಡು ಕೋಳಿಗಳನ್ನು ಕಡಿದಾಡಲು ಬಿಟ್ಟರೆ ಸಾಕು. ಪ್ರಾಣಿದಯಾ ಪ್ರಚಾರಸಂಘಕ್ಕೆ ಹಣ ಸುರಿಮಳೆ. ಸತ್ತರೆ ಸಾಯಲಿ ಒಂದು ಕೋಳಿ; ಎರಡು ರೂಪಾಯಿತಾನೆ ಅದರ ಹಣೆಯ ಬರಹ ? "

## ಗಡಿಬಿಡಿ

ತಾಯಿಯನ್ನು ಊರಿಗೆ ಕಳಿಸಲು ತಿಂಮ ರೇಲ್ವೆ ನಿಲ್ದಾಣಕ್ಕೆ ಬಂದ. ಹಾಸಿಗೆ ಪೆಟ್ಟಿಗೆಗಳನ್ನು ಪೋರ್ಟರನಿಂದ ಹೊರಿಸಿತಂದು ಗಾಡಿಯಲ್ಲಿರಿಸಿ, ತಾಯಿಯನ್ನೂ ಕೂಡಿಸಿದ. ಗಾಡಿ ಹೊರಡುವ ಸಮಯವಾಯಿತು. ಕೂಲಿಗಾಗಿ ಕೈಯೊಡ್ಡಿ ಪೋರ್ಟರ ಮುಂದೆ ನಿಂತ. ಗಾಡಿ 'ಕೂ' ಮಾಡಿ ಕದಲಿತು.

ಗಡಿಬಿಡಿಯಲ್ಲಿ ತಿಂಮ ಕೂಲಿಯನ್ನು ತಾಯಿಗೆ ಕೊಟ್ಟು, ಪೋರ್ಟರನ ಪಾದ ಮುಟ್ಟಿ ನಮಸ್ಕಾರ ಮಾಡಿದ.

## ಬರೀ ಬೋರ್ಡು

"ಇಲ್ಲಿ ಒಳ್ಳೆಯ ಹಿಂಗು ಮಾರಲ್ಪಡುವದು" ಎಂದೊಂದು ಬೊರ್ಡು ನೇತಾಡುತ್ತಿದ್ದಿತು, ಒಂದು ಅಂಗಡಿಯ ಮುಂದೆ. ತಿಂಮ ಅಂಗಡಿಯಲ್ಲಿ ತೂರಿ ಸಲಹೆ ಕೊಟ್ಟ.

"ಒಳ್ಳೆಯದು ಎಂದು ನೀವೇ ಹೇಳಿಕೊಳ್ಳುವುದು ಅಷ್ಟು ಒಳ್ಳೆಯದಲ್ಲ, ಆ ಮಾತನ್ನು ಕೊಂಡವರು ಹೇಳಬೇಕು."

"ಇಲ್ಲ ಹಿಂಗು ಮಾರಲ್ಪಡುವದು" ಎಂದಾಗಿದ್ದಿತು, ಇನ್ನೊಮ್ಮೆ ಬಂದಾಗ.

"ಇಲ್ಲಿ" ಏಕಯ್ಯಾ!? ಬೇರೆ ಎಲ್ಲಾದರೂ ಮಾರುವದಿದ್ದರೆ ಇಲ್ಲಿ ಬೋರ್ಡು ಇರುತ್ತೇನು?"

ಪುನಃ ಬಂದು ನೋಡಿದಾಗ "ಹಿಂಗು ಮಾರಲ್ಪಡುವುದು" ಎಂದಿದ್ದಿತು

"ಮಾರಲಿಕ್ಕಲ್ಲದಿದ್ದರೆ ಯಾರಾದರೂ ದಾನ ಕೊಡುತ್ತಾರೆಯೆ?" ಎಂದು ಸವಾಲು ಹೂಡಿದ.

"ಹಿಂಗು" ಎಂದಿಷ್ಟೆ ಉಳಿದಿದ್ದಿತು.

"ಮೂರು ಮೈಲಿ ದೂರದಿಂದಲೇ ವಾಸನೆ ಬರುತ್ತೆ, ಹಿಂಗು ಎಂದು ಬೇರೆ ಹೇಳಬೇಕೆ?"

ಬರೀ ಬೋರ್ಡು ಮಾತ್ರ ನೇತಾಡುತ್ತಿದ್ದಿತು.

"ಅಯ್ಯೋ! ಬರೀ ಬೋರ್ಡು" ಎಂದು ಮನದಣಿಯೆ ನಕ್ಕ ತಿಂಮ.

## ಉತ್ಸಾಹ ಸಾಲದು

ಪಾನನಿರೋಧನಾಧಿಕಾರಿಗಳು ತಿಂಮನ ಹಳ್ಳಿಗೆ ಬಂದರು. ಮೆರವಣಿಗೆ, ಸಭೆ, ಭಾಷಣ, ಆಟಪಾಟಗಳು, ಬಹು ವಿಜೃಂಭಣೆಯಿಂದ ಜರುಗಿದವು. ಕಾರ್ಯಕ್ರಮದ ಕೊನೆಗೆ ಅಧಿಕಾರಿಗಳು ಹಳ್ಳಿಗರನ್ನು ಅಭಿನಂದಿಸಿ ಉತ್ತಮ ಭಾಷಣವನ್ನು ಮಾಡಿದರು.

"ಇಂದಿನ ಕಾರ್ಯಕ್ರಮಕ್ಕೆ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ನಾನು ತುಂಬಾ ಋಣಿಯಾಗಿದ್ದೇನೆ. ನಿಮ್ಮೆಲ್ಲರ ಸಹಕಾರವಿದ್ದರೆ ಪಾನ ನಿರೋಧವು ಜಯಶಾಲಿಯಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ. ಈ ಉತ್ಸವದಲ್ಲಿ ಊರ ಜನರು ತೋರಿಸಿದ ಉತ್ಸಾಹಕ್ಕೆ ನಾನು ಮನಸೋತಿದ್ದೇನೆ." ಎಂದರು.

ಹಳ್ಳಿಗರ ಪರವಾಗಿ ತಿಂಮ ಉತ್ತರಿಸಿದಃ—

"ಅಧಿಕಾರಿಗಳು ಅಪ್ಪಣೆ ಕೊಡಿಸಿದ ಮೇರೆಗೆ ನಮ್ಮೂರ ಜನರು ಕೊಂಚ ಉತ್ಸಾಹವನ್ನು ತೋರಿಸಿದ್ದಾರೆ, ನಿಜ. ಆದರೆ ಇದು ಸಾಲದು. ಸೆರೆ ಅಂಗಡಿಯ ಮುಂದೆ ನಿತ್ಯವೂ ಇರುತ್ತಿದ್ದಷ್ಟು ಉತ್ಸಾಹ ಆನಂದಗಳಲ್ಲಿಯ ಒಂದು ನೂರಾಂಶವೂ ಇಂದು ಇಲ್ಲ. ಪಾನನಿರೋಧನಾಧಿಕಾರಿಗಳು ಇನ್ನೊಮ್ಮೆ ನಮ್ಮೂರಿಗೆ ಬಂದಾಗ ನೀವೆಲ್ಲರೂ ಮೊದಲಿನಂತೆ ಉತ್ಸುಕರಾಗಿರಬೇಕು. ಸಾಕಷ್ಟು ಸೆರೆ ಸುರಿಸಿ, ನಿಮ್ಮ ಆನಂದವನ್ನೂ ನೂರರಷ್ಟು ಹೆಚ್ಚಿಸಿ ಪಾನನಿರೋಧ ಕಾರ್ಯವನ್ನು ನಮ್ಮೂರಲ್ಲಿ ಜಯಶಾಲಿಯಾಗಿ ಮಾಡಲಿ ಎಂದು ಅಧಿಕಾರಿಗಳನ್ನು ಕೇಳಿಕೊಳ್ಳುತ್ತೇನೆ."

## ಈಗೇನು ಮಾಡಬೇಕು?

ಓರ್ವ ಚಿರಪರಿಚಿತ ಗೆಳೆಯ ತಿಂಮನಲ್ಲಿ ಸಹಾಯ ಬೇಡಲು ಬಂದ. ತಿಂಮ ಆದ್ಯಂತ ವಿಚಾರಣೆ ನಡೆಸಿದ.

"ಏನಾದರೂ ನೌಕರಿ ಮಾಡಬೇಕಯ್ಯಾ. ಏಳು ವರ್ಷಗಳಿಂದ ಕುಳಿತು ತಿಂದರೆ ಹೇಗೆ ಜರುಗುತ್ತೆ? ನೌಕರಿ ದೊರೆಯದಿದ್ದರೆ ಯುದ್ಧ ವಂತೂ ಇದ್ದೇ ಇದ್ದಿತಲ್ಲ ಆಗ."

"ಆ ಯುದ್ಧ ಕಾಲದಲ್ಲಿಯೂ ನೌಕರಿ ದೊರೆಯಲಿಲ್ಲ ನನಗೆ" ಎಂದ ಗೆಳೆಯ.

"ಹಾಗಾದರೆ ಏನಾದರೂ ವ್ಯವಹಾರ ಮಾಡಬೇಕಿತ್ತು."

"ಅದನ್ನೂ ಮಾಡಿದೆ. ರೇಶನ್ ಕಾಲದಲ್ಲಿ ಊಟದ ಹೋಟೆಲ ಇಟ್ಟಿದ್ದೆ."

"ಏನಾಯಿತು?"

"ಅದರಲ್ಲಿ ಲುಕ್ಸಾನು ಆಯಿತು" ಎಂದ ಸ್ನೇಹಿತ.

"ಆ ಮೇಲೆ ಏನು ಮಾಡಿದಿ?"

"ದೇಶಸೇವೆ"

"ಅದರಲ್ಲಿಯೂ ಸಾಹುಕಾರನಾಗಲಿಲ್ಲವೇ?"

"ಇಲ್ಲ, ಅದಕ್ಕೇ ಈಗೇನು ಮಾಡಬೇಕೂ ಅಂತ"

"ಆತ್ಮಹತ್ಯ" ಎಂದು ತಿಂಮ ಯೋಗ್ಯ ಸಲಹೆ ಕೊಟ್ಟ.

# ಕಡಲೆ ಗುಗ್ಗರಿ

ಸಾಹುಕಾರ ಸೆಟ್ಟರು ರೈತನ ಬಿಟ್ಟೀ ಗಾಡಿ ಹಿಡಿದು, ಬಡ್ಡಿಯಲ್ಲಿ ಎತ್ತು ಕಟ್ಟಿಸಿ ಹಳ್ಳಿಗೆ ಹೊರಟರು. ಬೇರೆ ಕೆಲಸದ ಮೇಲೆ ಅದೇ ಹಳ್ಳಿಗೆ ಹೊರಟ ತಿಂಮನಿಗೆ ಗಾಡಿಯ ಹಿಂದೆ ನಡೆದು ಬರಲು ಅಪ್ಪಣೆಕೊಟ್ಟರು, ಜೊತೆಗಿರಲೆಂದು. ಅಟ್ಟಡವಿಯಲ್ಲಿ ನಡುರಾತ್ರಿಯಾದಾಗ ಹುಲಿಯ ಗುಡುಗು ಕೇಳಿ ಇಬ್ಬರ ಎದೆಯೂ ಹಾರಿತು. ಎತ್ತನ್ನು ಹುಲಿಗೆ ಒಪ್ಪಿಸಿ ಇಬ್ಬರೂ ಗಿಡವೇರಿದರು. ತಿರುಪತಿವೆಂಕಟರಮಣನಿಗೆ ಚಿನ್ನದ ನಾಮದಿಂದ ಊರ ಮಾರೆವ್ವನಿಗೆ ಕೋಳಿಯವರೆಗೆ ಆಸೆ ಹಚ್ಚಿ ಬೇಡಿಕೊಂಡು, ತಿಂಮ ಸೆಟ್ಟರಿಗೆ ಸಲಹೆಕೊಟ್ಟ.

"ಪ್ರಾಣ ಉಳಿವರೆ ಸಾಕು ಸೆಟ್ಟರೇ ! ಕನ್ಯಕಾಪರಮೇಶ್ವರಿಗೆ ಕಾಲು ಪಾವು ಕಡಲೆಗುಗ್ಗರಿ ಹಾಕಿಸುತ್ತೇನೆಂದು ಬೇಡಿಕೊಳ್ಳಿರಿ"

"ಕೊಂಚ ಇರಪ್ಪಾ ತಿಂಮಾ, ಏಕೆ ಅವಸರ? ಹುಲಿ ಆ ಬದಿ ಹೋಗುವಂತೆ ಕಾಣುತ್ತದೆ."

## ಗಂಡ-ಹೆಂಡತಿ

ತಿಂಮನಿಗೊಮ್ಮೆ ಊರಿಗೆ ಹೋಗಬೇಕಿತ್ತು. ಪಕ್ಕೆ ಮನೆಯ ರೈಲ್ವೆ ರಂಗರಾಯರು ಪಾಸು ಕೊಟ್ಟರು. ಅದು ಇಬ್ಬರಿಗಿದ್ದಿತು; ಗಂಡ-ಹೆಂಡತಿಗೆ. ತಿಂಮ ಒಬ್ಬನೇ ಹೊರಟ.

ತನ್ನ ಅಕ್ಕನನ್ನು ಊರಿಗೆ ಕಳುಹಲು ಬಂದ ತಿಂಮನ ಸ್ನೇಹಿತನೊಬ್ಬನಿಗೆ ಇದು ತಿಳಿಯಿತು.

"ನನ್ನ ಅಕ್ಕನಿಗೆ ಮತ್ತೊಂದು ತಿಕೇಟು ಏಕೋ, ಹಣಹಾಳು. ನಿನ್ನಲ್ಲಿ ಹೇಗೂ ಇಬ್ಬರಿಗೆ ಇದೆಯಲ್ಲ ಪಾಸು. ಅವಳನ್ನೂ ದಾಟಿಸಿಬಿಡು. ಸ್ತ್ರೀಯರ ಡಬ್ಬಿಯಲ್ಲಿ ಕೂಡಿಸುತ್ತೇನೆ" ಎಂದು ತಿಂಮನಿಗೆ ದುಂಬಾಲು ಬಿದ್ದ.

ದಾಕ್ಷಿಣ್ಯಕ್ಕೆ ಆಗಲಿ ಎಂದ ತಿಂಮ

ಊರು ಬಂದಿತು. ಸ್ತ್ರೀಯರ ಡಬ್ಬಿಗೆ ಓಡಿಬಂದ ತಿಂಮ. ಅಲ್ಲಿದ್ದುದು ಸಂಪೂರ್ಣ ವಿಧವೆ–ತಿಂಮನ ಕೈಯಲ್ಲಿರುವದು ಗಂಡ–ಹೆಂಡತಿಯ ಪಾಸು!

## ಹುಚ್ಚಾಸ್ಪತ್ರೆಯ ಹಿಂಬದಿಯಲ್ಲಿ

ತಿಂಮನಿಗೆ ತಿರುಗಾಡಲು ಹೋಗುವ ಬುದ್ಧಿಯಾಯ್ತು, ಒಂದು ಸಾಯಂಕಾಲ. ಅತ್ತ ಇತ್ತ ಅಲೆದು ಊರಹೊರಬಿದ್ದು ಸಾಧನಕೆರೆಯ ರಸ್ತೆ ಹಿಡಿದ. ಹಿಂಬದಿಯ ಗೋಡೆಯ ಮೇಲೆ ಹತ್ತಿ ನಿಂತಿದ್ದ ಹುಚ್ಚನನ್ನು ನೋಡುತ್ತ ತಿಂಮ ಹಾಗೆಯೇ ನಿಂತ. ಅವನ ವರ್ತನೆಗಿಂತ ಅವನ ಮೈಕಟ್ಟು, ದಷ್ಟಪುಷ್ಟ ದೇಹ ಮೆಚ್ಚುವಂತಿದ್ದವು.

"ಪಾಪ! ಈ ಹುಚ್ಚನು ಮೊದಲು ವ್ಯಾಯಾಮ ಶಾಲೆಯ ಮಾಸ್ತರನಿರಬೇಕು" ಎಂದುಕೊಳ್ಳುತ್ತ ತಿಂಮ ನಿಂತ. ಹುಚ್ಚನು ಕೈ ಮುಷ್ಟಿಯನ್ನು ಬಿಗಿಹಿಡಿದು ತೋಳು ಮಡಿಸಿ ಬಲಪರೀಕ್ಷೆ ಮಾಡಿಕೊಳ್ಳುತ್ತಿದ್ದುದನ್ನು ನೋಡುತ್ತ ಜಾಣ ತಿಂಮ ಬಾಯಿತೆರೆದು ನಿಂತ.

ಇದ್ದಕ್ಕಿದ್ದಂತೆ ಗೋಡೆಯಿಂದ ಧುಮಿಕಿದವನೇ ಆ ಹುಚ್ಚ ತಿಂಮನ ಮೇಲೆಯೆ ಬಂದ. ಹುಚ್ಚನು ಕತ್ತು ಹಿಚುಕುವನೆಂದು ಖಾತ್ರಿಯಾಯಿತು. ತಿಂಮ ಓಟಬಿಟ್ಟ. ಹುಚ್ಚ ಹಿಂಬಾಲಿಸಿದ. ತಿಂಮನು ಜೀವದ ಭಯದಿಂದ ಓಡಿ ಓಡಿ ಕಡೆಗೆ ಕಾಲಿಗೆ ಕಲ್ಲು ತಗಲಿ ನೆಲಕ್ಕುರುಳಿದ. ಹುಲಿಯಂತೆ ಹುಚ್ಚನು ಹಾರಿಬಂದ. ಸತ್ತೆ ಎಂದು ತಿಂಮ ಜೀವದಾಶೆ ತೊರೆದು ಕಣ್ಣು ಮುಚ್ಚಿದ. ಹುಚ್ಚನು ತಿಂಮನ ಬೆನ್ನು ಮುಟ್ಟಿ "ಔಟ್, ಈಗ ನಿನ್ನ ಸರತಿ, ಬಾ ಮುಟ್ಟು" ಎಂದವನೇ ಗಾಳಿಯ ವೇಗದಿಂದ ವಾಪಸು ಓಡಿದ.

ಯಾರು ಹುಚ್ಚರು ಎನ್ನುವದೇ ತಿಳಿಯಲಿಲ್ಲ ತಿಂಮನಿಗೆ.



## ಕಾಲು ಜಾಡಿಸುವ ಗುರುಗಳು

ಬಹು ದಿನಗಳನಂತರ ತಿಂಮ ಗುರುಗಳೊಬ್ಬರ ಕಡೆಬಂದ. ತಿಂಮ ಹೊರಬಾಗಿಲಲ್ಲಿ ಬರುವದನ್ನು ಕಾಣುತ್ತಲೇ ಗುರುಗಳು ಸರಿಯಾಗಿ ಕುಳಿತು ಕಾಲು ಜಾಡಿಸಹತ್ತಿದರು. ತಿಂಮನಿಂದ ನಮಸ್ಕರಿಸಿಕೊಳ್ಳಲೇಬೇಕೆಂಬ ಹಟವೂ ಗುರುಗಳಲ್ಲಿ ಬಲವಾಯಿತು. ಇದನ್ನರಿತ ತಿಂಮ ಅಯ್ಯೋ ಪಾಪ! ಎಂದುಕೊಂಡು ಕಡೆಗೂ ಗುರುಗಳ ಕಾಲು ಹಿಡಿದ.

ಆನಂದದಿಂದ ಗುರುಗಳು ತಿಂಮನ ತಲೆಯಮೇಲೆ ಕೈ ಇಟ್ಟು ಕೊಂಚ ಕೆಣಿಕಿದರು.

" ಏನೋ ತಿಂಮಾ, ಅಂತೂ ನಮ್ಮ ಕಾಲು ಹಿಡಿದಿ ? "

" ದೊಡ್ಡವರು ಹೇಳಿಲ್ಲವೇ ಬುದ್ದಿ, ಕಷ್ಟ ಬಂದಾಗ ಕತ್ತೆಯ ಕಾಲನ್ನೂ ಹಿಡಿ ಎಂದು ? "

## ಎದುರು ಮನೆ ತಿಂಮ

ತಿಂಮನ ಪ್ರಗತಿ ಹೆಚ್ಚಾಯಿತು. ಹುಡುಗರೂ ಹಿರಿಯರೂ ಸೈ ಎಂದರು. ನಾಲ್ಕಾರು ಜನರ ಬಾಯಲ್ಲಿ ಹೊಗಳಿಸಿಕೊಂಡ. ಇದು ತಿಂಮನ ತಪ್ಪೋ ಎನ್ನುವಂತೆ ಹಲವು ಹೊಟ್ಟೇಕಿಚ್ಚಿನ ಜನರು ತಿಂಮನ ಮೇಲೆ ಗುರ್ರೆಂದರು. ತಿಂಮನ ಬಗ್ಗೆ ಜನರ ಪ್ರೇಮವು ಹೆಚ್ಚಿದಂತೆಲ್ಲ ಈ ಹಲವರ ದ್ವೇಷವು ಬೆಳೆದು, ತಿಂಮನ ಏರಿಕೆಯನ್ನು ಸಹಿಸಲಾರದೆ "ತಿಂಮ ಸಾಯಲಿ" ಎಂದರು.

ಅವರ ಮುಂದೆ ಕೈ ಜೋಡಿಸಿ ನಿಂತು ತಿಂಮ ಕೇಳಿಕೊಂಡ "ಎದುರು ಮನೆ ತಿಂಮ ಸಾಯಲಿ ಎನ್ನಬೇಡಿ ಸ್ವಾಮಿ. ನಿಮ್ಮ ಮನೆ ತಮ್ಮ ನಾಲ್ಕು ಕಾಲ ಸುಖವಾಗಿ ಬಾಳಲಿ."

## ತಿಂಮನ ಬಾಲ

ಕಾದು ಕುಳಿತಿರುವ ಹೊಲವನ್ನಾಗಲಿ, ಸೋರುವ ಮುರುಕು ಮಾಳಿಗೆಯನ್ನಾಗಲಿ ಅರಿಯದೆ ತನ್ನ ಕರ್ತವ್ಯವನ್ನು ತಾನು ಮಾಡುವ ಮಳೆಯಂತೆ, ತಿಂಮ ಜಗತ್ತಿನಲ್ಲಿ ಟೊಪ್ಪಿಗೆಗಳನ್ನು ಎಸೆಯುತ್ತ ನಡೆದ. ಹಲವರ ತಲೆಗೆ ಹಲವು ಟೊಪ್ಪಿಗೆಗಳು ಸರಿ ಹೋದವು. ತಮ್ಮ ತಲೆಯ ಅಳತೆಯ ಟೊಪ್ಪಿಗೆಗಳನ್ನೇ ಎಸೆದಿದ್ದಾನೆಂದು ಆ ಹಲವು ತಲೆಯಿಲ್ಲದವರು ಸಿಟ್ಟಿಗೆ ಬಂದು ತಿಂಮನಿಗೊಂದು ಬೆದರಿಕೆ ಹಾಕಿದರು.

"ನಿನ್ನ ಹಾವಳಿ ಹೆಚ್ಚಾಯಿತೋ ತಿಂಮಾ, ಹುಷಾರಾಗಿರು, ನಿನ್ನ ಬಾಲವನ್ನು ಕೊಯ್ಯುತ್ತೇವೆ ನೋಡು" ಎಂದರು.

"ತಾವು ಪರಪಾಟು ಮಾಡುತ್ತಿದ್ದೀರಿ ಸ್ವಾಮಿ, ಅದನ್ನೇಕೆ ಕೊಯ್ಯುತ್ತೀರಿ ಅನ್ಯಾಯವಾಗಿ? ಹಾವಳಿ ಮಾಡುತ್ತಿರುವದು ತಿಂಮನ ಬಾಲವಲ್ಲ, ತಿಂಮನ ತಲೆ" ಎಂದು ನುಡಿದು ಸಿಟ್ಟಿಗೆದ್ದವರ ಇಲ್ಲದ ತಲೆಯ ಮೇಲೆ ಕೈಯಾಡಿದ.